ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 24 ಶುಕ್ರವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 186 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ವರುಣ ಪೊಲೀಸ್ ಠಾಣಾ ವ್ಯಾಪ್ತಿಯ ಐಷಾರಾಮಿ ಬಂಗಲೆಯಲ್ಲಿ

ಭ್ರೂಣ ಲಿಂಗ ಪತ್ತೆ, ಹತ್ಯೆ ದಂಧೆ



ಭ್ರೂಣ ಪರೀಕ್ಷೆ ನಡೆಸಲಾಗುತ್ತಿದ್ದ ಐಷರಾಮಿ ಬಂಗಲೆ.

■ ಸಿನಿಮೀಯ ಶೈಲಿಯಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳ ಕಾರ್ಯಾಚರಣೆ ■ ನಾಲ್ವರ ಬಂಧನ; ಇಬ್ಬರಿಗೆ ಶೋಧ ■ ವರುಣಾ ಕ್ಷೇತ್ರ ವ್ಯಾಪ್ತಿ ಬನ್ನೂರು ರಸ್ತೆಯ ಹುನುಗನಹಳ್ಳಿ ಬಳಿ ಇರುವ ಬಂಗಲೆ ಮೇಲೆ ಅಧಿಕಾರಿಗಳು ದಿಢೀರ್ ದಾಳಿ ■ ಸ್ಕ್ಯಾನಿಂಗ್ ಯಂತ್ರ ಬಳಸಿ ಭ್ರೂಣ ಪತ್ತೆ; ಹೆಣ್ಣಾದರೆ ಹತ್ಯೆಗೆ ಮಾಡಿಕೊಂಡಿದ್ದ ಎಲ್ಲಾ ಅಕ್ರಮ ವ್ಯವಸ್ಥೆ ಬೆಳಕಿಗೆ ■ ಕಾರ್ಯಾಚರಣೆ ಪೂರ್ಣಗೊಂಡ ನಂತರವೇ ಪೊಲೀಸರಿಗೆ ವಿಷಯ ತಿಳಿಸಿದ ಆರೋಗ್ಯ ಅಧಿಕಾರಿಗಳು

ಮೈಸೂರು, ಅ.23(ಬಿಎಲ್‌ಯು)– ತಿ.ನರಸೀಪುರ ತಾಲೂಕು, ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿ, ಮೈಸೂರು–ಬನ್ನೂರು ರಸ್ತೆಯ ಐಷಾರಾಮಿ ಬಂಗಲೆಯೊಂದರಲ್ಲಿ ಹೆಣ್ಣು ಭ್ರೂಣ ಹತ್ಯೆ ಮೂಲಕ ಲಕ್ಷಾಂತರ ರೂಪಾಯಿ ಗಳಿಸುವ ದಂಧೆಯನ್ನು ಆರೋಗ್ಯ ಇಲಾಖೆಯ ಅಧಿಕಾರಿಗಳು ಬಯಲು ಮಾಡಿದ್ದಾರೆ. ಕಾರ್ಯಾಚರಣೆ ವೇಳೆ ಹೀಗೆ ಭ್ರೂಣ ಹತ್ಯೆ ಮಾಡುತ್ತಿದ್ದ ಖಾಸಗಿ ಆಸ್ಪತ್ರೆಯ ನರ್ಸ್, ಏಜೆಂಟ್ ಸೇರಿದಂತೆ ಏಳು ಮಂದಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ಲಕ್ಷಾಂತರ ರೂ. ಹಣ ವಶ ಪಡಿಸಿಕೊಂಡಿದ್ದಾರೆ. ■ 6ನೇ ಪುಟಕ್ಕೆ




ಶ್ಯಾಮಲಾ



ಗೋವಿಂದರಾಜು

ಐಷಾರಾಮಿ ಬಂಗಲೆ; ಸುತ್ತಲೂ 10 ಅಡಿ ಎತ್ತರದ ಕಾಂಪೌಂಡ್

ಸಿಲಿಕಾನ್ ಸಿಟಿ ಬೆಂಗಳೂರಿನ ಡಾಲರ್ಸ್ ಕಾಲೋನಿ ಮಾದರಿಯ ಐಷಾರಾಮಿ ಬಂಗಲೆಯಲ್ಲಿ ನಡೆಯುತ್ತಿದ್ದ ಅಕ್ರಮ ದಂಧೆ ಬಗ್ಗೆ ಸುತ್ತಮುತ್ತಲ ಯಾರಿಗೂ ಅರಿವಿಲ್ಲ. ಮೈಸೂರಿನ ಬನ್ನೂರು ರಸ್ತೆಯ ಹುನುಗನಹಳ್ಳಿಯಿಂದ ಒಂದು ಕಿಲೋ ಮೀಟರ್ ದೂರದಲ್ಲಿ ಈ ಬಂಗಲೆ ಇದೆ. ಸುತ್ತಲೂ ಹತ್ತು ಅಡಿ ಕಾಂಪೌಂಡ್ ಇದ್ದು, ಒಳಗಿನ ಚಟುವಟಿಕೆಗಳು ಯಾರಿಗೂ ಕಾಣದಂತೆ ರಹಸ್ಯ ಕಾಪಾಡಲಾಗಿತ್ತು. ಸ್ಕ್ಯಾನಿಂಗ್ ಯಂತ್ರವಲ್ಲದೆ ಭ್ರೂಣ ಹತ್ಯೆಗೆ ಅವಶ್ಯವಿರುವ ಪರಿಕರಗಳು ಪತ್ತೆಯಾಗಿವೆ. ವೈದ್ಯಕೀಯ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕೆಂಬ ನಿಯಮವಿದೆ. ಆದರೆ ಇಲ್ಲಿ ಯಾವುದೇ ನಿಯಮ ಪಾಲಿಸಿಲ್ಲ. ತ್ಯಾಜ್ಯವನ್ನು ಮನೆ ಮುಂದೆಯೇ ವಿಲೇವಾರಿ ಮಾಡಿದ್ದಾರೆ. ಕೃತ್ಯಕ್ಕೆ ಬಳಸಿದ ಸಿರಿಂಜ್, ಔಷಧಿ ಸೇರಿದಂತೆ ಇತರೆ ವಸ್ತುಗಳನ್ನು ಅಲ್ಲಲ್ಲಿ ಸುಟ್ಟು ಹಾಕಲಾಗಿದೆ.



ವಶಪಡಿಸಿಕೊಂಡ ನಗದು.

ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜಕೀಯ ಸಂಧ್ಯಾಕಾಲ!

ಸತೀಶ್ ಜಾರಕಿಹೊಳಿ ಉತ್ತರಾಧಿಕಾರಿ!!

• ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಡಾ. ಯತೀಂದ್ರ ಭವಿಷ್ಯ • ರಾಜ್ಯ ರಾಜಕೀಯದಲ್ಲಿ ಮತ್ತೊಂದು ಹೊಸ ಸಂಚಲನಕ್ಕೆ ನಾಂದಿ • ಸಿದ್ದರಾಮಯ್ಯ ಅಧಿಕಾರ ಪೂರ್ಣಗೊಳಿಸಿದ ಬಳಿಕ ಸತೀಶ್ ಅವರೇ ನಮ್ಮ ನಾಯಕರಾಗಬೇಕು!

ಬೆಂಗಳೂರು, ಅ.23(ಕೆಎಂಶಿ)– ತಂದೆಯವರು ರಾಜಕೀಯ ಸಂಧ್ಯಾಕಾಲದಲ್ಲಿದ್ದು ಪರ್ಯಾಯವಾಗಿ ಸಚಿವ ಸತೀಶ್ ಜಾರಕಿಹೊಳಿ ನಮ್ಮನ್ನು ಮುನ್ನಡೆಸಲಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯರ ಪುತ್ರ ಡಾ.ಯತೀಂದ್ರ ಭವಿಷ್ಯ ನುಡಿದಿದ್ದು, ರಾಜ್ಯ ರಾಜಕೀಯದಲ್ಲಿ ಮತ್ತೊಮ್ಮೆ ಸಂಚಲನ ಸೃಷ್ಟಿಸಿದೆ.



ಡಾ.ಯತೀಂದ್ರ

ನವೆಂಬರ್‌ನಲ್ಲಿ ಕರ್ನಾಟಕ ಕಾಂಗ್ರೆಸ್‌ನಲ್ಲಿ ಕ್ರಾಂತಿ ಉಂಟಾಗುತ್ತದೆ ಎಂಬ ಹೇಳಿಕೆಗಳ ಬೆನ್ನಲ್ಲೇ ಡಾ. ಯತೀಂದ್ರ ಇಂತಹ ಮಾತುಗಳನ್ನಾಡಿರುವುದು ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿದೆ. ಡಾ.ಯತೀಂದ್ರ ಹೇಳಿಕೆಯನ್ನು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸೇರಿದಂತೆ ಆಡಳಿತ ಪಕ್ಷದ ಕೆಲವು ಸಚಿವರು ಮತ್ತು ನಾಯಕರು ಸಮರ್ಥಿಸಿಕೊಂಡಿದ್ದಾರೆ.



ಸಿದ್ದರಾಮಯ್ಯ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಗಾದಿಗೇರಲು ತಮ್ಮ ರಾಜಕೀಯ ದಾಳಗಳನ್ನು ಹೂಡುತ್ತಿರುವ ಬೆನ್ನಲ್ಲೇ ■ 6ನೇ ಪುಟಕ್ಕೆ



ಸತೀಶ್ ಜಾರಕಿಹೊಳಿ

■ ಪ್ರಿಯಾಂಕ್ ಖರ್ಗೆ ಮುಂದಿನ ಉಪ ಮುಖ್ಯಮಂತ್ರಿ ಪು–3

■ ಎಳಸು ಸ್ಟೇಟ್‌ಮೆಂಟ್ ಕೊಡಬಾರದು...! ಪು–3

■ ನಾಯಕತ್ವ ವಿಚಾರದಲ್ಲಿ ಶಾಸಕರು, ವರಿಷ್ಠರ ತೀರ್ಮಾನವೇ ಅಂತಿಮ ಪು–3

■ ಕಂಡ ಕಂಡ ದೇವರಿಗೆ ಹರಕೆ ಹೊರುವ ಬದಲು ಇಟಲಿ ದೇವಾಲಯಕ್ಕೆ ಕಪ್ಪ–ಕಾಣಿಕೆ ಸಲ್ಲಿಸಿದರೆ ಸಿಎಂ ಆಗಬಹುದು ಪು–3

ಶಕ್ತಿದೇವತೆ ಹಾಸನಾಂಬೆ ಜಾತ್ರೆಗೆ ವಿಧ್ಯುಕ್ತ ತೆರೆ; ಶಾಸ್ತ್ರೋಕ್ತವಾಗಿ ಗರ್ಭಗುಡಿ ಬಾಗಿಲು ಬಂದ್

ಮತ್ತೇ 2026ರ ಅಕ್ಟೋಬರ್ 29ರಿಂದ ನವೆಂಬರ್ 11ರವರೆಗೆ ದೇವಿ ದರ್ಶನ

ಹಾಸನ, ಅ.23– ವರ್ಷಕ್ಕೊಮ್ಮೆ ಮಾತ್ರ ದರ್ಶನ ಕರುಣಿಸುವ ಶಕ್ತಿ ದೇವತೆ, ಹಾಸನದ ಅಧಿದೇವತೆ ಹಾಸನಾಂಬೆ ದೇವಿ ಗರ್ಭಗುಡಿ ಬಾಗಿಲು ಗುರುವಾರ ಶಾಸ್ತ್ರೋಕ್ತವಾಗಿ ಬಂದ್ ಆಗಿದೆ.

ಪ್ರಧಾನ ಅರ್ಚಕ ನಾಗರಾಜ್ ನೇತೃತ್ವದಲ್ಲಿ ಅಂತಿಮ ಪೂಜೆ ನಡೆದಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರ ಸಮ್ಮುಖದಲ್ಲಿ ಗರ್ಭಗುಡಿಗೆ ಅರ್ಚಕರು ಬೀಗ ಹಾಕಿದರು. ಈ ಮೂಲಕ 15 ದಿನಗಳ ಕಾಲ ನಡೆದ ಹಾಸನಾಂಬೆ ಜಾತ್ರಾ ■ 6ನೇ ಪುಟಕ್ಕೆ



ಗರ್ಭಗುಡಿ ಬಾಗಿಲು ಮುಚ್ಚುತ್ತಿರುವುದು.

ಲಾರಿಯಿಂದ ಕಾರಿಗೆ ಡಿಕ್ಕಿ ಹೊಡೆಸಿ ಉದ್ಯಮಿ ಹತ್ಯೆಗೆ ಯತ್ನ





• ಸಿನಿಮೀಯ ಶೈಲಿಯಲ್ಲಿ ಅಟ್ಯಾಕ್, ಪವಾಡ ಸದೃಶ ರೀತಿ ಉದ್ಯಮಿ ಪಾರು • ಬೈಕಿಗೂ ಲಾರಿ ಡಿಕ್ಕಿ, ಸವಾರರು ಪಾರು • ಲಾರಿಗೆ ಸಿಲುಕಿದ ಬೈಕ್, ಆರೋಪಿಗಳು ಪರಾರಿ

ಮಡಿಕೇರಿ, ಅ.23– ಸಿನಿಮೀಯ ಶೈಲಿಯಲ್ಲಿ ಲಾರಿಯಿಂದ ಕಾರಿಗೆ ಡಿಕ್ಕಿ ಹೊಡೆಸಿ ಉದ್ಯಮಿಯ ಕೊಲೆಗೆ ಯತ್ನಿಸಿದ ಘಟನೆ ಸೋಮವಾರಪೇಟೆ ತಾಲೂಕಿನ ಕೊಡ್ಲಿಪೇಟೆಯಲ್ಲಿ ಸಂಭವಿಸಿದ್ದು ಈ ಭಾಗದ ಜನರನ್ನು ಬೆಚ್ಚಿ ಬೀಳಿಸಿದೆ.

ಕೊಡ್ಲಿಪೇಟೆಯ ಹ್ಯಾಂಡ್ ಪೋಸ್ಟ್‌ನಲ್ಲಿರುವ ಎಸ್.ಆರ್.ಪೆಟ್ರೋಲ್ ಬಂಕ್ ಮಾಲೀಕ, ಕೊಡ್ಲಿಪೇಟೆ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಜೆ.ಕೆ.ತೇಜಕುಮಾರ್ ಹತ್ಯೆ ಸಂಚಿನಿಂದ ಪಾರಾದ ಉದ್ಯಮಿ. ಜೆ.ಕೆ.ತೇಜಕುಮಾರ್ ಮಂಗಳವಾರ ರಾತ್ರಿ ತಮ್ಮ ಕಾರಿನಲ್ಲಿ ದೊಡ್ಡಕುಂದ ಗ್ರಾಮದ ಕಿರಿಕೊಡ್ಲಿ ರಸ್ತೆಯಲ್ಲಿರುವ ಮನೆಗೆ ತೆರಳುತ್ತಿದ್ದ ಸಂದರ್ಭದಲ್ಲಿ ಕೆರಗನಹಳ್ಳಿ ಗ್ರಾಮದ ರಮೇಶ್ ಮಾಲೀಕತ್ವದ ಲಾರಿ, ವೇಗವಾಗಿ ಕಾರಿಗೆ ಡಿಕ್ಕಿ ಹೊಡೆದಿದೆ. ■ 6ನೇ ಪುಟಕ್ಕೆ



ಜೆ.ಕೆ.ತೇಜಕುಮಾರ್

ನಾಳೆ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಕುರಿತು ವಿಚಾರಗೋಷ್ಠಿ

ಮೈಸೂರು,ಅ.23(ಜಿಎ)–ಜಾಗೃತ ಕರ್ನಾಟಕ ಸಂಘಟನೆ, ದಲಿತ ವಿದ್ಯಾರ್ಥಿ ಒಕ್ಕೂಟ , ಮೈಸೂರು ವಿವಿ ಸಂಶೋಧಕರ ಸಂಘ ಮತ್ತು ಬಿಸಿಎಂ ಹಿರಿಯ ವಿದ್ಯಾರ್ಥಿಗಳ ಸಹಯೋಗದೊಂದಿಗೆ ಅ.25ರಂದು ಬೆಳಗ್ಗೆ 10–30ಕ್ಕೆ ಮೈಸೂರು ವಿವಿಯ ಸೆನೆಟ್ ಸಭಾಂಗಣದಲ್ಲಿ ಕರ್ನಾಟಕ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಕುರಿತ 'ಜಾರಿಯ ಹಿನ್ನೆಲೆ, ಅನುಷ್ಠಾನದ ಸವಾಲುಗಳು ಮತ್ತು ನಮ್ಮ ಪಾತ್ರ' ವಿಚಾರಗೋಷ್ಠಿ ಆಯೋಜಿಸಲಾಗಿದೆ ಎಂದು ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ತಿಳಿಸಿದರು.


ಕೆ.ಎಸ್.ಶಿವರಾಮು

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾಗೃತ ಕರ್ನಾಟಕ ಸಂಘಟನೆ ಕಾರ್ಯಕಾರಿ ಸಮಿತಿ ಸದಸ್ಯ ಡಾ.ಹೆಚ್.ವಿ. ವಾಸು ಮುಖ್ಯ ಭಾಷಣ ಮಾಡುವರು. ಸದಸ್ಯರಾದ ಜಿ.ಕೆ.ಮೋಹನ್ ಪ್ರಾಸ್ತಾವಿಕವಾಗಿ ಮಾತನಾಡುವರು. ಕರ್ನಾಟಕ ರಾಜ್ಯ ರೈತ ಸಂಘದ ರಾಜಾಧ್ಯಕ್ಷ ಬಡಗಲಪುರ ನಾಗೇಂದ್ರ, ಮಾಜಿ ಡಿವೈಎಸ್‌ಪಿ ಸುಹೇಲ್ ಅಹ್ಮದ್, ಚಿಂತಕಿ ಸವಿತಾ ಪ.ಮಲ್ಲೇಶ್, ದಮನಿತ ಸಮಾಜಗಳ ಜನಪರ ವೇದಿಕೆ ಅಧ್ಯಕ್ಷ ಜಿ.ಎಂ.ಗಾಡ್ಕರ್, ದಲಿತ ವಿದ್ಯಾರ್ಥಿಗಳ ಒಕ್ಕೂಟದ ಅಧ್ಯಕ್ಷ ಪುನೀತ್ ಅಲನಹಳ್ಳಿ, ಸಂಶೋಧಕರ ಸಂಘದ ಅಧ್ಯಕ್ಷ ವರಹಳ್ಳಿ ಆನಂದ್, ಬಿಸಿಎಂ ವಿದ್ಯಾರ್ಥಿ ಸಂಘದ ರಮೇಶ್ ಗೌಡ ಉಪಸ್ಥಿತರಿರಲಿದ್ದಾರೆ ಎಂದರು.

ಹಿಂದುಳಿದ ವರ್ಗಗಳ ಆಯೋಗ ಕೈಗೊಂಡಿರುವ ಸಮೀಕ್ಷೆ ವಿರುದ್ಧ ಅಪಪ್ರಚಾರ ನಡೆದಿದೆ. ಇದು ಜಾತಿ ಸಮೀಕ್ಷೆ ಎಂದು ಹಲವರು ತಪ್ಪು ಹಾದಿಗೆಳೆಯುತ್ತಿದ್ದಾರೆ. ದೇಶದಲ್ಲಿ ಬ್ರಿಟಿಷರು ನಡೆಸಿದ ಸಮೀಕ್ಷೆ ನಂತರ ಯಾವುದೇ ಸಮೀಕ್ಷೆ ನಡೆದಿಲ್ಲ. ಈ ಹಿಂದೆ 2015ರಲ್ಲಿ ಸಿದ್ದರಾಮಯ್ಯ ಅವರು ಸಮೀಕ್ಷೆ ನಡೆಸಲು ಕಾಂತರಾಜ್ ನೇತೃತ್ವದಲ್ಲಿ ಸಮೀಕ್ಷೆ ನಡೆದಿದ್ದರು. ಆದರೆ, ಅದು ಅಧಿಕೃತವಾಗಿ ಬಿಡುಗಡೆಯಾಗಲಿಲ್ಲ. ಈ ಹಿನ್ನೆಲೆಯಲ್ಲಿ ಈ ಬಾರಿ ಸಿದ್ದರಾಮಯ್ಯ ಅವರು ಮತ್ತೆ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಮಾಡುತ್ತಿದ್ದಾರೆ. ಅದನ್ನು ಕೆಲವರು ದಿಕ್ಕು ತಪ್ಪಿಸುತ್ತಿದ್ದಾರೆ. ಅದರ ಬಗ್ಗೆ ಕಿವಿಕೊಡದೇ ಸಮೀಕ್ಷೆಯಲ್ಲಿ ಎಲ್ಲರೂ ಪಾಲ್ಗೊಳ್ಳಿ ಎಂದು ಕರೆ ನೀಡಿದರು.

ಇನ್ಫೋಸಿಸ್ ಸುಧಾಮೂರ್ತಿ ಹಾಗೂ ನಾರಾಯಣ ಮೂರ್ತಿ ಸಹ ಸಮೀಕ್ಷೆ ಬಗ್ಗೆ ತಪ್ಪು ತಿಳುವಳಿಕೆ ಹೊಂದಿ ತಪ್ಪು ಸಂದೇಶ ನೀಡಿರುವುದು ಖಂಡನೀಯ. ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಿಂದಾಗಿ ರಾಜ್ಯದ ಜನತೆಯ ಸ್ಥಿತಿಗತಿ ತಿಳಿಯಲಿದೆ. ಈ ರೀತಿ ಸಮೀಕ್ಷೆ ಬಗ್ಗೆ ತಪ್ಪು ತಿಳಿದುಕೊಂಡಿರುವ ಹಿನ್ನೆಲೆಯಲ್ಲಿ ಅರಿವು ಮೂಡಿಸಲು ಈ ವಿಚಾರ ಸಂಕಿರಣ ಸಹಕಾರಿಯಾಗಲಿದೆ, ಆದ್ದರಿಂದ ಎಲ್ಲರೂ ಭಾಗವಹಿಸಿ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅಹಿಂದ ಜವರಪ್ಪ, ರವಿನಂದನ್, ಯೋಗೇಶ್ ಉಪ್ಪಾರ್, ಡಾ.ಬಿ.ಡಿ.ಮೋಹನ್, ಲೋಕೇಶ್ ಮಾದಾಪುರ ಉಪಸ್ಥಿತರಿದ್ದರು.

ಮೈಸೂರಿನ ಕಟ್ಟಡ ತ್ಯಾಜ್ಯ ವಿಲೇವಾರಿ, ನಿರ್ವಹಣಾ ಘಟಕ ಶೀಘ್ರ ಆರಂಭ

● ಹಂಚ್ಯಾ–ಸಾತಗಳ್ಳಿ ಬಳಿ 10 ಎಕರೆಯಲ್ಲಿ ಪಿಪಿಪಿ ಅಡಿ ಘಟಕ ಸ್ಥಾಪನೆ ● ಕಲ್ಲನ್ನು ಜಲ್ಲಿಯಾಗಿ, ಕಬ್ಬಿಣ, ಇಟ್ಟಿಗೆಯನ್ನು ಬೇರ್ಪಡಿಸಿ ಮರು ಬಳಕೆಗೆ ಅವಕಾಶ ● ಮೈಸೂರು ಪಾಲಿಕೆಯ ಈ ಕಾರ್ಯಕ್ಕೆ ಸಹಕರಿಸುವಂತೆ ಆಯುಕ್ತರ ಮನವಿ





ಸ್ಥಳೀಯರ ಸಹಕಾರ ಅಗತ್ಯ...!



"ಮೈಸೂರು ನಗರದ ಅಭಿವೃದ್ಧಿ ಹಾಗೂ ಸ್ವಚ್ಛತೆ ದೃಷ್ಟಿಯಿಂದ 'ಕಟ್ಟಡ ತ್ಯಾಜ್ಯ ನಿರ್ವಹಣಾ ಘಟಕ' ನಿರ್ಮಾಣ ಅಗತ್ಯವಾಗಿದೆ. ರಿಂಗ್ ರಸ್ತೆಯಲ್ಲಿ ಲೋಡ್ ಗಟ್ಟಲೆ ಬಿದ್ದಿರುವ ಕಟ್ಟಡ ತ್ಯಾಜ್ಯವನ್ನು ವಿಲೇವಾರಿ ಮಾಡಿ, ಮರು ಬಳಕೆ ಮಾಡಬೇಕಾದರೆ, ಘಟಕ ನಿರ್ಮಾಣವಾಗಬೇಕು. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಸ್ಥಳೀಯ ನಿವಾಸಿಗಳು ಸಹಕರಿಸಬೇಕು.

– ಶೇಕ್ ತನ್ವೀರ್ ಆಸಿಫ್, ಆಯುಕ್ತರು, ಮೈಸೂರು ಮಹಾನಗರಪಾಲಿಕೆ

ಮೈಸೂರು, ಅ.23(ಎಂಕೆ)– ಮೈಸೂರು ನಗರದ ಸುತ್ತಲಿನ ರಿಂಗ್‌ರಸ್ತೆ ಬದಿಯಲ್ಲಿ ಲೋಡ್ ಗಟ್ಟಲೆ ಸುರಿಯುತ್ತಿರುವ ಕಟ್ಟಡ ತ್ಯಾಜ್ಯದ ವಿಲೇವಾರಿ ಮತ್ತು ನಿರ್ವಹಣೆಗಾಗಿ ಮೈಸೂರು ನಗರಪಾಲಿಕೆ ಪ್ರತ್ಯೇಕವಾಗಿ 'ಕಟ್ಟಡ ತ್ಯಾಜ್ಯ ನಿರ್ವಹಣಾ ಘಟಕ' ಸ್ಥಾಪನೆಗೆ ನಿರ್ಧರಿಸಿದ್ದು, ವರ್ಕ್ ಆರ್ಡರ್‌ಗೂ ಚಾಲನೆ ನೀಡಿದೆ.

ರಿಂಗ್ ರಸ್ತೆ ಸಮೀಪದಲ್ಲಿರುವ ಮೈಸೂರು ಅಭಿವೃದ್ಧಿ ಪ್ರಾಧಿಕಾರ(ಎಂಡಿಎ)ದ ವ್ಯಾಪ್ತಿಗೆ ಒಳಪಡುವ ಹಂಚ್ಯಾ–ಸಾತಗಳ್ಳಿ 'ಎ' ವಲಯದಲ್ಲಿನ 10 ಎಕರೆ ಪ್ರದೇಶದಲ್ಲಿ 'ಕಟ್ಟಡ ತ್ಯಾಜ್ಯ ನಿರ್ವಹಣಾ ಘಟಕ' ನಿರ್ಮಾಣವಾಗಲಿದೆ. ಅಂದಾಜು 10 ಕೋಟಿ ರೂ.ವೆಚ್ಚದ ಯೋಜನೆ ಇದಾಗಿದ್ದು, ಎಲ್ಲಾ ಹಂತದ ಪ್ರಕ್ರಿಯೆಗಳನ್ನು ಮುಗಿಸಿ ಘಟಕದ ಸುತ್ತಲೂ ಫೆನ್ಸಿಂಗ್ ಅಳವಡಿಸಲಾಗಿದೆ.

ರಿಂಗ್‌ರೋಡ್‌ನ ಸರ್ವಿಸ್‌ರಸ್ತೆ ಹಾಗೂ ನಗರದ ವಿವಿಧೆಡೆ ಲೋಡ್‌ಗಟ್ಟಲೆ ಸುರಿಯುತ್ತಿದ್ದ ಕಟ್ಟಡ ತ್ಯಾಜ್ಯವನ್ನು ವಿಲೇವಾರಿ ಮಾಡಿ, ತ್ಯಾಜ್ಯದಲ್ಲಿರುವ ಇಟ್ಟಿಗೆ, ಕಲ್ಲು, ಕಬ್ಬಿಣವನ್ನು ಬೇರ್ಪಡಿಸಿ ಮರುಬಳಕೆ ಮಾಡುವ ಉದ್ದೇಶದೊಂದಿಗೆ ಘಟಕ ನಿರ್ಮಾಣಕ್ಕೆ ಪಾಲಿಕೆ ಮುಂದಾಗಿದೆ.

ಸಾರ್ವಜನಿಕ ಖಾಸಗಿ ಸಹಭಾಗಿತ್ವ(ಪಿಪಿಪಿ) ಮಾದರಿಯಡಿ 'ಕಟ್ಟಡ ತ್ಯಾಜ್ಯ ನಿರ್ವಹಣಾ ಘಟಕ' ನಡೆಯಲಿದ್ದು, ಯಂತ್ರೋಪಕರಣಗಳನ್ನು ಟೆಂಡರ್ ಮೂಲಕ ಪಡೆಯಲಾಗುವುದು. ತ್ಯಾಜ್ಯದ ಸಂಗ್ರಹಣೆಯಲ್ಲಿ ಬರುವ ಸಿಮೆಂಟ್ ಇಟ್ಟಿಗೆಗಳನ್ನು ಪುಡಿ ಮಾಡಿ ಗ್ರಾನೈಟ್ ಸಂಸ್ಥೆಯವರಿಗೆ ನೀಡುವುದು, ಕಲ್ಲುಗಳನ್ನು ಸಣ್ಣ ಜಲ್ಲಿಕಲ್ಲನ್ನಾಗಿಸಿ ಮಾರಾಟ ಮಾಡುವುದು ಹಾಗೂ ಮಣ್ಣನ್ನು ಅಗತ್ಯವಿದ್ದ ಕಡೆಗೆ ಸಾಗಿಸುವ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ.

ನಗರದಲ್ಲಿ ಎಲ್ಲಾ ಕಟ್ಟಡ ತ್ಯಾಜ್ಯವನ್ನು ಇಲ್ಲಿಗೆ ತಂದು ಡಂಪ್ ಮಾಡಲಾಗುವುದು. ನಂತರ ಕಲ್ಲು, ಮಣ್ಣು, ಇಟ್ಟಿಗೆ, ಕಬ್ಬಿಣವನ್ನು ಬೇರ್ಪಡಿಸಿ ಮರು ಬಳಕೆ ಮಾಡಲಾಗುವುದು. ಈಗಾಗಲೇ ಘಟಕ ಸ್ಥಾಪನೆಗೆ ವರ್ಕ್ ಆರ್ಡರ್ ನೀಡಿದ್ದು, ಘಟಕದ ಸುತ್ತಲೂ ಫೆನ್ಸಿಂಗ್ ಅಳವಡಿಸಲಾಗಿದೆ ಎಂದು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ದೊಡ್ಡ ಸಮಸ್ಯೆ ಬಗೆಹರಿಯಲಿದೆ: ಮೈಸೂರಿನ ಸ್ವಚ್ಛತೆ ದೃಷ್ಟಿಯಿಂದ ಕಟ್ಟಡ ತ್ಯಾಜ್ಯ ನಿರ್ವಹಣಾ ಘಟಕ ಅವಶ್ಯವಾಗಿದೆ. ಇದರಿಂದ ದೊಡ್ಡ ಸಮಸ್ಯೆ ಬಗೆಹರಿಯಲಿದೆ. ರಿಂಗ್ ರಸ್ತೆಯಲ್ಲಿ ಬಿದ್ದಿರುವ ಕಟ್ಟಡ ತ್ಯಾಜ್ಯದಿಂದ ಮೈಸೂರಿನ ಅಂದವೇ ಹಾಳಾಗುತ್ತಿದೆ. ಧೂಳಿನ ಪ್ರಮಾಣ ಹೆಚ್ಚಾಗುತ್ತಿದೆ. ಅಲ್ಲದೆ ಕಟ್ಟಡ ತ್ಯಾಜ್ಯವನ್ನು ಸುರಿಯುವವರ ಸಂಖ್ಯೆಯೂ ಹೆಚ್ಚಾಗುತ್ತಿದ್ದು, ಇದೆಲ್ಲಾ ಕಡಿವಾಣ ಹಾಕಬೇಕಾದರೆ ಘಟಕ ನಿರ್ಮಾಣವೇ ಸೂಕ್ತ ಮಾರ್ಗವಾಗಿದೆ ಎಂದು ಹೇಳಿದರು.

2021ರಲ್ಲೇ ಮುಡಾದಿಂದ ಮಂಜೂರು: 'ಕಟ್ಟಡ ತ್ಯಾಜ್ಯ ನಿರ್ವಹಣಾ ಘಟಕ' ನಿರ್ಮಾಣ ಉದ್ದೇಶದಿಂದ 2021ರಲ್ಲಿಯೇ 30 ವರ್ಷಗಳ ಅವಧಿಗೆ ಮುಡಾದಿಂದ ಪಾಲಿಕೆಗೆ ಆಸ್ತಿ ಮಂಜೂರು ಮಾಡಲಾಗಿದೆ. ಆದರೆ, ಸ್ಥಳೀಯ ಕೆಲ ನಿವಾಸಿಗಳಿಂದ ಘಟಕ ನಿರ್ಮಾಣ ವಿಳಂಬವಾಗಿದ್ದು, ಈಗ ಬಹುತೇಕ ಸಮಸ್ಯೆ ಬಗೆಹರಿದಿರುವುದರಿಂದ ಸದ್ಯದಲ್ಲಿಯೇ ನಿರ್ಮಾಣ ಕಾರ್ಯ ಆರಂಭವಾಗುವುದು ಎಂದು ಪಾಲಿಕೆ ಇಂಜಿನಿಯರೊಬ್ಬರು ತಿಳಿಸಿದರು.

ಅಭಿನಂದನೆ



ಮೈಸೂರು ಜಿಲ್ಲಾ ಸಹಕಾರಿ ಒಕ್ಕೂಟದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಅವರನ್ನು ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎನ್.ಯೋಗಾನಂದ್, ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ವಿ.ಮಧು, ಅಭಿನಂದಿಸಿದರು. ಈ ವೇಳೆ ಒಕ್ಕೂಟದ ಉಪಾಧ್ಯಕ್ಷ ಸದಾನಂದ್, ನಿರ್ದೇಶಕರಾದ ಕೆ.ಉಮಾಶಂಕರ್, ಕೆ.ಎಸ್.ಕುಮಾರ್, ಮೈಮುಲ್ ಮಾಜಿ ಅಧ್ಯಕ್ಷ ಪಿ.ಎಂ.ಪ್ರಸನ್ನ ಉಪಸ್ಥಿತರಿದ್ದರು.

ಎಟಿಐನಲ್ಲಿ ಅಬ್ದುಲ್ ನಜೀರ್ ಸಾಬ್ ಪುಣ್ಯಸ್ಮರಣೆ ಇಂದು

ಮೈಸೂರು,ಅ.23(ಜಿಎ)–ಜನತಾ ಪಕ್ಷದ ವತಿಯಿಂದ ಅ.24ರ ಬೆಳಗ್ಗೆ 10 ಗಂಟೆಗೆ ಮೈಸೂರು ತಿ.ನರಸೀಪುರ ರಸ್ತೆಯಲ್ಲಿರುವ ಆಡಳಿತ ತರಬೇತಿ ಸಂಸ್ಥೆಯ ಆವರಣದಲ್ಲಿ ಆಧುನಿಕ ಭಗೀರಥ ಎಂದೇ ಹೆಸರಾಗಿದ್ದ ಅಬ್ದುಲ್ ನಜೀರ್ ಸಾಬ್ ಅವರ 37ನೇ ಪುಣ್ಯಸ್ಮರಣೆ ಕಾರ್ಯಕ್ರಮ ಆಯೋಜಿಸಲಾಗಿದೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪಕ್ಷದ ರಾಜ್ಯ ಉಪಾಧ್ಯಕ್ಷ ಭಾಸ್ಕರ್ ಈ ವಿಷಯ ತಿಳಿಸಿ, ಕಾರ್ಯಕ್ರಮದಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಎಂ.ಎಸ್.ರಮೇಶ್, ರಾಜ್ಯ ಪ್ರಧಾನ ಕಾರ್ಯದರ್ಶಿ ಶಬ್ಬೀರ್ ಅಹಮ್ಮದ್ ಇನ್ನಿತರರು ಪಾಲ್ಗೊಳ್ಳುವರು. ಈ ವೇಳೆ ಸಂಸ್ಥೆ ಆವರಣದಲ್ಲಿನ ಅಬ್ದುಲ್ ನಜೀರ್ ಸಾಬ್ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುವುದು. ನಂತರ 11.30ಕ್ಕೆ ಪಿಡಬ್ಲ್ಯೂಡಿ ಅತಿಥಿಗೃಹದಲ್ಲಿ ಪಕ್ಷದ 40 ನೂತನ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ನೀಡಿ, ಪಕ್ಷದ ಸಂಘಟನೆ ಕುರಿತು ಚರ್ಚಿಸಲಾಗುತ್ತದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶಬ್ಬೀರ್ ಅಹಮ್ಮದ್, ಲಕ್ಷ್ಮಿನಾರಾಯಣ್, ಸೋಮಣ್ಣ, ಕೆ.ಮಾಣಿಕ್ಯ ಉಪಸ್ಥಿತರಿದರು.

ದೀಪಾವಳಿ ಕೊಂಡೋತ್ಸವ



ಮೈಸೂರಿನ ಕನ್ನೇಗೌಡನಕೊಪ್ಪಲು ಶ್ರೀ ಚಂದ್ರಮೌಳೇಶ್ವರ ದೇವಸ್ಥಾನದ ಮುಂಭಾಗ ದೀಪಾವಳಿ ಹಬ್ಬದಂದು ಜರುಗಿದ ಕೊಂಡೋತ್ಸವದಲ್ಲಿ ದೇವಸ್ಥಾನದ ಅಧ್ಯಕ್ಷರೂ ಆದ ಶಾಸಕ ಹರೀಶ್‌ಗೌಡ, ಶಿವಕುಮಾರ್, ರಾಮೇಗೌಡ, ಮಂಜುನಾಥ್, ಕುಮಾರ್, ಅಂಬಿ ಸೇರಿದಂತೆ ಗ್ರಾಮಸ್ಥರು ಪಾಲ್ಗೊಂಡಿದ್ದರು.

ಹಾವೇರಿಯಲ್ಲಿ ಹೋರಿ ಬೆದರಿಸುವ ಸ್ಪರ್ಧೆ: ಹೋರಿ ಗುದ್ದಿ ಮೂವರ ಸಾವು

ಹಾವೇರಿ,ಅ.23–ದೀಪಾವಳಿ ಹಬ್ಬದ ನಿಮಿತ್ತ ಬುಧವಾರ ಹಮ್ಮಿಕೊಂಡಿದ್ದ 'ಕೊಬ್ಬಿದ ಹೋರಿ ಬೆದರಿಸುವ ಸ್ಪರ್ಧೆ' ಹಾಗೂ ಹೋರಿಗಳ ಮೆರವಣಿಗೆಯಲ್ಲಿ ಹೋರಿ ಗುದ್ದಿ ಮೂವರು ಮೃತಪಟ್ಟಿರುವ ಘಟನೆ ಹಾವೇರಿ ಜಿಲ್ಲೆಯಲ್ಲಿ ನಡೆದಿದೆ. ದಾನೇಶ್ವರಿ ನಗರದ ಚಂದ್ರಶೇಖರ ಕೋಡಿಹಳ್ಳಿ (75) ಅವರು ಮನೆಗೆ ಹೊರಟಿದ್ದ ವೇಳೆ ಹಿಂದಿನಿಂದ ಬಂದ ಹೋರಿ ಹಾಯ್ದು ಸಾವನ್ನಪ್ಪಿದ್ದಾರೆ. ದೇವಿಹೊಸೂರು ಗ್ರಾಮದ ಘನಿಸಾಬ್ (75) ಎಂಬವರು ದನ ಬೆದರಿಸುವ ಸ್ಪರ್ಧೆಯ ವೇಳೆ ಹೋರಿ ತಿವಿದು ಸಾವನ್ನಪ್ಪಿದ್ದಾರೆ. ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಹೋರಿ ಮನೆಗೆ ನುಗ್ಗಿದೆ. ಮನೆ ಕಟ್ಟೆ ಮೇಲೆ ಕುಳಿತಿದ್ದ ಘನಿಸಾಬಗೆ ಹೋರಿ ತಿವಿದಿದೆ.



ಹಾನಗಲ್ ತಾಲೂಕಿನ ತಿಳವಳ್ಳಿಯಲ್ಲಿ ಹೋರಿ ತಿವಿದು ಯುವಕ ಸಾವನ್ನಪ್ಪಿದ್ದಾನೆ. ಸಂಜೆ ತಿಳವಳ್ಳಿ ಸಮೀಪದ ದುರ್ಗಾಂಬಿಕಾ ದಾಬಾ ಬಳಿ ಘಟನೆ ನಡೆದಿದೆ. ಗಾಯಾಳು ಭರತ್ ರಾಮಪ್ಪ ಹಿಂಗಮೇರಿ (24) ಅವರನ್ನು ಹಾವೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಿಸಲಿಲ್ಲ ಎಂದು ತಿಳಿದುಬಂದಿದೆ.

ವೀರಭದ್ರೇಶ್ವರ ದೇವಸ್ಥಾನದ ರಥೋತ್ಸವ ಪ್ರತಿವರ್ಷ ದೀಪಾವಳಿಯಂದು ನಡೆಯುತ್ತದೆ. ಜಾತ್ರಾ ಸಮಿತಿ ಬಲಿಪಾಡ್ಯಮಿ ದಿನ ದನ ಬೆದರಿಸುವ ಸ್ಪರ್ಧೆ ಆಯೋಜಿಸುತ್ತದೆ. ಸ್ಪರ್ಧೆಯಲ್ಲಿ ಯಾವುದೇ ಬಹುಮಾನ ಇರುವುದಿಲ್ಲ. ಸ್ಪರ್ಧೆ ನಡೆದ ನಂತರ ಬೇರೆ ಕಡೆ ಸ್ಪರ್ಧೆಗಳಲ್ಲಿ ಹೋರಿಗಳಿಗೆ ಬಹುಮಾನ ನೀಡಲಾಗುತ್ತದೆ. ಈ ವರ್ಷದ ಸ್ಪರ್ಧೆ ಬುಧವಾರ ಮಧ್ಯಾಹ್ನ ನಡೆಯಿತು. ಹಾವೇರಿ ನಗರ ಸೇರಿದಂತೆ ಅಕ್ಕಪಕ್ಕದ ಗ್ರಾಮಗಳಿಂದ ರೈತರು ತಮ್ಮ ನೆಚ್ಚಿನ ಹೋರಿಗಳನ್ನು ಸ್ಪರ್ಧೆಗೆ ಕರೆತಂದಿದ್ದರು. ಸುಮಾರು 300ಕ್ಕೂ ಅಧಿಕ ಕೊಬ್ಬರಿ ಹೋರಿಗಳು ಭಾಗಿಯಾಗಿದ್ದವು.

ಪರಸ್ಪರ ಬೈಕ್‌ಗಳು ಡಿಕ್ಕಿ: ಓರ್ವ ಸಾವು

ಮೈಸೂರು, ಅ.23(ಎಂಟಿವೈ)– ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಸಮೀಪದ ರಾಂಪುರ–ಗೌಡರಹುಂಡಿ ಕ್ರಾಸ್‌ನಲ್ಲಿ ಎರಡು ಬೈಕ್‌ಗಳ ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಲ್ಲಿ ಸವಾರರೊಬ್ಬರು ಮೃತಪಟ್ಟಿದ್ದಾರೆ.


ಚಿಕ್ಕೇಗೌಡ

ಚಿಕ್ಕಯ್ಯನಛತ್ರ ಹೋಬಳಿಯ ಅಹಲ್ಯ ಗ್ರಾಮದ ಚಿಕ್ಕೇಗೌಡ(50) ಮೃತಪಟ್ಟಿದ್ದಾರೆ. ಚಿಕ್ಕೇಗೌಡ ಅವರು ಬುಧವಾರ ಕೆಲಸ ಮುಗಿಸಿಕೊಂಡು ಸ್ವಗ್ರಾಮಕ್ಕೆ ತಮ್ಮ ಬೈಕ್‌ನಲ್ಲಿ ತೆರಳುತ್ತಿದ್ದರು. ಈ ವೇಳೆ ರಾಂಪುರ–ಗೌಡರಹುಂಡಿ ಕ್ರಾಸ್‌ನಲ್ಲಿ ವೇಗವಾಗಿ ಬಂದ ಹತ್ವಾಳು ಗ್ರಾಮದ ಸೋಮೇಶ್(35), ಚಿಕ್ಕೇಗೌಡ ಅವರ ಬೈಕ್‌ಗೆ ಡಿಕ್ಕಿ ಹೊಡೆದಿದ್ದಾರೆ. ಪರಿಣಾಮ ಚಿಕ್ಕೇಗೌಡ ಅವರ ತಲೆ, ಕಾಲು ಹಾಗೂ ಭುಜಕ್ಕೆ ತೀವ್ರ ಪೆಟ್ಟಾಗಿ ಗಾಯಗೊಂಡಿದ್ದರು. ಕೂಡಲೇ ಸ್ಥಳೀಯರ ಸಹಾಯದಿಂದ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಚಿಕಿತ್ಸೆಗೆ ಸ್ಪಂದಿಸದೆ ಚಿಕ್ಕೇಗೌಡ ಅವರು ಬುಧವಾರ ರಾತ್ರಿ ಮೃತಪಟ್ಟರು. ಮೈಸೂರಿನ ಕೆ.ಆರ್.ಆಸ್ಪತ್ರೆಯ ಶವಾಗಾರದಲ್ಲಿ ಮೃತದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಿ, ವಾರಸುದಾರರಿಗೆ ಹಸ್ತಾಂತರಿಸಲಾಯಿತು. ಈ ಸಂಬಂಧ ಹುಲ್ಲಹಳ್ಳಿ ಠಾಣೆಯಲ್ಲಿ ದೂರು ದಾಖಲಾಗಿದೆ.

ಬಂಬೂಬಜಾರ್‌ನಲ್ಲಿ ರೌಡಿಗಳ ಮಾರಾಮಾರಿ

ಮೈಸೂರು,ಅ.23(ಬಿಎಲ್‌ಯು)–ಮೈಸೂರಿನ ಬಂಬೂ ಬಜಾರ್‌ನಲ್ಲಿ ರೌಡಿಗಳು ಮಾರಾಮಾರಿ ನಡೆಸಿರುವ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ತಡವಾಗಿ ವೈರಲ್ ಆಗಿದೆ. ಹಣಕಾಸಿನ ವಿಚಾರಕ್ಕೆ ಸಂಬಂಧಿಸಿದಂತೆ ರೌಡಿಗಳ ನಡುವೆ ಮಾತಿನ ಚಕಮಕಿ ನಡೆದಿದೆ. ಇದು ಅತಿರೇಕಕ್ಕೆ ಹೋದಾಗ ಮಾರಕಾಸ್ತ್ರಗಳಿಂದ ಹೊಡೆದಾಡಿಕೊಂಡಿದ್ದಾರೆ.




ಈ ವಿಚಾರ ತಿಳಿದು ಸ್ಥಳಕ್ಕೆ ಬಂದ ನಗರದ ಮಂಡಿ ಠಾಣೆ ಪೊಲೀಸರು ವಿಘ್ನೇಶ್, ಹರ್ಷ ಹಾಗೂ ಧರ್ಮನನ್ನು ಬಂಧಿಸಿದ್ದಾರೆ. ಆದರೆ ಮತ್ತೊಬ್ಬ ತಲೆಮರೆಸಿಕೊಂಡಿದ್ದಾನೆ. ಈ ಪ್ರಕರಣ ನಡೆದು ಹಲವು ದಿನಗಳಾಗಿದ್ದು, ವಿಡಿಯೋ ತುಣಕು ಸೋಷಿಯಲ್ ಮೀಡಿಯಾದಲ್ಲಿ ಈಗ ವೈರಲ್ ಆಗಿದೆ.

ನಿಧನ

ಸಂಸದ ಯದುವೀರ್ ಅಜ್ಜ ಗೋಪಾಲರಾಜೇ ಅರಸ್

ಮೈಸೂರು, ಅ.23– ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಅಜ್ಜ ಗೋಪಾಲರಾಜೇ ಅರಸ್(93) ಇಂದು ಮುಂಜಾನೆ ವಯೋಸಹಜ ಅನಾರೋಗ್ಯ ದಿಂದ ನಿಧನರಾದರು.



ಮೈಸೂರು ಲಕ್ಷ್ಮೀಪುರಂ ನಿವಾಸಿಯಾಗಿದ್ದು, ಇವರು ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು, ಅಪಾರ ಬಂಧು–ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಮಧ್ಯಾಹ್ನ ನಂಜನಗೂಡು ರಸ್ತೆಯ ಅರಸು ರುದ್ರಭೂಮಿ ಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅಂತ್ಯಕ್ರಿಯೆಯಲ್ಲಿ ಕುಟುಂಬಸ್ಥರು ಸ್ನೇಹಿತರು, ಹಿತೈಷಿಗಳು ಭಾಗಿಯಾಗಿದ್ದರು. ಇವರು, ಯದುವೀರ್ ಅವರ ಪೂರ್ವಾಶ್ರಮದ ತಂದೆ ಸ್ವರೂಪ ಗೋಪಾಲರಾಜ್ ಅರಸ್ ಅವರ ತಂದೆ.

ಡಿ.ಅನಿಲ್‌ಕುಮಾರ್



ಮೈಸೂರು, ಅ.23– ಮೈಸೂರು ವಿಶ್ವವಿದ್ಯಾನಿಲಯದ ಸಹಾಯಕ ಹಣಕಾಸು ಅಧಿಕಾರಿ ಡಿ.ಅನಿಲ್‌ಕುಮಾರ್(56) ಇಂದು ಬೆಳಗ್ಗೆ ತೀವ್ರ ಹೃದಯಾಘಾತದಿಂದ ನಿಧನರಾದರು. ಇವರು ಯಾದವಗಿರಿ ನಿವಾಸಿ. ಮೃತರು ಪತ್ನಿ, ಪುತ್ರ, ಪುತ್ರಿ, ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಸಂಜೆ ಬನ್ನಿಮಂಟಪದ ಜೋಡಿ ತೆಂಗಿನಮರ ಸ್ಮಶಾನದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.10.2025 ಶುಕ್ರವಾರ, ಮಳೆ ನಕ್ಷತ್ರ: ಸ್ವಾತಿ 24.10.2025ರಿಂದ 05.11.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಅನುರಾಧ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಲಕ್ವ/ಪ್ಯಾರಾಲಿಸಿಸ್, ಕಾರ್ನಿಯಾದ ಅಪಾರ ದರ್ಶಕತೆ/ಕಣ್ಣಿನ ಹೂ (ಕಾರ್ನಿಯಲ್ ಒಪೇಸಿಟಿ)ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಹಿಳಾ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭಸಂಸ್ಕಾರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್ :** ನಜರ್‌ಬಾದ್‌ನ ಕುಪ್ಪಣ್ಣ ಪಾರ್ಕ್ ಹತ್ತಿರವಿರುವ ಶ್ರೀವಾಣಿ ವಿಲಾಸ ಅರಸು ಎಜುಕೇಷನ್ ಇನ್ಸ್‌ಟಿಟ್ಯೂಷನ್‌ನಲ್ಲಿ ಬೆಳಗ್ಗೆ 10.30ಕ್ಕೆ ನೂತನ ಆಡಿಟೋರಿಯಂ ಉದ್ಘಾಟನಾ ಸಮಾರಂಭ, ಉದ್ಘಾಟನೆ : ನಗರ ಪೊಲೀಸ್ ಆಯುಕ್ತೆ ಶ್ರೀಮತಿ ಸೀಮಾ ಲಾಟ್ಕರ್, ಉಪಸ್ಥಿತರು : ಶ್ರೀಮತಿ ಪ್ರಮೋದಾದೇವಿ ಒಡೆಯರ್, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಹಿರಿಯ ಪತ್ರಕರ್ತ ಗೌರಿ ಸತ್ಯ, ಮಧ್ಯಾಹ್ನ 3.30ಕ್ಕೆ ಶ್ರೀ ಮನ್ಮಹಾರಾಜ ಹತ್ತನೇ ಶ್ರೀ ಚಾಮರಾಜ ಒಡೆಯರ್ ಪ್ರತಿಮೆ ಅನಾವರಣ, ಉಪಸ್ಥಿತರು : ಶ್ರೀಮತಿ ಪ್ರಮೋದಾದೇವಿ ಒಡೆಯರ್, ನಿವೃತ್ತ ಸಹಪ್ರಾಧ್ಯಾಪಕಿ ಡಾ. ಬಿ.ವಿ. ಸುಧಾಮಣಿ, ಅಧ್ಯಕ್ಷತೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸ್ಥಳ: ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್ ಆವರಣ.

■ **ಕನ್ನಡ ಜಾನಪದ ಪರಿಷತ್, ಮೈಸೂರು ವಿಶ್ವವಿದ್ಯಾನಿಲಯದ ಲಲಿತಕಲಾ ಕಾಲೇಜು, ಮಾನಸಗಂಗೋತ್ರಿ** : ಮೈಸೂರು ಜಿಲ್ಲಾ ಜಾನಪದ ಪ್ರಪಂಚ ಪ್ರಶಸ್ತಿ ಹಾಗೂ ಮೈಸೂರಿನ ಹೆಸರಾಂತ ಜಾನಪದ ಸಂಸ್ಥೆಯಾದ ಶ್ರೀ ಬನ್ನಿಕಾಳೇಶ್ವರಿ ಜಾನಪದ ಕಲಾತಂಡ, ಮೈಸೂರು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಜೋಗಿಕುಮಾರ್ ಅವರಿಗೆ ಮೈಸೂರು ಜಿಲ್ಲಾ ಯುವ ಜಾನಪದ ಪ್ರಪಂಚ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಮಾಜಿ ಶಾಸಕ ಹೆಚ್. ಪಿ. ಮಂಜುನಾಥ್, ಕನ್ನಡ ಜಾನಪದ ಪರಿಷತ್ ರಾಜ್ಯಾಧ್ಯಕ್ಷ ಎಸ್. ಬಾಲಾಜಿ, ಮಾಜಿ ಸಚಿವ ಎಂ ಶಿವಣ್ಣ, ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ನಾಗರಾಜ್ ಬೈರಿ, ಸ್ಥಳ: ಲಲಿತಕಲಾ ಕಾಲೇಜು ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಮೈಸೂರು ರಾಯಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಂಆರ್‌ಐಟಿ) ಕಾಲೇಜು :** ಸಂವಹನ, ಕಂಪ್ಯೂಟರ್ ಮತ್ತು ಮಾಹಿತಿ ತಂತ್ರಜ್ಞಾನ ಅಂತರರಾಷ್ಟ್ರೀಯ ಸಮ್ಮೇಳನ, ಉದ್ಘಾಟನೆ : ವಿಟಿಯು ಕುಲಪತಿ ಡಾ.ಎಸ್.ವಿದ್ಯಾಶಂಕರ್, ಗೌರವ ಅತಿಥಿಗಳು : ಯೂರೋಪಿನ ರೊಸ್ಸನ ಕ್ಯಾಪುಟೊ, ಬರ್ನಾಡ್ ಮಲಿಯಾ, ಎನ್‌ಎಂಐಟಿಯ ಡಾ.ಬಿ.ಡಿ. ಪರಮೇಶಚಾರಿ, ಎಂಐಟಿ ಡೀನ್ ಡಾ.ರವಿಚಂದ್ರ ಕುಲಕರ್ಣಿ, ಅಧ್ಯಕ್ಷತೆ : ಎಂಆರ್‌ಐಟಿ ಅಧ್ಯಕ್ಷ ಡಾ.ಚಂದನ ವಿದ್ಯಾಶಂಕರ್, ಕಾರ್ಯದರ್ಶಿ ನಂದಿನಿ ಎನ್.ಮೂರ್ತಿ, ಖಜಾಂಚಿ ಡಾ.ರಾಮಲಿಂಗಯ್ಯ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಭಾರತೀಯ ಭಾಷಾ ಸಂಸ್ಥಾನ :** ಡಾ. ಎಂ.ಎಂ. ಕಲಬುರ್ಗಿ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಡಾ. ಎನ್.ಕೆ. ಲೋಲಾಕ್ಷಿ, ಪ್ರಶಸ್ತಿ ಪುರಸ್ಕೃತರು : ಹಿರಿಯ ಸಂಶೋಧಕ ಡಾ. ಎನ್.ಎಸ್. ತಾರಾನಾಥ, ಪ್ರಶಸ್ತಿ ಪ್ರದಾನ : ಹಿರಿಯ ವಿದ್ವಾಂಸ ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ, ಅಭಿನಂದನಾ ನುಡಿ : ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಯೋಜನಾ ನಿರ್ದೇಶಕ ಡಾ. ಎನ್.ಎಂ. ತಳವಾರ, ಉಪಸ್ಥಿತರು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಡಾ. ಎಂ.ಎಂ. ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನ ಸದಸ್ಯರಾದ ಡಾ. ಸಿದ್ದನಗೌಡ ಪಾಟೀಲ, ವಿಜಯ ಎಂ. ಕಲಬುರ್ಗಿ, ಸ್ಥಳ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

■ **ಅನ್ನಪೂರ್ಣ ಕಣ್ಣಿನ ಆಸ್ಪತ್ರೆ :** ದೀಪಾವಳಿ ಹಬ್ಬದ ಪ್ರಯುಕ್ತ ಹಿರಿಯ ನಾಗರಿಕರಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಶಾರದಾದೇವಿನಗರ, ಬೆಳಗ್ಗೆ 10 ರಿಂದ ಸಂಜೆ 6ರವರೆಗೆ

■ **ಜನತಾ ಪಕ್ಷ :** ಆಧುನಿಕ ಭಗೀರಥ ಅಬ್ದುಲ್ ನಜೀರ್‌ಸಾಬ್‌ರವರ 37ನೇ ಪುಣ್ಯಸ್ಮರಣೆ, ಸ್ಥಳ: ಅಡ್ಮಿನಿಸ್ಟ್ರೇಟಿವ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಕ್ಯಾಂಪಸ್, ಲಲಿತ ಮಹಲ್ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು** : ಮೈಸೂರು ಜಿಲ್ಲೆಯ ಪರಿಸರ ಸಂರಕ್ಷಣೆಯಲ್ಲಿ ಸರ್ಕಾರ ಹಾಗೂ ಸಾರ್ವಜನಿಕರ ಪಾಲ್ಗೊಳ್ಳುವಿಕೆ ಕುರಿತು ಸಮಾಲೋಚನಾ ಸಭೆ, ಉದ್ಘಾಟನೆ : ಜಿಪಂ ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ, ಅಧ್ಯಕ್ಷತೆ : ಜೆಎಸ್‌ಎಸ್ ಕಾಲೇಜು ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ, ಮುಖ್ಯ ಅತಿಥಿಗಳು : ಸಾಹಿತಿ ಶ್ರೀಮತಿ ಕುಸುಮ ಆಯರಹಳ್ಳಿ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಶ್ರೀಮತಿ ವೈ.ಎನ್. ಮಮತ, ಸಹಾಯಕ ಕೃಷಿ ನಿರ್ದೇಶಕ ಬಿ.ಡಿ. ಜಯರಾಮ್, ಸ್ಥಳ: ಜೆಎಸ್‌ಎಸ್ ಕಾಲೇಜು ಸೆಮಿನಾರ್ ಹಾಲ್, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸ್ವಾತಂತ್ರ್ಯ ದೀಪ ಸ್ವರಾಜ್ಯ ಸೇನಾನಿಗಳ ಕುರಿತ ಬಾನುಲಿ ಸರಣಿ, ಪ್ರಸ್ತುತಿ : ನಿತೀಶ್ ಡಂಬಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರೀ ಹಾಗೂ ಟಿ.ಎಸ್. ಸ್ನೇಹಾ, ವ್ಯಾಖ್ಯಾನ–ಡಾ. ಹೆಚ್. ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.05 ಸ್ತನ ಕ್ಯಾನ್ಸರ್ ಕುರಿತು ಜಾಗೃತಿ –ಪ್ರಾಯೋಜಿತ ಕಾರ್ಯಕ್ರಮ, 9.10 ನಮ್ಮ ಆರೋಗ್ಯ–ವಿಶ್ವ ಆಸ್ಟಿಯೋಪೊರೋಸಿಸ್ ದಿನಾಚರಣೆಯ ಸಂದರ್ಭದಲ್ಲಿ ಆಸ್ಟಿಯೋಪೊರೋಸಿಸ್ ಹಾಗೂ ಆಸ್ಟಿಯೋ ಮೆಲೇಸಿಯಾ ರೋಗಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಡಾ. ಶೇಷಗಿರಿ ಎಂ. ಅವರೊಂದಿಗೆ ಮಾತುಕತೆ ನಂತರ ಔಷಧಗಳ ಗುಣಮಟ್ಟಕ್ಕೆ ಸಂಬಂಧಿಸಿದ ಮಿಥ್ಯೆಗಳಿಗೆ ಸಮಾಧಾನ ಕುರಿತು ಡಾ. ಹನುಮಂತಾಚಾರ್ ಜೋಷಿ ಕೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್ ಮತ್ತು ತೇಜಸ್ವಿನಿ ಗಿರೀಶ್, 9.30 ಗಾಂಧೀ ಸ್ಮೃತಿ, 9.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಹೆಚ್. ಕೆ. ನಾರಾಯಣ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ : ಹೆಚ್. ಎಲ್. ಶಿವಶಂಕರಸ್ವಾಮಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಹೆಚ್. ಟಿ. ಹರೀಶ್ – ಸ್ಯಾಕ್ಸೊಫೋನ್, 4.00 ಮಹಿಳಾರಂಗ, ಸಖೀ ಸಾಹಿತ್ಯ ಮಹಿಳಾಬರಹಗಾರರೊಂದಿಗೆ ಮಾತುಕತೆ, ಭಾಗವಹಿಸುತ್ತಾರೆ–ಲೇಖಕಿ ಉಷಾನರಸಿಂಹನ್, ಪ್ರಸ್ತುತಿ–ಕೆ.ನೇತ್ರಾ, 4.30 ವೃತ್ತಿ ಮಾರ್ಗದರ್ಶನ–ಭಾರತೀಯ ಸೇನಾಪಡೆಗಳಲ್ಲಿ ಯುವಜನರಿಗೆ ಇರುವ ಅವಕಾಶಗಳು ಕುರಿತು ಭಾರತೀಯ ವಾಯುಸೇನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಗ್ರೂಪ್ ಕ್ಯಾಪ್ಟನ್ ಸಿ.ಕೆ.ಕಾರ್ತಿಕ್ ಅವರೊಂದಿಗಿನ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 6.50 ಕೃಷಿರಂಗ, ಹವಾಮಾನ ಮಿತ್ರ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು, ಸಂಶೋಧನಾ ಸಾರ–ಕೃಷಿ ಕ್ಷೇತ್ರದ ಹೊಸ ಅವಿಷ್ಕಾರ, ಪ್ರಸ್ತುತಿ–ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಸಂಧ್ಯಾರಾಗ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ,ಕಾರ್ತಿಕ್ ವೈದ್ಯನಾಥನ್ – ಹಾಡುಗಾರಿಕೆ, 10.00 ಜನಪದ ಸಂಗೀತ, 10.30 ಸವಿನೆನಪು

ಮೈಮುಲ್ ನೂತನ ಅಧ್ಯಕ್ಷರಾಗಿ ಈರೇಗೌಡ ಅವಿರೋಧ ಆಯ್ಕೆ

ಪನ್ನೀರ್ ಘಟಕ, ಹಾಲು ಶೇಖರಣಾ ಘಟಕ ಶೀಘ್ರ ಉದ್ಘಾಟನೆ ಭರವಸೆ



ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ (ಮೈಮುಲ್) ದ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಈರೇಗೌಡ ಅವರನ್ನು ಸಂಘದ ನಿರ್ದೇಶಕರು ಹಾಗೂ ಅಧಿಕಾರಿಗಳು ಅಭಿನಂದಿಸಿ ಶುಭ ಕೋರಿದರು.

ಮೈಸೂರು, ಅ.23(ಬಿಎಲ್‌ಯು)– ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ (ಮೈಮುಲ್)ದ ನೂತನ ಅಧ್ಯಕ್ಷರಾಗಿ ಈರೇಗೌಡ ಇಂದು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪೂರ್ವ ಒಪ್ಪಂದದಂತೆ ಉಳಿದ ಅವಧಿಗೆ ಈರೇಗೌಡರನ್ನು ಮೈಮುಲ್ ಅಧ್ಯಕ್ಷರಾಗಿ ಮಾಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಸೂಚನೆ ನೀಡಿದ್ದು, ಅದರಂತೆ ಇಂದು ಚುನಾವಣಾ ಪ್ರಕ್ರಿಯೆ ನಡೆಯಿತು.

ಚುನಾವಣಾಧಿಕಾರಿ ಶ್ರೀಧರ್ ಅವರಿಗೆ ಈರೇಗೌಡ ಅವರು ಇಂದು ಬೆಳಿಗ್ಗೆ 10.30 ಗಂಟೆಗೆ ನಾಮಪತ್ರ ಸಲ್ಲಿಸಿದ್ದರು. ಆದರೆ, ನಾಮಪತ್ರ ಸಲ್ಲಿಕೆಗೆ ನೀಡಿದ್ದ ಮಧ್ಯಾಹ್ನ 12 ಗಂಟೆವರೆಗಿನ ಅವಧಿಯಲ್ಲಿ ಯಾರೂ ನಾಮಪತ್ರ ಸಲ್ಲಿಸದ ಕಾರಣ ಈರೇಗೌಡ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಶ್ರೀಧರ್ ಘೋಷಿಸಿದರು. ಈ ಸಂದರ್ಭದಲ್ಲಿ ಮೈಮುಲ್‌ನ ಎಲ್ಲಾ ನಿರ್ದೇಶಕರು ಅಭಿನಂದಿಸಿ, ಶುಭ ಕೋರಿದರು.

ಹೆಚ್.ಡಿ.ಕೋಟೆ ಇತಿಹಾಸ: ಈ ವೇಳೆ ಮಾತನಾಡಿದ ಈರೇಗೌಡ ಅವರು, ನನ್ನ ಆಯ್ಕೆಗೆ ಕಾರಣರಾದ ಸಿದ್ದರಾಮಯ್ಯ, ಡಾ.ಮಹದೇವಪ್ಪ, ಸಹಕಾರಿ ಧುರೀಣ ಜಿ.ಟಿ.ದೇವೇಗೌಡ, ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಹೆಚ್.ಡಿ.ಕೋಟೆ ಇತಿಹಾಸದಲ್ಲಿ ಈ ತಾಲೂಕಿನವರಿಗೆ ಅಧ್ಯಕ್ಷರಾಗುವ ಅವಕಾಶ ಸಿಕ್ಕಿರಲಿಲ್ಲ. ಆದರೆ ಈಗ ನನಗೆ ಈ ಅವಕಾಶ ದೊರೆತಿದ್ದು, ನಾಲ್ಕು ಬಾರಿ ನಿರ್ದೇಶಕನಾಗಿರುವ ಬಗ್ಗೆ ಹೆಮ್ಮೆ ಇದೆ. ಹೆಚ್.ಡಿ.ಕೋಟೆ ಹಿಂದುಳಿದ ತಾಲೂಕಾಗಿದ್ದು, ಹೈನುಗಾರಿಕೆ ಬೆಳೆದಿರಲಿಲ್ಲ. ಅಂದು 19 ಹಾಲು ಉತ್ಪಾದಕರ ಸಂಘವಿದ್ದ ಹೆಚ್.ಡಿ.ಕೋಟೆಯಲ್ಲಿ ಇಂದು 186 ಸಂಘಗಳಿವೆ ಎಂದರು.

ಮೈಮುಲ್‌ನಲ್ಲಿ ಪನ್ನೀರ್ ಘಟಕ ಹಾಗೂ ಹಾಲು ಶೇಖರಣಾ ಘಟಕ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ನನ್ನ ಅವಧಿಯಲ್ಲಿ ಇದನ್ನು ಉದ್ಘಾಟನೆ ಮಾಡುವ ಗುರಿ ಹೊಂದಿದ್ದೇನೆ ಎಂದು ಈರೇಗೌಡ ತಿಳಿಸಿದರು.

ನಿರ್ದೇಶಕರಾದ ಎ.ಟಿ.ಸೋಮಶೇಖರ್, ಕೆ.ಜಿ.ಮಹೇಶ್, ಕೆ.ಉಮಾಶಂಕರ್, ಸಿ.ಓಂ ಪ್ರಕಾಶ್, ಸಿ.ಎಂ.ಪ್ರಸನ್ನ, ಆರ್.ಚೆಲುವರಾಜು, ಕೆ.ಎಸ್.ಕುಮಾರ್, ದಾಕ್ಷಾಯಿಣಿ ಬಸವರಾಜಪ್ಪ, ಲೀಲಾ, ನಾಗರಾಜು, ನೀಲಾಂಬಿಕೆ, ಮಹೇಶ್, ಕುರಹಟ್ಟಿ ಶಿವಗಾಮಿ ಷಣ್ಮುಗಂ, ಬಿ.ಎನ್.ಸದಾನಂದ, ಬಿ.ಗುರುಸ್ವಾಮಿ, ಬಿ.ಎ.ಪ್ರಕಾಶ್, ಎ.ಬಿ.ಮಲ್ಲಿಕಾ, ರವಿಕುಮಾರ್, ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ಸುರೇಶ್ ನಾಯಕ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಮಾದೇಗೌಡ ಅವರು ನೂತನ ಅಧ್ಯಕ್ಷ ಈರೇಗೌಡರಿಗೆ ಶುಭ ಕೋರಿದರು.

ಬಿಹಾರದಲ್ಲಿ ಇಂಡಿಯಾ ಬಣದ ಸಿಎಂ ಅಭ್ಯರ್ಥಿ ತೇಜಸ್ವಿ ಯಾದವ್

ಮುಖೇಶ್ ಸಹಾನಿ ಸೇರಿ ಇಬ್ಬರು ಉಪ ಮುಖ್ಯಮಂತ್ರಿ



ತೇಜಸ್ವಿ ಯಾದವ್

ಪಾಟ್ನಾ, ಅ.23– ಬಿಹಾರ ವಿಧಾನಸಭಾ ಚುನಾವಣೆಗೆ ಆರ್‌ಜೆಡಿ ನಾಯಕ ಹಾಗೂ ಮಾಜಿ ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯಾಗಿ ವಿರೋಧ ಪಕ್ಷಗಳ ಇಂಡಿಯಾ ಬಣ ಗುರುವಾರ ಘೋಷಿಸಿದೆ.

ಎಲ್ಲಾ ಪಕ್ಷಗಳ ಪ್ರತಿನಿಧಿಗಳು ಭಾಗವಹಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಹಿರಿಯ ಕಾಂಗ್ರೆಸ್ ನಾಯಕ ಅಶೋಕ್ ಗೆಹ್ಲೋಟ್ ಈ ಘೋಷಣೆ ಮಾಡಿದರು. ಈ ನಿರ್ಧಾರವನ್ನು ತಮ್ಮ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬೆಂಬಲಿಸಿದ್ದಾರೆ ಎಂದು ಪ್ರತಿಪಾದಿಸಿದರು.

ಇಂಡಿಯಾ ಬಣವು ಬಿಹಾರದಲ್ಲಿ ಸರ್ಕಾರ ರಚಿಸಿದರೆ, ವಿಕಾಸಶೀಲ್ ಇನ್ಸಾನ್ ಪಕ್ಷದ (ವಿಐಪಿ) ಮುಖ್ಯಸ್ಥ ಮುಖೇಶ್ ಸಹಾನಿ ಉಪಮುಖ್ಯಮಂತ್ರಿಗಳಲ್ಲಿ ಒಬ್ಬರಾಗುತ್ತಾರೆ ಮತ್ತು ಅದೇ ಹುದ್ದೆಯನ್ನು ಹಿಂದುಳಿದ ವರ್ಗಗಳ ಮತ್ತೊಬ್ಬ ನಾಯಕ ಅಲಂಕರಿಸುತ್ತಾರೆ ಎಂದು ಗೆಹ್ಲೋಟ್ ಹೇಳಿದರು.

ಬಿಹಾರ ವಿಧಾನಸಭೆಯ ವಿರೋಧ ಪಕ್ಷದ ನಾಯಕ ತೇಜಸ್ವಿ ಯಾದವ್ ಮಾತನಾಡಿ, ನಾವು, ಮಹಾಘಟಬಂಧನದ ಜನರು ಕೇವಲ ಸರ್ಕಾರ ರಚಿಸಲು ಅಥವಾ ಮುಖ್ಯಮಂತ್ರಿಯಾಗಲು ಬಯಸುವುದಿಲ್ಲ. ನಾವು ಬಿಹಾರವನ್ನು ಅಭಿವೃದ್ಧಿ ಮಾಡಲು ಬಯಸುತ್ತೇವೆ. ಅದಕ್ಕಾಗಿಯೇ ನಾವು ಒಟ್ಟಿಗೆ ಇದ್ದೇವೆ. ನನ್ನ ಮೇಲೆ ನಂಬಿಕೆ ಇಟ್ಟಿದ್ದಕ್ಕಾಗಿ ಮಹಾಘಟಬಂಧನದ ಎಲ್ಲಾ ಸದಸ್ಯರಿಗೆ ನಾನು ಧನ್ಯವಾದ ಹೇಳುತ್ತೇನೆ. ನಿಮ್ಮ ನಿರೀಕ್ಷೆಗಳಿಗೆ ತಕ್ಕಂತೆ ನಡೆದುಕೊಳ್ಳಲು ಸಾಧ್ಯವಿರುವ ಎಲ್ಲವನ್ನೂ ನಾನು ಮಾಡುತ್ತೇನೆ ಮತ್ತು ಒಟ್ಟಾಗಿ ಅಧಿಕಾರದಲ್ಲಿರುವ 20 ವರ್ಷಗಳ ಸರ್ಕಾರವನ್ನು ಉರುಳಿಸುತ್ತೇವೆ ಎಂದು ನಾನು ಅವರೆಲ್ಲರಿಗೂ ಹೇಳಲು ಬಯಸುತ್ತೇನೆ ಎಂದು ಅವರು ಹೇಳಿದರು.

ನಾವು ಜಂಟಿ ಪತ್ರಿಕಾಗೋಷ್ಠಿ ನಡೆಸಿದ್ದೇವೆ. ಎನ್‌ಡಿಎಯಲ್ಲಿ ನಿತೀಶ್ ಕುಮಾರ್‌ಗೆ ಅನ್ಯಾಯವಾಗುತ್ತಿದೆ. ಒಂದೇ ಒಂದು ಜಂಟಿ ಪತ್ರಿಕಾಗೋಷ್ಠಿಯೂ ನಡೆದಿಲ್ಲ. ಅವರ ಸಿಎಂ ಅಭ್ಯರ್ಥಿಯ ಬಗ್ಗೆ ಯಾವುದೇ ಅಧಿಕೃತ ಘೋಷಣೆ ಮಾಡಿಲ್ಲ. ಬಿಜೆಪಿಯು ನಿತೀಶ್ ಕುಮಾರ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡುವುದಿಲ್ಲ ಎಂದು ನಾವು ಮೊದಲಿನಿಂದಲೂ ಹೇಳುತ್ತಿದ್ದೇವೆ ಎಂದು ಅವರು ಹೇಳಿದರು.

ನಾಯಕತ್ವ ವಿಚಾರದಲ್ಲಿ ಶಾಸಕರು, ವರಿಷ್ಠರ ತೀರ್ಮಾನವೇ ಅಂತಿಮ

ಗೃಹ ಸಚಿವ ಡಾ. ಪರಮೇಶ್ವರ್ ಸ್ಪಷ್ಟನೆ



ಬೆಂಗಳೂರು, ಅ.23(ಕೆಎಂಶಿ)–ಕರ್ನಾಟಕ ಕಾಂಗ್ರೆಸ್ ನಾಯಕತ್ವ ವಿಚಾರದಲ್ಲಿ ಶಾಸಕರು ಮತ್ತು ವರಿಷ್ಠರ ತೀರ್ಮಾನವೇ ಅಂತಿಮ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಪರ್ಯಾಯ ನಾಯಕ ಎಂಬುದಾಗಿ ಹೇಳಿಲ್ಲ. ಸಾಮಾಜಿಕ ಬದ್ಧತೆಗೆ, ಸೈದ್ಧಾಂತಿಕ ನೆಲೆಗಟ್ಟಿನ ಹೋರಾಟಕ್ಕೆ ಸತೀಶ್ ನಾಯಕರು ಎಂದಿರುವುದರಲ್ಲಿ ತಪ್ಪಿಲ್ಲ.

ಸಿದ್ದರಾಮಯ್ಯ ಈ ಹಿಂದೆ ಅಹಿಂದ ಸಂಘಟನೆ ಮಾಡಿದ ಸಂದರ್ಭದಲ್ಲಿ ಸತೀಶ್ ಜಾರಕಿಹೊಳಿ ಸಹ ಪಾತ್ರ ವಹಿಸಿದ್ದರು.

ಇದರ ಆಧಾರದ ಮೇಲೆ ಡಾ.ಯತೀಂದ್ರ ಪಕ್ಷ ಮತ್ತು ಸಾಮಾಜಿಕ ಬದ್ಧತೆಗೆ ಸಿದ್ದರಾಮಯ್ಯ ನಂತರ ಸತೀಶ್ ನಾಯಕತ್ವ ವಹಿಸಿಕೊಳ್ಳಲಿ ಎಂದಿರುವುದನ್ನು ನೀವು ತಪ್ಪಾಗಿ ಅರ್ಥೈಸುತ್ತಿದ್ದೀರಿ ಎಂದರು.

ಪ್ರಿಯಾಂಕ್ ಖರ್ಗೆ ರಾಜ್ಯದ ಮುಂದಿನ ಉಪ ಮುಖ್ಯಮಂತ್ರಿ

ಮಾಜಿ ಸಚಿವ ಶ್ರೀರಾಮುಲು ಸ್ಫೋಟಕ ಹೇಳಿಕೆ



ಹುಬ್ಬಳ್ಳಿ, ಅ.23– ಪ್ರಿಯಾಂಕ್ ಖರ್ಗೆ ರಾಜ್ಯದ ಉಪಮುಖ್ಯಮಂತ್ರಿಯಾಗಲಿದ್ದಾರೆ. ಈ ವಿಚಾರವಾಗಿ ದೆಹಲಿ ಮಟ್ಟದಲ್ಲಿ ಪ್ಲ್ಯಾನ್ ನಡೆದಿದೆ ಎಂದು ಮಾಜಿ ಸಚಿವ ಶ್ರೀರಾಮುಲು ಸ್ಫೋಟಕ ಹೇಳಿಕೆ ನೀಡಿದರು.

ಮುಖ್ಯಮಂತ್ರಿ ಬದಲಾವಣೆ ವಿಚಾರವಾಗಿ ಇಂದು ಹುಬ್ಬಳ್ಳಿಯಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಪ್ರಿಯಾಂಕ್ ಖರ್ಗೆ ಉಪಮುಖ್ಯಮಂತ್ರಿ ಆಗುವ ಬಗ್ಗೆ ದೆಹಲಿಯಲ್ಲಿ ಎಐಸಿಸಿ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಈ ಪ್ಲ್ಯಾನ್ ನಡೆದಿದೆ. ಒಂದು ವೇಳೆ ಸತೀಶ್ ಜಾರಕಿಹೊಳಿ ಮುಖ್ಯಮಂತ್ರಿ ಆದಲ್ಲಿ ವಾಲ್ಮೀಕಿ ಸಮುದಾಯಕ್ಕೆ ಬಲ ಬಂದಂತಾಗುತ್ತದೆ ಎಂದು ಸಂತೋಷ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ತುರ್ತು ಪರಿಸ್ಥಿತಿ ಇದೆ: ರಾಜ್ಯದಲ್ಲಿ ಈಗ ತುರ್ತು ಪರಿಸ್ಥಿತಿಯಿದೆ ಎಂದು ದೂರಿದ ಶ್ರೀರಾಮುಲು, ಕಾಂಗ್ರೆಸ್ ಸರ್ಕಾರವು ವಿನಾಕಾರಣ ಆರ್‌ಎಸ್‌ಎಸ್ ವಿಚಾರದಲ್ಲಿ ದ್ವೇಷದ ರಾಜಕೀಯ ಮಾಡುತ್ತಿದೆ. ಆರ್‌ಎಸ್‌ಎಸ್‌ನಲ್ಲಿ ಮುಕ್ತವಾಗಿ ಭಾಗವಹಿಸಲು ಕೇಂದ್ರ ಸರ್ಕಾರ ಗೆಜೆಟ್ ಮೂಲಕ ಅವಕಾಶ ನೀಡಿದರೂ ಕಾಂಗ್ರೆಸ್ ಇದರಲ್ಲಿ ರಾಜಕೀಯ ಮಾಡುತ್ತಿದೆ ಎಂದು ಕಿಡಿಕಾರಿದರು.

ನಿಂತ ನೀರಿನಂತೆ ಕಾಂಗ್ರೆಸ್ ಸರ್ಕಾರ: ಕಾಂಗ್ರೆಸ್ ಸರ್ಕಾರವನ್ನು ನಿಂತ ನೀರಿನ ಸರ್ಕಾರ ಎಂದು ಕರೆದ ಅವರು, ಆಡಳಿತ ವೈಫಲ್ಯಗಳನ್ನು ಮರೆಮಾಚಲು ಆರ್‌ಎಸ್‌ಎಸ್ ವಿಚಾರವನ್ನು ಹುಟ್ಟುಹಾಕಿದ್ದಾರೆ ಎಂದು ಆರೋಪಿಸಿದ್ದಾರೆ. ವಿಧಾನಸೌಧದಲ್ಲಿ 'ಪಾಕಿಸ್ತಾನ್ ಜಿಂದಾಬಾದ್' ಘೋಷಣೆ ಕೂಗಿದವರನ್ನು ಕಾಂಗ್ರೆಸ್ ರಾಜ್ಯಸಭೆ ಮತ್ತು ಲೋಕಸಭೆಗೆ ಸದಸ್ಯರನ್ನಾಗಿ ಮಾಡುತ್ತಿದೆ. ಆದರೆ ಭಾರತ ಮಾತೆಗೆ ಜೈ ಎನ್ನುವವರನ್ನು ಅಥವಾ ಆರ್‌ಎಸ್‌ಎಸ್ ಜಿಂದಾಬಾದ್ ಎಂದರೆ ಕ್ರಮ ಕೈಗೊಳ್ಳುತ್ತಾರೆ ಎಂದರೆ ಈ ಕಾಂಗ್ರೆಸ್‌ನ ಮನಸ್ಥಿತಿ ಏನು. ಅಧಿಕಾರಕ್ಕಾಗಿ ದೇಶದ್ರೋಹಿಗಳೊಂದಿಗೆ ರಾಜೀ ಆಗುವ, ದೇಶದ್ರೋಹಿಗಳಿಗೆ ಬೆಂಬಲ ನೀಡುವ ಕೆಲಸ ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ ಎಂಬುದಕ್ಕೆ ಅಧಿಕಾರಕ್ಕೆ ಬಂದಾಗಿಂದ ಅದರ ನಡೆಗಳನ್ನ ಗಮನಿಸಬಹುದು. ಕಾಂಗ್ರೆಸ್ ಸರ್ಕಾರ ಭಾರತೀಯ ಸಂಸ್ಕೃತಿಯ ಬಗ್ಗೆ ಮಾತನಾಡುವ ಯಾವ ನೈತಿಕತೆಯನ್ನು ಹೊಂದಿಲ್ಲ ಎಂದು ಟೀಕಿಸಿದರು.

ಕಂಡ ಕಂಡ ದೇವರಿಗೆ ಹರಕೆ ಹೊರುವ ಬದಲು ಇಟಲಿ ದೇವಾಲಯಕ್ಕೆ ಕಪ್ಪ–ಕಾಣಿಕೆ ಸಲ್ಲಿಸಿದರೆ ಸಿಎಂ ಆಗಬಹುದು

ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ವಿಪಕ್ಷ ನಾಯಕ ಅಶೋಕ್ ಟಾಂಗ್



ಬೆಂಗಳೂರು, ಅ.23(ಕೆಎಂಶಿ)–ಕಂಡ ಕಂಡ ದೇವರಿಗೆ ಹರಕೆ ಹೊತ್ತರೆ ಸಾಲದು. ಇಟಲಿ ದೇವಾಲಯ ಪ್ರದಕ್ಷಿಣೆ ಹಾಕಿ ಕಪ್ಪಕಾಣಿಕೆ ನೀಡಿದರೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬಹುದು ಎಂದು ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ಕುಟುಕಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾರಮ್ಮ, ಚೌಡಮ್ಮ, ಚಾಮುಂಡೇಶ್ವರಿ, ರಾಘವೇಂದ್ರ ದೇವಾಲಯಗಳನ್ನು ಸುತ್ತುವುದರಿಂದ ಇಷ್ಟಾರ್ಥ ಈಡೇರುವುದಿಲ್ಲ.

ದೆಹಲಿಯ ಇಟಲಿ ಮಂದಿರ ಪ್ರದಕ್ಷಿಣೆ ಹಾಕಿ, ಬೇಡಿಕೊಂಡರೆ ಕನಸು ನನಸಾಗಬಹುದು. ಸುಲಭ ಮಾರ್ಗ ಬಿಟ್ಟು ಕೇರಳ, ತಮಿಳುನಾಡು, ಆಂಧ್ರಪ್ರದೇಶ ದೇವಾಲಯಗಳನ್ನು ಸುತ್ತಿದರೆ ಗುರಿ ತಲುಪಲಾಗದು ಎಂದಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರದ ಭ್ರಷ್ಟಾಚಾರ ಹಾಗೂ ಆಡಳಿತ ವೈಫಲ್ಯ ಮುಚ್ಚಿಕೊಳ್ಳಲು ರಾಷ್ಟ್ರೀಯ ಸ್ವಯಂಸೇವಕ ಸಂಘಟನೆ (ಆರ್‌ಎಸ್‌ಎಸ್) ವಿಚಾರ ಮುನ್ನೆಲೆಗೆ ತಂದಿದ್ದಾರೆ.

ಶತಮಾನೋತ್ಸವ ಆಚರಣೆ ಹಿನ್ನೆಲೆಯಲ್ಲಷ್ಟೇ ಆರ್‌ಎಸ್‌ಎಸ್ ಕಾರ್ಯಕರ್ತರು ಪಥಸಂಚಲನ ನಡೆಸಿರಬಹುದು. ಈ ಹಿಂದೆಯೂ ಸಂಘಟನೆ ಹಿಂದುತ್ವದ ಏಕತೆಗೆ ಸಮಾವೇಶ, ಪಥಸಂಚಲನಗಳನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿದೆ.

ಅಂದು ಯಾವ ನಿರ್ಬಂಧ ಹೇರದ ಕಾಂಗ್ರೆಸ್ ಸರ್ಕಾರಗಳು ಇಂದು ತಮ್ಮ ವೈಫಲ್ಯ ಮರೆಮಾಚಲು ಆರ್‌ಎಸ್‌ಎಸ್ ನಿಯಂತ್ರಿಸುವ ಮೂಲಕ ಜನರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದೆ.

ಮುಖ್ಯಮಂತ್ರಿ 4 ಲಕ್ಷ ಕೋಟಿ ರೂ. ಮೊತ್ತದ ಬಜೆಟ್ ಮಂಡಿಸಿದ್ದಾರೆ. ಅದರಲ್ಲಿ ಅಭಿವೃದ್ಧಿಗೆ ಸಿಗುವುದು 80 ಕೋಟಿ ರೂ. ಮಾತ್ರ. ಅಭಿವೃದ್ಧಿ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಿಸಿದ ನಂತರ ರಸ್ತೆ ಗುಂಡಿಗಳನ್ನು ಮುಚ್ಚಲೂ ಇವರ ಬಳಿ ಹಣ ಉಳಿಯುವುದಿಲ್ಲ ಆರ್‌ಎಸ್‌ಎಸ್ ಮುಂದಿಟ್ಟು ಜನರ ದಿಕ್ಕು ತಪ್ಪಿಸುತ್ತಿದ್ದಾರೆ ಎಂದು ಟೀಕಿಸಿದರು.

ಎಳಸು ಸ್ಟೇಟ್‌ಮೆಂಟ್ ಕೊಡಬಾರದು...!

ಡಾ.ಯತೀಂದ್ರ ಹೇಳಿಕೆಗೆ ಶಾಸಕ ಇಕ್ಬಾಲ್ ಹುಸೇನ್ ತಿರುಗೇಟು



ಇಕ್ಬಾಲ್

ರಾಮನಗರ, ಅ.23– ಸಿದ್ದರಾಮಯ್ಯ ಬಳಿಕ ಸತೀಶ್ ಜಾರಕಿಹೊಳಿಗೆ ಸಿಎಂ ಜವಾಬ್ದಾರಿ ಎಂಬ ಡಾ.ಯತೀಂದ್ರ ಹೇಳಿಕೆ ವಿಚಾರವಾಗಿ ಇಂದು ರಾಮನಗರದ ಅಂಕನಹಳ್ಳಿ ಗ್ರಾಮದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಶಾಸಕ ಇಕ್ಬಾಲ್ ಹುಸೇನ್, 'ಇದೊಂದು ರೀತಿ ಎಳಸು ಸ್ಟೇಟ್‌ಮೆಂಟ್. ನಿಮ್ಮ (ಯತೀಂದ್ರ) ಮಾತು ಇನ್ನೂ ಬಲಿತಿಲ್ಲ, ನಿಮ್ಮ ಮಾತಲ್ಲಿನ್ನೂ ಶಕ್ತಿ ಇಲ್ಲ. ಯಾವುದೇ ರೀತಿ ಗೊಂದಲ ಸೃಷ್ಟಿಸಬಾರದು ಎಂದರು.

ಯತೀಂದ್ರ ಸಿದ್ದರಾಮಯ್ಯ ಈ ರೀತಿ ಹೇಳಿಕೆಗಳನ್ನು ಕೊಡಬಾರದು. ಗೌರವಯುತ ಹೇಳಿಕೆ ಕೊಡಬೇಕು. ತಾವು ದೊಡ್ಡ ಮನೆತನದಲ್ಲಿ, ದೊಡ್ಡ ಸ್ಥಾನದಲ್ಲಿದ್ದೀರಿ, ತಾವಾಗಿ ಕೆಳಗಡೆ ಬೀಳೋದು ನಮಗೆ ಇಷ್ಟವಿಲ್ಲ. ಈ ವಿಷಯವಾಗಿ ನನ್ನ ಮೌನವೇ ಉತ್ತರ ಎಂದು ತಿರುಗೇಟು ನೀಡಿದರು.

ನಾವು ಮಾಡಿದ್ರೆ ಬಲಾತ್ಕಾರ, ಬೇರೆಯವರು ಮಾಡಿದ್ರೆ ಚಮತ್ಕಾರ: ಕೆಪಿಸಿಸಿಯಿಂದ ಯತೀಂದ್ರಗೆ ನೋಟಿಸ್ ನೀಡದ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ನಾವು ಮಾಡಿದ್ರೆ ಬಲಾತ್ಕಾರ, ಬೇರೆಯವರು ಮಾಡಿದರೆ ಚಮತ್ಕಾರ ಅನ್ನೋ ಪರಿಸ್ಥಿತಿಯಿದೆ. ಅವೆಲ್ಲವನ್ನೂ ಹೇಳಬಾರದು, ಅವರು ತಿದ್ದಿಕೊಳ್ತಾರೆ ಎಂದರು.

ಡಿ.ಕೆ.ಶಿವಕುಮಾರ್ ಪಕ್ಷ ಸಂಘಟನೆಗೆ ಶ್ರಮ: ಸಿಎಂ ಸ್ಥಾನಕ್ಕಾಗಿ ಡಿಸಿಎಂ ಡಿಕೆ ಶಿವಕುಮಾರ್ ಹೋರಾಟ ವಿಚಾರವಾಗಿ ಪ್ರತಿಕ್ರಿಯಿಸಿದ ಶಾಸಕ ಇಕ್ಬಾಲ್ ಹುಸೇನ್, ಅವರು ಪಕ್ಷದ ಅಧ್ಯಕ್ಷರು, ಜವಾಬ್ದಾರಿಯುತ ಸ್ಥಾನದಲ್ಲಿದ್ದು ಕೆಲಸ ಮಾಡುತ್ತಿದ್ದಾರೆ. ಪಕ್ಷ ಸಂಘಟನೆಗೆ ಹೆಚ್ಚು ಶ್ರಮ ಹಾಕುತ್ತಿದ್ದಾರೆ. ನಮಗೆಲ್ಲ ಶಕ್ತಿ ತುಂಬುವ ಕೆಲಸ ಮಾಡುತ್ತಿದ್ದಾರೆ. ಯೂತ್ ಕಾಂಗ್ರೆಸ್‌ನಿಂದ ಬಂದು ಪಕ್ಷ ಸಂಘಟನೆ ಮಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಯಾರೂ ಗೊಂದಲದ ಹೇಳಿಕೆ ಕೊಡಬಾರದು ಎಂದು ಯತೀಂದ್ರ ಹೇಳಿಕೆ ವಿರುದ್ಧ ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದರು.

ಬಿಎಸ್ ಯಡಿಯೂರಪ್ಪ ವಿರುದ್ಧ ಪೋಕ್ಸೋ ಕೇಸ್: ಆದೇಶ ಕಾಯ್ದಿರಿಸಿದ ಹೈಕೋರ್ಟ್



ಯಡಿಯೂರಪ್ಪ

ಬೆಂಗಳೂರು, ಅ.23– ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ವಿರುದ್ಧ ಪೋಕ್ಸೋ ಕೇಸ್‌ಗೆ ಸಂಬಂಧಿಸಿದ ವಾದ–ಪ್ರತಿವಾದ ಆಲಿಸಿದ ಹೈಕೋರ್ಟ್ ಆದೇಶವನ್ನು ಕಾಯ್ದಿರಿಸಿದೆ.

ಪೋಕ್ಸೋ ಪ್ರಕರಣದಲ್ಲಿ ಸಂಜ್ಞೇ ಪರಿಗಣಿಸಿರುವುದನ್ನು ರದ್ದುಪಡಿಸುವಂತೆ ಕೋರಿ ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ಸಲ್ಲಿಸಿರುವ ಅರ್ಜಿಯನ್ನು ಹೈಕೋರ್ಟ್‌ನ ನ್ಯಾಯಮೂರ್ತಿ ಎಂ ಐ ಅರುಣ್ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಯಡಿಯೂರಪ್ಪ ಪರವಾಗಿ ಹಿರಿಯ ವಕೀಲ ಸಿವಿ ನಾಗೇಶ್ ವಾದ ಮಂಡಿಸಿದರು. ಸರ್ಕಾರದ ಪರ ವಿಶೇಷ ಸರ್ಕಾರಿ ಅಭಿಯೋಜಕ ಪ್ರೊ. ರವಿವರ್ಮ ಕುಮಾರ್ ಹಾಜರಾಗಿದ್ದರು.

ಈ ಕೇಸ್‌ನಲ್ಲಿ ವಿಚಾರಣಾಧೀನ ನ್ಯಾಯಾಲಯ ಪ್ರಾಸಿಕ್ಯೂಷನ್ ಸಂಗ್ರಹಿಸಿದ ದಾಖಲೆ ಆಧರಿಸಿ ಸಂಜ್ಞೇ ಪರಿಗಣಿಸಬೇಕಿತ್ತು. ಸಂತ್ರಸ್ತೆಯ ಹೇಳಿಕೆಯನ್ನು ಮಾತ್ರ ವಿಚಾರಣಾಧೀನ ನ್ಯಾಯಾಲಯ ಪರಿಗಣಿಸಿದೆ ಎಂಬುದು ಬಿಎಸ್ ಯಡಿಯೂರಪ್ಪ ಪರ ವಕೀಲರ ವಾದವಾಗಿತ್ತು.

ಗುರುವಾರ ಮೊದಲಿಂದ ವಾದ ಆರಂಭಿಸಿದ ಸಿವಿ ನಾಗೇಶ್, ಕೇಸ್ ಅನ್ನು ಹೊಸದಾಗಿ ಪರಿಗಣಿಸುವಂತೆ ಸಮನ್ವಯ ಪೀಠವು ವಿಚಾರಣಾಧೀನ ನ್ಯಾಯಾಲಯಕ್ಕೆ ಆದೇಶಿಸಿತ್ತು. ಇದನ್ನು ಮಾಡಲಾಗಿಲ್ಲ. ವಿವೇಚನೆ ಬಳಸಲಾಗಿಲ್ಲ. ತನಿಖಾಧಿಕಾರಿ ಸಲ್ಲಿಸಿರುವ ಇಡೀ ಸಾಕ್ಷಿಯನ್ನು ಪರಿಗಣಿಸಬೇಕು ಎಂದು ಹೇಳಿತ್ತು. ಅದನ್ನು ಪರಿಗಣಿಸಲಾಗಿಲ್ಲ ಎಂದು ಕೋರ್ಟ್‌ನ ಗಮನಕ್ಕೆ ತಂದರು.

ಡಿ.ಕೆ.ಶಿವಕುಮಾರ್‌ಗೆ ಸಿದ್ದರಾಮಯ್ಯ ಮುಖ್ಯಮಂತ್ರಿ ಹುದ್ದೆ ಬಿಟ್ಟುಕೊಡ್ತಾರೆ!

ಹಾಗಂತ ಜನ ಹೇಳ್ತಾರೆ; ಕೇಂದ್ರ ಸಚಿವ ವಿ.ಸೋಮಣ್ಣ



ನವದೆಹಲಿ, ಅ.23– ನಮಗಿರುವ ಮಾಹಿತಿ ಪ್ರಕಾರ ಸಿದ್ದರಾಮಯ್ಯನವರು ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಹುದ್ದೆ ಬಿಟ್ಟುಕೊಡುತ್ತಾರೆ ಎಂದು ಜನ ಮಾತನಾಡುವುದನ್ನು ನಾವು ನೀವು ಕೇಳಿದ್ದೇವೆ. ಇದೆಲ್ಲದರ ಮಧ್ಯೆ ಹುಸಿಬಾಂಬ್‌ಗಳನ್ನು ಹಾಕಿಕೊಂಡು ರಾಜ್ಯದ ಜನತೆಯನ್ನು ಕತ್ತಲೆ ಕೋಣೆಯಲ್ಲಿ ಇರಿಸುವ ಕೆಲಸ ಕಾಂಗ್ರೆಸ್‌ನವರು ಬಿಟ್ಟುಬಿಡಿ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಹೇಳಿದರು.

ಇಂದು ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಸಿದ್ದರಾಮಯ್ಯನವರು ಎರಡನೇ ಬಾರಿ ಮುಖ್ಯಮಂತ್ರಿಗಳಾಗಿದ್ದಾರೆ. ಅವರಿಗೆ ಅಪಾರ ಅನುಭವವಿದೆ. ಅದನ್ನು ರಾಜ್ಯದ ಜನತೆಯ ಅಭಿವೃದ್ಧಿಗೆ ಬಳಸಿ ಉತ್ತಮ ಆಡಳಿತ ನೀಡಿ ಹೆಸರು ಗಳಿಸಲಿ ಎಂದು ಮನವಿ ಮಾಡಿಕೊಂಡರು.

ಡಿ.ಕೆ.ಶಿವಕುಮಾರ್ ಅವರು ಪಕ್ಷಕ್ಕೆ ಏನು ಕೊಟ್ಟಿದ್ದಾರೆ, ಅವರಿಗೆ ಯಾವ ರೀತಿ ಸ್ಥಾನ ಮಾನ ಕೊಡಬೇಕೆಂಬುದು ಅವರ ಪಕ್ಷದ ವಿಚಾರ. ಆದರೆ, ಅನವಶ್ಯಕವಾಗಿ ಸತೀಶ್ ಜಾರಕಿಹೊಳಿಯವರನ್ನು ತರುವುದೇಕೆ. 2028ರವರೆಗೆ ನಾನು ಯಾವುದೇ ಹುದ್ದೆ ಬಯಸುವುದಿಲ್ಲ ಎಂದು ಅವರೇ ಹೇಳಿದ್ದಾರೆ. ಇಷ್ಟೆಲ್ಲ ಇರುವಾಗ ತಮ್ಮ ತಂದೆಯವರ ಕೆಲಸ, ಗೌರವಗಳನ್ನು ಕಾಪಾಡಿಕೊಂಡು ಹೋಗುವುದು ಬಿಟ್ಟು ಡಾ.ಯತೀಂದ್ರ ಅವರಿಗೆ ಕಾಂಗ್ರೆಸ್‌ನ ಮುಂದಿನ ಸಿಎಂ ಬಗ್ಗೆ ಮಾತನಾಡುವ ಕೆಲಸ ಏಕೆ ಎಂದು ಸೋಮಣ್ಣ ಪ್ರಶ್ನಿಸಿದರು.

ಕಾಂಗ್ರೆಸ್ ಪಕ್ಷ ಇಂದು ಗೊಂದಲದ ಗೂಡಾಗಿದೆ. ಹೇಳುವವರು, ಕೇಳುವವರು ಇಲ್ಲದ ಪರಿಸ್ಥಿತಿ ಬಂದಿದೆ. ಯಾರು ಅಪ್ಪ, ಯಾರು ಅಮ್ಮ ಎಂದು ಗೊತ್ತಿಲ್ಲದ ಅವ್ಯವಸ್ಥೆಯ ಆಗರ ಕಾಂಗ್ರೆಸ್ ಆಗಿದೆ. ಯಾರು ಯತೀಂದ್ರ, ಯಾರು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಇವರಿಗೇನು ಹೇಳುವವರು ಕೇಳುವವರು ಯಾರು ಇಲ್ಲವಾ? ಮಾತೆತ್ತಿದರೆ ನಮ್ಮ ಹೈಕಮಾಂಡ್ ಎನ್ನುವವರು ಇಂದು ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯವಾಗಿರುವಾಗ ಜನರ ಮನಸ್ಸನ್ನು ಬೇರೆಡೆಗೆ ಸೆಳೆದು ಯಾಮಾರಿಸುವ ಪಾಪದ ಕೆಲಸ ಮಾಡುತ್ತಿದ್ದಾರೆ. ಇದು ಒಳ್ಳೆಯದಲ್ಲ ಎಂದರು.

ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಕಾಂಗ್ರೆಸ್ ನಾಯಕರು ರಾಜ್ಯದ ಜನತೆ ಮುಂದೆ ಹುಸಿಬಾಂಬ್‌ಗಳನ್ನು ಹಾಕುವುದನ್ನು ಬಿಟ್ಟು ಜನರ ಸಮಸ್ಯೆಗಳು, ಕೆಲಸಗಳತ್ತ ಗಮನಹರಿಸಿ, ರಾಜ್ಯದ ಜನರನ್ನು ಮರುಳು ಮಾಡಲು ನೋಡಬೇಡಿ ಎಂದು ವಿ.ಸೋಮಣ್ಣ ಕಾಂಗ್ರೆಸ್ ನಾಯಕರನ್ನು ಕೇಳಿಕೊಂಡಿದ್ದಾರೆ.

ನಕ್ಕರೆ ಅದೇ ಸ್ವರ್ಗ

ರೋಗಿ : ಡಾಕ್ಟ್ರೇ ದಯವಿಟ್ಟು ನನ್ನ ಚಿಕಿತ್ಸೆಗೆ ಸುಂದರ ನರ್ಸನ್ನು ನೇಮಿಸಿ

ಡಾಕ್ಟರ್ : ಅರೆ... ಆಗಲೇ ನಿಮಗೆ 80ರ ಪ್ರಾಯ, ಖಾಯಿಲೆ ಬೇರೆ. ನಿಮಗೇಕೆ ಇಂತಹ ಚಪಲ ರಾಯರೇ?

ರೋಗಿ : ಆಗಲ್ಲ ಡಾಕ್ಟ್ರೇ ಚಂದದ ನರ್ಸ್‌ಗಳಿದ್ದರೆ ನನ್ನ ಮಗ ಯಾವಾಗಲೂ ನನ್ನನ್ನು ನೋಡಲು ಆಸ್ಪತ್ರೆಗೆ ಬರುತ್ತಿರುತ್ತಾನೆ.

ಮೈಸೂರು ಮಿತ್ರ

ಶುಕ್ರವಾರ, 24 ಅಕ್ಟೋಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ......

ಪ್ರಾಮಾಣಿಕತೆ ಎನ್ನುವುದು ತುಂಬಾ ದುಬಾರಿ ಉಡುಗೊರೆ.
ಅದನ್ನು ಸಣ್ಣ ಮನಸ್ಸಿನ ವ್ಯಕ್ತಿಗಳಿಂದ ನಿರೀಕ್ಷಿಸಬೇಡಿ.

– ವಾರನ್ ಬಫೆಟ್, ಉದ್ಯಮಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮುಳುಗುತ್ತಿರುವವನಿಗೆ ಹುಲ್ಲು ಕಡ್ಡಿಯೂ ಆಸರೆ

ನಿಮ್ಮ ಪತ್ರಗಳು

■ ಯಶಸ್ವಿಯಾದ ಹಾಸನಾಂಭ ಉತ್ಸವ

ಮಾನ್ಯರೆ,

ಈ ಭಾರಿಯ ಹಾಸನಾಂಬೆ ದರ್ಶನಕ್ಕೆ ಹೆಚ್ಚಿನ ಸಂಖ್ಯೆಯ ಭಕ್ತರು ಭೇಟಿ ನೀಡಿ ದೇವಿಯ ದರ್ಶನ ಪಡೆದಿದ್ದಾರೆ. ಅಚ್ಚುಕಟ್ಟಾಗಿ ಗದ್ದಲ, ಗಲಭೆಗಳಿಲ್ಲದೆ ದರ್ಶನವಾಗಿದ್ದು ಒಂದು ರೀತಿ ಇತಿಹಾಸ ನಿರ್ಮಿಸಿದೆ. ಇದಕ್ಕೆ ಪ್ರಮುಖ ಕಾರಣ ಕಂದಾಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಅಲ್ಲದೇ ಪ್ರಾಮಾಣಿಕ, ದಕ್ಷ, ಸರಳ ಸಜ್ಜನಿಕೆಯ ಅತ್ಯಂತ ಉತ್ಸಾಹಿ ವ್ಯಕ್ತಿ ಕೃಷ್ಣ ಬೈರೇಗೌಡರು ಎಂದರೆ ತಪ್ಪಾಗಲಾರದು. ಪ್ರಾರಂಭದಿಂದ ಅಂತ್ಯದವರೆಗೂ ಅವರು ತೋರಿದ ಉತ್ಸಾಹ ಪ್ರತಿದಿನದ ದರ್ಶನದ ಸಮಯ ಮತ್ತು ವ್ಯವಸ್ಥೆ ಬಗ್ಗೆ ಮಾಹಿತಿ ಒದಗಿಸುತ್ತಿದ್ದ ರೀತಿ, ಬಹುಶಃ ಮತ್ತಾರಿಂದಲೂ ಸಾಧ್ಯವಾಗುತ್ತಿರಲಿಲ್ಲವೇನೋ ಅನ್ನಿಸುತ್ತದೆ. ತಡರಾತ್ರಿ ಜನರ ಸಾಲುಗಳನ್ನು ಅಲ್ಲಿನ ಟಾಯ್ಲೆಟ್‌ನಿಂದ ಹಿಡಿದು ಎಲ್ಲಾ ವ್ಯವಸ್ಥೆಯನ್ನು ಪರಿಶೀಲಿಸಿದ್ದರೂ ಮತ್ತೆ ಬೆಳಿಗ್ಗೆ 8 ಗಂಟೆಗೆ ಹಾಜರಾಗಿ ಉಸ್ತುವಾರಿ ಮಾಡಿದ ರೀತಿಯಂತೂ ಅತ್ಯಂತ ಶ್ಲಾಘನೀಯ. ದೇವರ ದರ್ಶನಕ್ಕೆ ಒಂದರ್ಧ ನಿಮಿಷವಾದರೂ ಅವಕಾಶ ನೀಡಬೇಕಿತ್ತು ಅಲ್ಲಿನ ಸಿಬ್ಬಂದಿ ಕ್ಷಣ ಮಾತ್ರದಲ್ಲೇ ಮುಂದೆ ತಳ್ಳುತ್ತಾರೆ ಎಂಬುದು ಜನರ ಆಕ್ಷೇಪ. ಒಬ್ಬ ವ್ಯಕ್ತಿಗೆ ಒಂದು ಸೆಕೆಂಡ್ ಹೆಚ್ಚುವರಿಯಾಗಿ ನೀಡಿದಲ್ಲಿ ಅಂದಾಜು ಮೂರು ಲಕ್ಷ ಜನಕ್ಕೆ ಮೂರು ಲಕ್ಷ ಸೆಕೆಂಡ್ ಹೆಚ್ಚು ನೀಡಬೇಕಾಗುತ್ತದೆ, ಅದು 83 ಗಂಟೆಗಳಾಗುತ್ತದೆ, ದಿನಕ್ಕೆ ಇರುವ ಇಪ್ಪತ್ತನಾಲ್ಕು ಗಂಟೆಗಳಲ್ಲಿ ಇದು ಸಾಧ್ಯವೇ? ಇದು ಭಕ್ತಾಧಿಗಳು ಅರಿಯಬೇಕಾದ ವಾಸ್ತವ ವಿಚಾರ. ಸಚಿವರು ಜನರಿಗೆ ನೀಡಿದ ಸ್ಪಷ್ಟೀಕರಣ ಒಪ್ಪಲೇಬೇಕಾದಂತಾದ್ದು. ಇದಕ್ಕೆ ಪೂರಕವಾಗಿ ಅತ್ಯಂತ ದಕ್ಷತೆಯಿಂದ ಸ್ಪಂಧಿಸಿದ ಜಿಲ್ಲಾಡಳಿತ. ಅದರಲ್ಲೂ ಜಿಲ್ಲಾಧಿಕಾರಿಗಳಾದ ಲತಾಕುಮಾರಿಯವರು ಅತ್ಯಂತ ಕ್ರಿಯಾಶೀಲರಾಗಿ ಸ್ವತಃ ತಾವೇ ಮೈಕ್ ಹಿಡಿದು ನಿಂತು ನೀಡುತ್ತಿದ್ದ ನಿರ್ದೇಶನಗಳು ಗಣ್ಯ ವ್ಯಕ್ತಿಗಳ ಭೇಟಿಯಿಂದಾಗಿ ಭಕ್ತಾಧಿಗಳಿಗೆ ಯಾವುದೇ ತೊಂದರೆಯಾಗದಂತೆ ಮಾಡಿದ ವ್ಯವಸ್ಥೆ ಎಲ್ಲವೂ ಚೆನ್ನಾಗಿತ್ತು. ನಿರೀಕ್ಷೆಗೂ ಮೀರಿದ ಜನದಟ್ಟಣೆ ಇದ್ದಾಗ್ಯೂ ಒಂದು ಕಾರ್ಯಕ್ರಮವನ್ನು ಹೇಗೆ ಯಶಸ್ವಿಯಾಗಿ ನಿರ್ವಹಿಸಬಹುದು ಎಂಬುದಕ್ಕೆ ಇದು ಮಾದರಿ. ಈ ಹಿಂದಿನ ವರ್ಷಗಳಿಗೆ ಹೋಲಿಸಿದರೆ ದುಪ್ಪಟ್ಟು ಜನಸಂಖ್ಯೆ ಇದ್ದಾಗ್ಯೂ ಯಾವುದೇ ಗೊಂದಲಕ್ಕೆ ಆಸ್ಪದ ನೀಡದಂತೆ ಯಶಸ್ವಿಯಾಗಿ ನಿರ್ವಹಿಸಿದ್ದಕ್ಕೆ ಜಿಲ್ಲೆಯ ಎಲ್ಲಾ ಅಧಿಕಾರಿಗಳು ಉಸ್ತುವಾರಿ ಸಚಿವರು ಹಾಗೂ ಸಹನೆಯಿಂದ ಸಹಕರಿಸಿದ ಜನರು ಹಾಗೂ ರಾಜಕಾರಣಿಗಳು ಅಭಿನಂದನಾರ್ಹರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಿದರೂ ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿಯಾಗಿ ಸಮವಸ್ತ್ರದಲ್ಲಿದ್ದಾಗ್ಯೂ, ಸಿನಿಮಾ ಮಂದಿಯೊಬ್ಬರಿಂದ ಹೆಗಲ ಮೇಲೆ ಕೈ ಹಾಕಿಸಿಕೊಂಡದ್ದು, ಸಜ್ಜನಿಕೆಯ ಸಚಿವರೊಂದಿಗೆ ಮಾತನಾಡುವ ಸಂದರ್ಭದಲ್ಲಿ ಸಾಮಾನ್ಯ ವ್ಯಕ್ತಿಯೊಡನೆ ಸಂಭಾಷಿಸದಂತಿರದೆ, ಆಂಗೀಕ ಭಾಷೆಯಲ್ಲಿ ಇನ್ನೂ ಹೆಚ್ಚಿನ ಪ್ರೌಢಿಮೆಯಿಂದ ಕೂಡಿರಬೇಕಾಗಿತ್ತೇನೋ ಅನಿಸುತ್ತದೆ. ಸೇವೆಯಲ್ಲಿ ಹೊಸಬರಾದುದರಿಂದ ಬಹುಶಃ ಮುಂದಿನ ಸೇವಾ ಅನುಭವದಲ್ಲಿ ಗಳಿಸಿಕೊಳ್ಳಬಹುದೇನೋ. **–ಕೆ.ಎಂ. ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು.**

■ ಮೃತರ ಶೀಲವನ್ನು ಶಂಕಿಸಬೇಡಿ!

ಮಾನ್ಯರೆ,

ಶೀಲವನ್ನು ಶಂಕಿಸಿ ಪತ್ನಿಯ ಕೊಲೆ....

ಪತ್ನಿಯ ಶೀಲ ಶಂಕಿಸಿ ಕೊಲೆ ಮಾಡಿದ ಪತಿಯ ಬಂಧನ!

ಪತ್ನಿಯ ಶೀಲವನ್ನು ಶಂಕಿಸಿ ಹತ್ಯೆಗೈದ ಪತಿ!

ಇಂತಹ ಶೀರ್ಷಿಕೆಯಡಿಯಲ್ಲಿ ಕೊಲೆ–ಹತ್ಯೆಯಂತಹ ಸುದ್ದಿಗಳು ವರದಿಯಾಗುತ್ತಿರುತ್ತವೆ.

ಇದು ಕೊಲೆ/ಹತ್ಯೆ ಅಷ್ಟೇ....

ಪತ್ನಿಯ ಶೀಲವನ್ನು ಶಂಕಿಸಿ ಕೊಲೆ ಮಾಡಿದ್ದಾನೆ ಎಂಬುದು ಕೊಲೆಗಾರನ ಸಮಜಾಯಿಷಿ ಅಷ್ಟೇ!

ಕೊಲೆಗಾರನ ಮಾತನ್ನು ನಂಬಿ ಮೃತ ಮಹಿಳೆಯ ಶೀಲವನ್ನು ಶಂಕಿಸಿ ಸಾರ್ವಜನಿಕವಾಗಿ ಅವಮಾನಿಸುವುದು ಅಮಾನವೀಯ.

ಇನ್ನು ಮುಂದಾದರೂ ಈ ತಪ್ಪು ಮರುಕಳಿಸದಿರಲಿ.

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

■ ಗ್ರಾಮಕ್ಕೊಂದು ಮಾದರಿ ಶೌಚಾಲಯ ನಿರ್ಮಾಣವಾಗಲಿ

ಮಾನ್ಯರೆ,

ಗ್ರಾಮೀಣ ಪ್ರದೇಶಗಳಲ್ಲಿ ಹಬ್ಬ, ಹರಿದಿನಗಳು, ಜಾತ್ರೆಗಳು ಹಾಗೂ ಸರ್ಕಾರಿ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಇಂತಹ ಸಂದರ್ಭದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಭೇಟಿ ನೀಡುತ್ತಾರೆ. ಇಂತಹ ಸಂದರ್ಭದಲ್ಲಿ ಸಾಮೂಹಿಕ ಶೌಚಾಲಯ ಹಾಗೂ ಸ್ನಾನ ಗೃಹಗಳನ್ನು ನಿರ್ಮಾಣ ಮಾಡಿದರೆ ಪ್ರತಿಯೊಬ್ಬರಿಗೂ ಅನುಕೂಲವಾಗುತ್ತದೆ. ಆದ್ದರಿಂದ ಪಂಚಾಯತ್‌ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಪ್ರತಿಯೊಂದು ಗ್ರಾಮದಲ್ಲೂ ಮಾದರಿ ಶೌಚಾಲಯವನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಿ. **–ನಾಗೇಶ್, ಮಾನಸಗಂಗೋತ್ರಿ, ಮೈಸೂರು**

■ ಸಮೀಕ್ಷೆಯಲ್ಲಿ ಭಾಗವಹಿಸುವುದು ವೈಯಕ್ತಿಕ ವಿಚಾರ

ಮಾನ್ಯರೆ,

ರಾಜ್ಯದಲ್ಲಿ ನಡೆಯುತ್ತಿರುವ ಸಾಮಾಜಿಕ, ಆರ್ಥಿಕ ಹಾಗೂ ಜಾತಿ ಸಮೀಕ್ಷೆಯಲ್ಲಿ ಮಾಹಿತಿ ನೀಡುವುದು ಕಡ್ಡಾಯವಲ್ಲ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ಇನ್ಫೋಸಿಸ್‌ನ ಸಂಸ್ಥಾಪಕರಾದ ನಾರಾಯಣಮೂರ್ತಿ ಮತ್ತು ಸುಧಾಮೂರ್ತಿ ದಂಪತಿ ನಾವುಗಳು ಈ ಜಾತಿ ಸಮೀಕ್ಷೆಯಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳಿರುವುದರಲ್ಲಿ ತಪ್ಪೇನಿದೆ? ಆದರೆ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೇರಿದಂತೆ ಕೆಲವು ರಾಜಕಾರಣಿಗಳು ಅವರನ್ನು ವೈಯಕ್ತಿಕವಾಗಿ ಹೀಯಾಳಿಸುವುದು ಎಷ್ಟರ ಮಟ್ಟಿಗೆ ಸರಿ? ಒಬ್ಬ ರಾಜ್ಯಸಭಾ ಸದಸ್ಯರನ್ನು ಅವರೇನು ಬೃಹಸ್ಪತಿಗಳ ಎಂದು ನಿಂದಿಸುವುದು ಮುಖ್ಯ ಮಂತ್ರಿ ಸ್ಥಾನಕ್ಕೆ ಗೌರವ ತರುತ್ತದೆಯಾ? ಇದನ್ನು ರಾಜಕೀಯವಾಗಿ ಬಳಸಿಕೊಂಡು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಇದು ಗೂಂಡಾಗಿರಿಯ ದಬ್ಬಾಳಿಕೆಯ ವರ್ತನೆ ಎಂದು ಹೇಳುವುದು ಸಹ ಸರಿಯಲ್ಲ. ಜಾತಿ ಸಮೀಕ್ಷೆಯಲ್ಲಿ ಭಾಗವಹಿಸುವುದು ಅವರವರ ವೈಯಕ್ತಿಕ ವಿಚಾರ. ಇದರಲ್ಲಿ ರಾಜಕೀಯ ಮಾಡುವುದು ಏನಿದೆ?

– ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು



ಕಾರ್ಕಳ ಆನಂದ ಭಟ್

ಮೊ: 7676554198

ಫ್ಲಾಟ್ ನಂ. 204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, OPP H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲೆ

ದಿಕ್ಕುದೆಸೆ

ಭಾರತದ ಬಾನಂಗಳ ಆಳಿದ್ದ ಮಿಗ್–21ಕ್ಕೆ ಭಾವನಾತ್ಮಕ ವಿದಾಯ

ಕಳೆದ ಆರು ದಶಕಗಳಿಂದ ಭಾರತೀಯ ವಾಯುಪಡೆಯಲ್ಲಿ (IAF) ಮಹೋನ್ನತ ಸೇವೆ ಸಲ್ಲಿಸಿದ ಲೋಹದ ಹಕ್ಕಿ ಮಿಗ್–21 ಯುದ್ಧ ವಿಮಾನ ಇತಿಹಾಸದ ಪುಟ ಸೇರಿದೆ. ಬಾನಂಗಳದಲ್ಲಿ ಸಾಟಿ ಇಲ್ಲದ ಹೋರಾಟದ ಸಾಮರ್ಥ್ಯದಿಂದ ಕಳೆದ 60 ವರ್ಷಗಳಿಂದ ತಾಯಿ ಭಾರತಮಾತೆ ಬಾನನ್ನು ರಕ್ಷಿಸುವಲ್ಲಿ ಸಾರ್ಥಕತೆಯನ್ನು ಕಾಣುವುದರೊಂದಿಗೆ ಮಿಗ್–21 ನೇಪಥ್ಯಕ್ಕೆ ಸಂದಿದೆ. ಶತ್ರುಗಳ ಯುದ್ಧ ವಿಮಾನಗಳು ಭಾರತದ ಗಡಿಯತ್ತ ನುಗ್ಗುತ್ತಿದ್ದಾಗ ಎದುರಾಳಿಯ ಸಾಮರ್ಥ್ಯ ಹಾಗೂ ತನ್ನ ಪರಿಮಿತಿಯನ್ನು ಲೆಕ್ಕಿಸದೆ ಸಿಡಿಲಾರ್ಭಟದಿಂದ ಘರ್ಜಿಸುತ್ತಾ, ಮಿಂಚಿನಂತೆ ಎರಗುತ್ತಿತ್ತು. ಭಾರತದ ಬಾನನ್ನು ಗರುಡನಂತೆ, ಹನುಮನಂತೆ ರಕ್ಷಿಸಿತು ಮಿಗ್–21. ಆಗಸದಲ್ಲಿ ಹಾರುವಾಗ ಹದ್ದಿನ ಕಣ್ಣಿನಿಂದ ಭಾರತದ ನೆಲ, ಜಲ ಪ್ರದೇಶಗಳ ಮೇಲೆ ನಿಗಾ ವಹಿಸಿ ರಕ್ಷಿಸುತ್ತಿತ್ತು. ಕಳೆದ 26.09.2025ರಂದು ಚಂಡೀಗಢದ ವಾಯು ನೆಲೆಯಲ್ಲಿ ರಕ್ಷಣಾ ಸಚಿವ ರಾಜನಾಥ ಸಿಂಗ್‌ರ ಸಮ್ಮುಖದಲ್ಲಿ ಸೇವೆಯಿಂದ ಮುಕ್ತನಾಗುವ ಮೂಲಕ ಮಿಗ್–21 ಭಾರತೀಯ ವಾಯುಪಡೆ ಹಾಗೂ ದೇಶದ ಉಜ್ವಲ ಇತಿಹಾಸದ ಒಂದು ಭಾಗವಾಯಿತು.



> 1963ರಲ್ಲಿ ಮೊದಲ ಬಾರಿಗೆ ಬಂದಿಳಿದ ಚಂಡೀಗಢ ವಾಯು ನೆಲೆಯಲ್ಲೇ ಮಿಗ್–21ಕ್ಕೆ ಅಂತಿಮ ವಿದಾಯ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ರಕ್ಷಣಾ ಸಚಿವರಾದ ರಾಜನಾಥ್‌ಸಿಂಗ್‌ರು ಮಿಗ್–21ರ ಕೊಡುಗೆಯನ್ನು ಸ್ಮರಿಸುತ್ತಾ 'ಮಿಗ್–21 ಯುದ್ಧ ವಿಮಾನ ಅಥವಾ ಯಂತ್ರವಷ್ಟೇ ಅಲ್ಲ. 1971ರ ಯುದ್ಧದಿಂದ ಆಪರೇಷನ್ ಸಿಂಧೂರ್‌ವರೆಗೆ ನಮ್ಮ ಸೇನೆಗೆ ಮಿಗ್–21 ನಿರಂತರವಾಗಿ ಬಲ ನೀಡಿತ್ತು. ಹಲವು ವೀರಗಾಥೆಗೆ ಸಾಕ್ಷಿಯಾಗಿತ್ತು. ಭಾರತ–ರಷ್ಯಾ ನಡುವಿನ ರಕ್ಷಣಾ ಪಾಲುದಾರಿಕೆಯ ಸಂಕೇತ. ಧೈರ್ಯ, ತ್ಯಾಗ ಮತ್ತು ಶ್ರೇಷ್ಠತೆಯೊಂದಿಗೆ ತ್ರಿವರ್ಣ ಧ್ವಜದ ಕೀರ್ತಿ ಇನ್ನಷ್ಟು ಹೆಚ್ಚಿಸಿದೆ' ಎಂದು ಹೃದಯ ಪೂರ್ವಕವಾಗಿ ಶ್ಲಾಘಿಸಿದರು.

ಭಾರತದ ಆಗಸಕ್ಕೆ ಆಪದ್ಬಾಂಧವನಂತಿತ್ತು: ಅಮೇರಿಕ, ಪಾಶ್ಚಾತ್ಯ ದೇಶಗಳು ಭಾರತಕ್ಕೆ ಯುದ್ಧ ವಿಮಾನಗಳನ್ನು ಪೂರೈಸಲು ನಿರಾಕರಿಸಿದವು. ರಷ್ಯಾವೂ ಆ ದಿನಗಳಲ್ಲಿ ಅತ್ಯಾಧುನಿಕ ಎನಿಸಿದ ಮಿಗ್–21 ಯುದ್ಧ ವಿಮಾನಗಳನ್ನು ಭಾರತಕ್ಕೆ ನೀಡಿತು. ಭಾರತಕ್ಕೆ ಬಂದ ದಿನದಿಂದ ಮಿಗ್–21 ಭಾರತವನ್ನು ರಕ್ಷಿಸುವುದರೊಂದಿಗೆ ರಷ್ಯಾ–ಭಾರತದ ಮಧ್ಯೆ ಬಲವಾದ ವಿಶ್ವಾಸಾರ್ಹವಾದ ಬಾಂಧವ್ಯವನ್ನು ಬೆಸೆದಿದೆ. ಆ ದಶಕಗಳಲ್ಲಿ ಕಟ್ಟಾ ಕಮ್ಯೂನಿಸ್ಟ್ ರಾಷ್ಟ್ರವಾಗಿದ್ದ ರಷ್ಯಾ ತನ್ನ ಸಿದ್ಧಾಂತಕ್ಕೆ ವಿರುದ್ಧವಾದ ವಿಶ್ವದ ಅತೀ ದೊಡ್ಡ ಪ್ರಜಾತಂತ್ರ ಆಡಳಿತ ವ್ಯವಸ್ಥೆ ಹೊಂದಿದ್ದ ಭಾರತಕ್ಕೆ ಯುದ್ಧ ವಿಮಾನ ನೀಡಿದ್ದು ವಿಶೇಷ ವಿದ್ಯಮಾನವಾಗಿತ್ತು.

ಮಿಗ್–21 ಯುದ್ಧ ವಿಮಾನ: ಮಿಗ್–21 ಒಂದು ಸೂಪರ್ ಸೋನಿಕ್–ಇಂಟರ್‌ಸೆಪ್ಟರ್ ಯುದ್ಧ ವಿಮಾನವಾಗಿದೆ. ರಷ್ಯಾದ ಮಿಕೋಯನ್–ಗುರೆವಿಚ್ ವಿನ್ಯಾಸ ಮತ್ತು ನಿರ್ಮಾಣ ಕಂಪನಿಯು ಇದರ ವಿನ್ಯಾಸ ರಚಿಸಿ ಅಭಿವೃದ್ಧಿಪಡಿಸಿತು. ಸೂಪರ್ ಸೋನಿಕ್ ವಿಮಾನಗಳ ಇತಿಹಾಸದಲ್ಲಿ ಅತ್ಯಧಿಕವಾಗಿ ಅಭಿವೃದ್ಧಿಪಡಿಸಲ್ಪಟ್ಟ ಯುದ್ಧ ವಿಮಾನ ಎಂಬ ವಿಶೇಷತೆಯೊಂದಿಗೆ ಈ ವಿಮಾನ 1955ರಲ್ಲಿ ತನ್ನ ಮೊದಲ ಹಾರಾಟ ನಡೆಸಿತು. ಮಿಗ್–21 ಸಿಂಗಲ್ ಸೀಟರ್ ಯುದ್ಧ ವಿಮಾನವಾಗಿತ್ತು. ಪ್ರತಿ ಸೆಕೆಂಡಿಗೆ 225 ಮೀಟರ್ ಮೇಲೇರುವ ಸಾಮರ್ಥ್ಯದೊಂದಿಗೆ ಪ್ರತಿ ಗಂಟೆಗೆ ಗರಿಷ್ಠ 2175 ಕಿ.ಮೀ. ವೇಗದಲ್ಲಿ ಸಂಚರಿಸುತ್ತಿತ್ತು. ಈ ಯುದ್ಧ ವಿಮಾನವು 23 ಎಂ.ಎಂ.ಟ್ವಿನ್ (Twin) ಬ್ಯಾರೆಲ್ ಗನ್ ಹೊಂದಿತ್ತು. ಇದಲ್ಲದೇ ಸುಮಾರು ಎರಡು ಸಾವಿರ ಕೆ.ಜಿ. ತೂಕದ ಬಾಂಬ್‌ಗಳು, ರಾಕೆಟ್‌ಗಳು, ಕ್ಷಿಪಣಿಗಳನ್ನು ಹೊತ್ತೊಯ್ಯುವ ಸಾಮರ್ಥ್ಯ ಹೊಂದಿತ್ತು. ರಷ್ಯಾದ ಕಂಪನಿಯು ನಿರ್ಮಿಸಿದ ಒಟ್ಟು 11500 ಮಿಗ್–21 ಯುದ್ಧ ವಿಮಾನಗಳಲ್ಲಿ ಭಾರತವೇ 872 ವಿಮಾನಗಳನ್ನು ಖರೀದಿಸಿತ್ತು.

ತಾಯಿ ಭಾರತ ಮಾತೆ ಸೇವೆಯಲ್ಲಿ ಮಿಗ್–21: 1963ರಲ್ಲಿ ಭಾರತೀಯ ವಾಯುಪಡೆಗೆ ಸೇರುವಾಗಲೇ ಈ ಲೋಹದ ಹಕ್ಕಿ ತನ್ನನ್ನು ತಾಯಿ ಭಾರತ ಮಾತೆಯ ಸೇವೆಗೆ ಸಮರ್ಪಿಸಿಕೊಂಡಿತ್ತು. ಉತ್ತರದಲ್ಲಿ ಶೂನ್ಯಕ್ಕಿಂತ ಕಡಿಮೆ ತಾಪಮಾನವುಳ್ಳ ಉನ್ನತ ಹಿಮಾಲಯನ್ ಪರ್ವತೀಯ ಗಡಿಗಳು, ಪಶ್ಚಿಮದಲ್ಲಿ ಐವತ್ತು ಡಿಗ್ರಿಗಿಂತ ಹೆಚ್ಚು ತಾಪಮಾನವುಳ್ಳ ರಾಜಾಸ್ಥಾನದ ಥಾರ್ ಮರುಭೂಮಿಯ ಪ್ರದೇಶ ಹಾಗೂ ಸುಮಾರು ಏಳು ಸಾವಿರ ಕಿ.ಮೀ. ಉದ್ದದ ಕರಾವಳಿ ತೀರ, ಈ ರೀತಿ ವಿಭಿನ್ನ ಭೂ ವಾತಾವರಣದಲ್ಲಿ ತನ್ನ ತಾಂತ್ರಿಕ ಪರಿಮಿತಿ ಮೀರಿ ಭಾರತವನ್ನು ರಕ್ಷಿಸಬೇಕೆಂಬ ಪ್ರಜ್ಞೆ ಹಾಗೂ ಭಾರತೀಯ ಪೈಲೆಟ್‌ಗಳು ತನ್ನಿಂದ ಸಮರ್ಪಕವಾಗಿ ಕಾರ್ಯ ಸಾಧಿಸುವರೆಂಬ ವಿಶ್ವಾಸ ದೊಂದಿಗೆ ಭಾರತಕ್ಕೆ ಆಗಮಿಸಿತು. ಭಾರತೀಯ ಪೈಲಟ್‌ಗಳ ನಿರೀಕ್ಷೆಗೂ ಮೀರಿ ಮಿಗ್–21 ತನ್ನ ಹೋರಾಟದ ಸಾಮರ್ಥ್ಯವನ್ನು ತೋರಿಸಿತು. ಮಿಗ್–21 ತನಗಿಂತ ಅತ್ಯಾಧುನಿಕ, ಅಜೇಯವೆನಿಸಿದ ಅಮೇರಿಕದ ಸೇಬರ್‌ಜೆಟ್, ಎಫ್ ಸರಣಿಯ ಅನೇಕ ವಿಮಾನಗಳನ್ನು ಹೊಡೆದುರುಳಿಸಿ ಅಮೇರಿಕವನ್ನೇ ಬೆಚ್ಚಿ ಬೀಳಿಸಿತ್ತು. ಭಾರತದ ಚಾಣಾಕ್ಷ ಪೈಲಟ್‌ಗಳಿಂದಾಗಿ ಮಿಗ್–21 ಆಗಸದಲ್ಲಿ ನಡೆಯುತ್ತಿದ್ದ Dog Fightಗಳಲ್ಲಿ ಎಫ್ ಶ್ರೇಣಿಯ ವಿಮಾನಗಳೆದುರು ಮೇಲುಗೈ ಸಾಧಿಸುತ್ತಿದ್ದವು. 1965ರ ಭಾರತ–ಪಾಕ್ ಯುದ್ಧದಲ್ಲಿ ಮೊದಲ ಬಾರಿಗೆ ಭಾರತೀಯ ವಾಯು ಪ್ರದೇಶಕ್ಕೆ ರಕ್ಷಣೆ ನೀಡುವುದರೊಂದಿಗೆ ಸೀಮಿತ ಪ್ರಮಾಣದ ಹೋರಾಟದಲ್ಲಿ ಪಾಲ್ಗೊಂಡಿದ್ದವು. ಪಾಕ್ ವಾಯು ಪಡೆಯ ಅಧಿಕಾರಿಗಳು, ಅಮೇರಿಕ ನಿರ್ಮಿತ ಅತ್ಯಾಧುನಿಕ ಯುದ್ಧ ವಿಮಾನ ಚಲಾಯಿಸುತ್ತಿದ್ದ ತಮ್ಮ ಪೈಲೆಟ್‌ಗಳಿಗೆ ಮಿಗ್–21ರೊಂದಿಗೆ ನೇರ ಹೋರಾಟ ನಡೆಸದಂತೆ ಸಂದೇಶಗಳನ್ನು ನೀಡಿದ್ದರು ಎಂದು ನಂಬಲಾಗಿದೆ. 1971ರ ಇಂಡೊ–ಪಾಕ್ ಕದನದಲ್ಲಿ ಮತ್ತೆ ಮಿಗ್–21 ವಿಮಾನಗಳು ವಾಯು ರಕ್ಷಣೆಯನ್ನು ನೀಡುವುದರೊಂದಿಗೆ ಪಾಕಿಸ್ಥಾನದ ಕೆಲವು ಎಫ್–104ರಂತಹ ಅತ್ಯಾಧುನಿಕ ಫೈಟರ್ ವಿಮಾನಗಳನ್ನು ಹೊಡೆದುರುಳಿಸಿದವು. ಬಾಂಗ್ಲಾ ದೇಶ ವಿಮೋಚನೆಗೊಳಿಸಿದ ಈ ಯುದ್ಧದಲ್ಲಿ ಪಾಕ್ ವಾಯು ಸೇನೆಯು ಹೊಂದಿದ್ದ ಏಕೈಕ ವಾಯು ನೆಲೆಯಾದ ತೇಜ್‌ಗಾಂವ್‌ನಿಂದ ನಿರಂತರ ದಾಳಿ ನಡೆಸುತ್ತಿತ್ತು. ಭಾರತೀಯ ವಾಯುಪಡೆಯ ಮಿಗ್–21 ವಿಮಾನಗಳು ಈ ನೆಲೆಯನ್ನು ನಾಶಪಡಿಸಿದ ನಂತರ ಪಾಕ್ ಸೇನಾಧಿಕಾರಿ ಲೆಜ। ನಿಯಾಜಿ ಹಾಗೂ 93000 ಪಾಕ್ ಸೈನಿಕರು ಶರಣಾಗತರಾಗಿದ್ದರು. ಈ ಯುದ್ಧಾನಂತರ ಮಿಗ್–21ರ ಅನೇಕ ಪೈಲಟ್‌ಗಳು ಅಪ್ರತಿಮ ಸಾಹಸಕ್ಕಾಗಿ ಶೌರ್ಯ ಪ್ರಶಸ್ತಿಗಳನ್ನು ಪಡೆದಿದ್ದರು. ಈ ರೀತಿ 1971ರ ಭಾರತ–ಪಾಕ್ ಯುದ್ಧದಲ್ಲಿ ಭಾರತಕ್ಕೆ ಜಯ ಲಭಿಸುವಲ್ಲಿ ಮಿಗ್–21 ವಿಮಾನಗಳು ಮಹತ್ವದ ನಿರ್ಣಾಯಕ ಪಾತ್ರ ವಹಿಸಿದ್ದವು.

ಕಾರ್ಗಿಲ್ ಕದನದಲ್ಲಿ ಮಿಗ್–21ರ ಪಾತ್ರ: 1971ರ ಯುದ್ಧವಾದ ಕಾಲು ಶತಮಾನದ ನಂತರ 1999ರ ಮೇ ಯಲ್ಲಿ ಕಾರ್ಗಿಲ್ ಕದನ ನಡೆಯಿತು. ಒಂದೆರಡು ದಿನಗಳಲ್ಲಿ ಮುಗಿಯಬಹುದು ಎಂದು ಭಾವಿಸಲಾದ ಈ ಸಂಘರ್ಷವು ಸಂಪೂರ್ಣ ಯುದ್ಧವಾಗಿ ಪರಿವರ್ತನೆಗೊಂಡಿತು. ಇದಕ್ಕೆ ಕಾರಣ ಪಾಕ್ ಸೇನೆ ನಡೆಸಿದ ಪೂರ್ವ ತಯಾರಿ. ಹಿಮಚ್ಛಾದಿತ ಟೈಗರ್ ಹಿಲ್ಸ್, ತೊಲೊಲಿಂಗ್ ಹಾಗೂ ಬಟಾಲಿಕ್ ವಲಯದ ಕಡಿದಾದ ಪರ್ವತಗಳ ಶಿಖರಗಳಲ್ಲಿ ಪಾಕ್ ಸೇನೆಯು ಸುಸಜ್ಜಿತ ಬಂಕರ್‌ಗಳು ಹಿಮ ಡೇರೆಗಳು ಹಾಗೂ ವ್ಯೂಹಾತ್ಮಕ ಸ್ಥಾನಗಳಲ್ಲಿ ಸ್ಥಾಪಿಸಿದ ಫಿರಂಗಿಗಳಿಂದ ಮುನ್ನುಗ್ಗುತ್ತಿದ್ದ ಭಾರತೀಯ ಸೈನಿಕರ ಮೇಲೆ ನಿರಂತರವಾಗಿ ಸೆಲ್ ಮತ್ತು ಗುಂಡಿನ ದಾಳಿ ನಡೆಸುತ್ತಿದ್ದರು. ಭಾರತೀಯ ಸೇನೆಯಲ್ಲಿ ಭಾರೀ ಪ್ರಮಾಣದಲ್ಲಿ ಸಾವು–ನೋವುಗಳು ಸಂಭವಿಸಿದವು. ಶತ್ರುಗಳ ನೆಲೆಯನ್ನು ನಿಖರವಾಗಿ ಪತ್ತೆ ಹಚ್ಚುವ ತಂತ್ರಜ್ಞಾನವೂ ಈ ಮಿಗ್–21 ವಿಮಾನಗಳಲ್ಲಿ ಸಮರ್ಪಕವಾಗಿರಲಿಲ್ಲ. ಅಮೇರಿಕವು ತನ್ನ ಸ್ಯಾಟ್‌ಲೈಟ್‌ಗಳಿಂದ ಸೆರೆ ಹಿಡಿದ ಪಾಕ್ ನೆಲೆಗಳ ಚಿತ್ರಗಳಿರುವ ದತ್ತಾಂಶಗಳನ್ನು ಭಾರತಕ್ಕೆ ನೀಡಲು ನಿರಾಕರಿಸಿತು. ಈಗ ಮತ್ತೆ ಮಿಗ್–21ಕ್ಕಿಂತ ಸುಧಾರಿತ ಮಿಗ್–21 Bison ಶ್ರೇಣಿಯ ವಿಮಾನಗಳು ಕಾರ್ಯಾಚರಣೆಗಿಳಿದವು. ಈ ಯುದ್ಧ ವಿಮಾನಗಳಿಗೆ ಶತ್ರು ನೆಲೆಗಳ ನಿಖರ ಮಾಹಿತಿ ಪತ್ತೆ ಹಚ್ಚಲು ತಿಳಿದಿಲ್ಲದಿದ್ದರೂ, ಭಾರತೀಯ ಪೈಲೆಟ್‌ಗಳು ಇಪ್ಪತ್ತು ಸಾವಿರ ಅಡಿಗಿಂತ ಹೆಚ್ಚು ಎತ್ತರದಿಂದ ದಾಳಿ ನಡೆಸಿದರು. ಜಿಪಿಎಸ್ ಆಧಾರದಲ್ಲಿ ಪೈಲೆಟ್‌ಗಳು ಅತ್ಯಂತ ಚಾಣಾಕ್ಷತನದಿಂದ ವಿಮಾನ ಬಳಸಿ ನಡೆಸಿದ ದಾಳಿಗಳು ಕರಾರುವಾಕ್ಕಾಗಿ ಶತ್ರುಗಳ ಬಹುತೇಕ ನೆಲೆಗಳನ್ನು ನಾಶಪಡಿಸಿದರು. ಮಿಗ್–21 ಈ ಅಗ್ನಿ ಪರೀಕ್ಷೆಯಲ್ಲೂ ಯಶಸ್ವಿಯಾಗಿ ಭಾರತಕ್ಕೆ ವಿಜಯ ಪ್ರಾಪ್ತಿಯಾಗುವಲ್ಲಿ ಪ್ರಮುಖ ಪಾತ್ರ ವಹಿಸಿತು. ಆದರೆ ಕಾರ್ಗಿಲ್ ಯುದ್ಧದಲ್ಲಿ ವಿಜಯ ಸಾಧಿಸುವಲ್ಲಿ ಭಾರತದ ಸುಮಾರು 526 ಯೋಧರು ಹುತಾತ್ಮರಾದರು.

ವಿಜಯ ತಂದಿತ್ತ ವಿಮಾನಗಳಿಗೆ ವಿರೋಚಿತ ವಿದಾಯ: ಸಾಮಾನ್ಯವಾಗಿ ಯಂತ್ರೋಪಕರಣಗಳು ಕೆಲವು ವರ್ಷಗಳ ನಂತರ ನಿರುಪಯುಕ್ತವಾಗುತ್ತವೆ. ಯುದ್ಧ ವಿಮಾನಗಳ ಕಾರ್ಯಕ್ಷಮತೆಯ ಅವಧಿಯೂ ತೀರಾ ಕಡಿಮೆಯಾಗಿರುತ್ತದೆ. ಸಾವಿರಾರು ಕಿ.ಮೀ. ವೇಗದಲ್ಲಿ ಚಲನೆ, ಶತ್ರುಗಳ ಹೊಡೆತದಿಂದ ತಪ್ಪಿಸಿಕೊಂಡು ಶತ್ರು ನೆಲೆ ಮೇಲೆ ಬಾಂಬ್, ಕ್ಷಿಪಣಿ ದಾಳಿಗಳ ಸಂದರ್ಭದಲ್ಲಿ ಯುದ್ಧ ವಿಮಾನಗಳ ಮೇಲೆ ತೀವ್ರ ಒತ್ತಡ ಬೀರುವುದರಿಂದ ವಿಮಾನಗಳ ಕಾರ್ಯಕ್ಷಮತೆ ಕುಸಿಯುತ್ತದೆ. ಈ ಕಾರಣಗಳಿಂದ ಪ್ರತಿಯೊಂದು ದೇಶವು ಪ್ರತಿ ಕಾಲಘಟ್ಟದಲ್ಲಿ ಮುಂದಿನ ತಲೆಮಾರಿನ ಅತ್ಯಾಧುನಿಕ ವಿಮಾನಗಳ ಸ್ವತಃ ತಯಾರಿಸಿ ಅಥವಾ ಖರೀದಿಸುತ್ತಾರೆ. ಈ ಪ್ರಕ್ರಿಯೆಗಳು ಮಾತ್ರ ಬಹಳ ನಿಧಾನವಾಗಿರುತ್ತವೆ. ಈ ರೀತಿಯ ಸಮಸ್ಯೆಗಳಿದ್ದರೂ ಭಾರತದಲ್ಲಿ ಆಳುವವರ ನಿರ್ಲಕ್ಷ್ಯ, ಬೇಜವಾಬ್ದಾರಿ, ಸ್ವಾರ್ಥದಿಂದಾಗಿ ಎರಡೂ ಸಂಭವಿಸಲಿಲ್ಲ. ಅಪವಾದವೆಂಬಂತೆ ಅಟಲ್ ಬಿಹಾರಿ ವಾಜಪೇಯಿಯವರು ತೇಜಸ್ ಲಘು ಯುದ್ಧ ವಿಮಾನಗಳ ನಿರ್ಮಾಣಕ್ಕೆ ಚಾಲನೆ ನೀಡಿದ್ದರು. ಆದರೆ ನಂತರ ಬಂದ ಯುಪಿಎ ಸರಕಾರವು ದೇಶದ ರಕ್ಷಣೆಯನ್ನು ಸಂಪೂರ್ಣ ಕಡೆಗಣಿಸಿತು. ಯುಪಿಎ ಸರಕಾರದ ಅವಧಿಯಲ್ಲಿ ದೇಶಕ್ಕೆ ಬೇಕಾದ ಅತ್ಯಾಧುನಿಕ ಯುದ್ಧ ವಿಮಾನಗಳನ್ನು ತಯಾರಿಸುವ ಕಂಪನಿಗಳಿಗಿಂತ ಹೆಚ್ಚು ಕಿಕ್‌ಬ್ಯಾಕ್ ಕೊಡುವ ಕಂಪನಿಗಳ ಅನ್ವೇಷಣೆಯಲ್ಲಿ ಕಾಲಹರಣ ಮಾಡಿತ್ತು ಎಂಬ ಆರೋಪ ಬಂದಿತ್ತು. ಇದರ ಪರಿಣಾಮ ಅರ್ವತ್ತು ವರ್ಷಗಳ ಕಾಲ ಕೇವಲ ಮಿಗ್–21 ವಿಮಾನಗಳೇ ಭಾರತದ ಗಡಿಗಳ ರಕ್ಷಣೆಯ ಹೊಣೆ ಹೊರಬೇಕಾಯಿತು.

ಮಿಗ್–21ನ್ನು ವಾಯುಪಡೆಯ ಸೇವೆಯಿಂದ ಹಿಂತೆಗೆದುಕೊಳ್ಳಲು 2000 ಇಸವಿಯಲ್ಲೇ ನಿರ್ಧರಿಸಲಾಗಿತ್ತು. ಆದರೆ ಅತ್ಯಾಧುನಿಕ ಯುದ್ಧ ವಿಮಾನಗಳ ಆಗಮನದಲ್ಲಾದ ವಿಳಂಬದಿಂದ ಮಿಗ್–21ರ ನಿವೃತ್ತಿಯನ್ನು ಮುಂದೂಡಲಾಯಿತು. ಮಿಗ್–21 ಎಫ್.ಎಲ್.ಗೆ 2013ರಲ್ಲಿ ಮಿಗ್–21 ಎಂ ಮತ್ತು ಮಿಗ್–21 ಬೈಸನ್ ವರ್ಗದ ವಿಮಾನಗಳಿಗೆ 2019ರಲ್ಲಿ ವಿದಾಯ ಕೋರಲಾಯಿತು.

ಈ ರೀತಿ ಆಧುನಿಕ ವಿಮಾನಗಳ ನಿಯೋಜನೆಯಲ್ಲಾಗುತ್ತಿದ್ದ ವಿಳಂಬವನ್ನು ಅರ್ಥ ಮಾಡಿಕೊಂಡಂತೆ ಮಿಗ್–21 ಭಾರತದ ರಕ್ಷಣೆಯ ಜವಾಬ್ದಾರಿ ವಹಿಸಿಕೊಂಡಿತು. 1965, 1971, 1999ರಲ್ಲಾದ ಮೂರು ಯುದ್ಧಗಳಲ್ಲಿ ಮಿಗ್ ವಿಮಾನಗಳು ಅಪ್ರತಿಮವಾಗಿ ಹೋರಾಡಿದವು. ಪ್ರತಿ ಯುದ್ಧದಲ್ಲಿ ತನಗಿಂತ ಅತ್ಯಾಧುನಿಕವಾದ ಶತ್ರು ದೇಶಗಳ ವಿಮಾನಗಳನ್ನು ಹೊಡೆದುರುಳಿಸಿತು.

ದೇಶದ ನೂರಾರು ಪೈಲಟ್‌ಗಳಿಗೆ ತರಬೇತಿ ನೀಡಿತು. ಆದರೆ ತನ್ನದಲ್ಲದ ತಪ್ಪಿಗೆ ಅಪಖ್ಯಾತಿಯನ್ನೂ ಪಡೆಯಿತು. ಮಿಗ್–21 ತನ್ನ ಅರ್ವತ್ತು ವರ್ಷಗಳ ರಾಷ್ಟ್ರ ಸೇವೆಯಲ್ಲಿ ಅತೀ ಹೆಚ್ಚು ಅಪಘಾತ ಪ್ರಮಾಣ ಹೊಂದಿದ್ದ ಯುದ್ಧ ವಿಮಾನವೆಂಬ ಕುಖ್ಯಾತಿ ಗಳಿಸಿತು. 1963ರಲ್ಲಿ ಭಾರತೀಯ ವಾಯು ಪಡೆ ಸೇರ್ಪಡೆಯಾದ ದಿನದಿಂದ ಈವರೆಗೆ ನಡೆದ 400ಕ್ಕೂ ಅಧಿಕ ಅಪಘಾತಗಳಲ್ಲಿ 200 ಪೈಲಟ್‌ಗಳು ಮೃತರಾಗಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಇತರ ವಿಮಾನಗಳು ಪತನಗೊಂಡಿದ್ದವು. ಆದರೆ ಮಿಗ್–21ನ್ನು ಮಾತ್ರ ಹಾರುವ ಶವ ಪೆಟ್ಟಿಗೆ (Flying Coffin). ವಿಧವೆ ನಿರ್ಮಾತೃ (Widow Maker) ಎಂದು ಕೀಳಾಗಿ ಬಿಂಬಿಸಿ ಅಪಮಾನಿಸಿದ್ದು ದುರಂತ ಎನ್ನಬಹುದು. ವಾಸ್ತವವಾಗಿ ಹೊಸ ತಲೆಮಾರಿನ ವಿಮಾನಗಳು ಬರುವವರೆಗೂ ಮಿಗ್–21 ದೇಶದ ಬಾನನ್ನು, ಸರಹದ್ದುಗಳನ್ನು ರಕ್ಷಿಸಿತು. ಕೊನೆಯದಾಗಿ 2019ರಲ್ಲಿ ಬಾಲಾಕೋಟ್ ದಾಳಿಯಲ್ಲಿ ವಿಂಗ್ ಕಮಾಂಡರ್ ಅಭಿನಂದನ್ ವರ್ಧಮಾನ ಹಾರಿಸಿದ ಮಿಗ್–21 ಬೈಸನ್ ಯುದ್ಧ ವಿಮಾನವೂ ಪಾಕಿಸ್ತಾನದ F–16ನೊಂದಿಗೆ ನಡೆಸಿದ ಹೋರಾಟದಲ್ಲಿ ತಾನು ಪತನಗೊಳ್ಳುವಾಗ ಪಾಕ್ ವಿಮಾನವನ್ನು ಹೊಡೆದುರುಳಿಸಿತು.

ಕೊನೆಯ ಹಾರಾಟ ಹೃದಯಸ್ಪರ್ಶಿ ವಿದಾಯ: 1963ರಲ್ಲಿ ಮೊದಲ ಬಾರಿಗೆ ಬಂದಿಳಿದ ಚಂಡೀಗಢ ವಾಯು ನೆಲೆಯಲ್ಲೇ ಮಿಗ್–21ಕ್ಕೆ ಅಂತಿಮ ವಿದಾಯ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ರಕ್ಷಣಾ ಸಚಿವರಾದ ರಾಜನಾಥ್ ಸಿಂಗ್‌ರು ಮಿಗ್–21ರ ಕೊಡುಗೆಯನ್ನು ಸ್ಮರಿಸುತ್ತಾ 'ಮಿಗ್–21 ಯುದ್ಧ ವಿಮಾನ ಅಥವಾ ಯಂತ್ರವಷ್ಟೇ ಅಲ್ಲ. 1971ರ ಯುದ್ಧದಿಂದ ಆಪರೇಷನ್ ಸಿಂಧೂರ್‌ವರೆಗೆ ನಮ್ಮ ಸೇನೆಗೆ ಮಿಗ್–21 ನಿರಂತರವಾಗಿ ಬಲ ನೀಡಿತ್ತು. ಹಲವು ವೀರಗಾಥೆಗೆ ಸಾಕ್ಷಿಯಾಗಿತ್ತು. ಭಾರತ–ರಷ್ಯಾ ನಡುವಿನ ರಕ್ಷಣಾ ಪಾಲುದಾರಿಕೆಯ ಸಂಕೇತ. ಧೈರ್ಯ, ತ್ಯಾಗ ಮತ್ತು ಶ್ರೇಷ್ಠತೆಯೊಂದಿಗೆ ತ್ರಿವರ್ಣ ಧ್ವಜದ ಕೀರ್ತಿ ಇನ್ನಷ್ಟು ಹೆಚ್ಚಿಸಿದೆ' ಎಂದು ಹೃದಯ ಪೂರ್ವಕವಾಗಿ ಶ್ಲಾಘಿಸಿದರು.

ವಿದಾಯ ಹಾರಾಟದಲ್ಲಿ ಆಕಾಶ ಗಂಗಾ ಎಲೈಟ್ ಸ್ಕೈ ಡೈವಿಂಗ್ ತಂಡದೊಂದಿಗೆ ಮಿಗ್–21 ಜತೆಯಾಗಿ ಎಂಟು ಸಾವಿರ ಅಡಿ ಎತ್ತರದಿಂದ ತಮ್ಮ ಕೌಶಲ್ಯ ಪ್ರದರ್ಶಿಸಿದವು. ಕೊನೆಯದಾಗಿ ಏರಿಯಲ್ ಸೆಲ್ಯೂಟ್, ವಾಟರ್ ಕೆನನ್ ಸೆಲ್ಯೂಟ್‌ನೊಂದಿಗೆ ಬಾದಲ್ ಮತ್ತು ಪ್ಯಾಂಥರ್ ಫಾರ್ಮೆಷನ್‌ನಲ್ಲಿ ಕೊನೆಯ ಹಾರಾಟ ನಡೆಸಿದವು. ಈ ಕಾರ್ಯಕ್ರಮದಲ್ಲಿ ಹೊಸ ತಲೆಮಾರಿನ ಜಾಗ್ವಾರ್, ತೇಜಸ್ ಯುದ್ಧ ವಿಮಾನಗಳು ಹಿರಿಯಣ್ಣ ಮಿಗ್–21 ನೊಂದಿಗೆ ಹಾರಾಟ ನಡೆಸಿ ಗೌರವ ಸಲ್ಲಿಸಿದವು. ಇದೊಂದು ಭಾವನಾತ್ಮಕವಾದ ಕಾರ್ಯದಂತಿತ್ತು.

ಭಾರತೀಯ ಯೋಧರಿಗೆ ಶಸ್ತ್ರಗಳು, ಯುದ್ಧ ವಿಮಾನ, ನೌಕೆಗಳು ಕೇವಲ ಹೋರಾಡುವ ಸಾಧನಗಳಲ್ಲ. ಇವರು ಈ ಸಾಧನಗಳೊಂದಿಗೆ ಭಾವನಾತ್ಮಕ ಸಂಬಂಧ ರೂಪಿಸಿಕೊಂಡಿದ್ದಾರೆ. ಇವರು ಶಸ್ತ್ರಾಸ್ತ್ರಗಳನ್ನು ತಮ್ಮ ಜೀವನ ಸಂಗಾತಿ ಅಪಾಯದಲ್ಲಿ ಆಪತ್ಬಾಂಧವರೆಂದು ಭಾವಿಸಿದ್ದಾರೆ. ಇವರು ಶಸ್ತ್ರಗಳನ್ನು ಪ್ರೀತಿಸುತ್ತಾರೆ, ಪೂಜಿಸುತ್ತಾರೆ, ಗೌರವಿಸುತ್ತಾರೆ. ಈ ಕಾರಣದಿಂದಾಗಿಯೇ ಮಿಗ್–21ರ ವಿದಾಯ ಸಮಾರಂಭದಲ್ಲಿ ನೆರೆದಿದ್ದ ಸೇನಾಧಿಕಾರಿಗಳ, ಯೋಧರ, ಪೈಲಟ್‌ಗಳ ಕಣ್ಣಾಲಿಗಳು ತೇವವಾಗಿದ್ದವು.

ಮಹದೇಶ್ವರ ಜಾತ್ರೆಯಲ್ಲಿ ಭಾಗಿ...



ಮೈಸೂರು ನಗರ ಬಿಜೆಪಿ ಅಧ್ಯಕ್ಷರೂ ಆದ ಚಾಮರಾಜ ಕ್ಷೇತ್ರದ ಮಾಜಿ ಶಾಸಕ ಎಲ್.ನಾಗೇಂದ್ರ ಅವರು ಕುಂಬಾರಕೊಪ್ಪಲು ಗ್ರಾಮದ ಶ್ರೀ ಮಲೈ ಮಹದೇಶ್ವರ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಗ್ರಾಮದ ಮುಖಂಡರಾದ ನರಸಿಂಹ, ವೆಂಕಟೇಶ್, ಸಂಜೀವಿನಿ ಕುಮಾರ್ ಗೌಡ, ಪ್ರಮೋದ್, ಪ್ರವೀಣ್, ಅರುಣ್, ಮಹೇಶ್, ಅಖಿಲ್, ಅಭಿಷೇಕ್, ಮಂಜು, ಲೋಕೇಶ್ ಮತ್ತಿತರರಿದ್ದರು.

2027ಕ್ಕೆ ಮಾನವ ಸಹಿತ ಗಗನಯಾನಕ್ಕೆ ಇಸ್ರೋ ಸಿದ್ಧತೆ

ನವದೆಹಲಿ, ಅ.23– ಚಂದ್ರಯಾನ–3 ಮೂಲಕ ಇಡೀ ವಿಶ್ವವೇ ಭಾರತದತ್ತ ತಿರುಗಿ ನೋಡುವಂತೆ ಮಾಡಿದ್ದ ಇಸ್ರೋ ಈಗ ಮತ್ತೊಂದು ಇತಿಹಾಸ ಬರೆಯಲು ಸಿದ್ಧವಾಗಿದೆ. 2027ಕ್ಕೆ ಮಾನವ ಸಹಿತ ಗಗನಯಾನಕ್ಕೆ ಇಸ್ರೋ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಇಸ್ರೋ ಅಧ್ಯಕ್ಷ ವಿ.ನಾರಾಯಣ್ ಅವರು ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2027ಕ್ಕೆ ಮಾನವ ಸಹಿತ ಗಗನಯಾನಕ್ಕೆ ಇಸ್ರೋ ಸಿದ್ಧತೆ ನಡೆಸಿದೆ. ಗಗನಯಾನಿಗಳ ಸುರಕ್ಷತಾ ದೃಷ್ಟಿಯಿಂದ ಸಾಕಷ್ಟು ಮುನ್ನೆಚ್ಚರಿಕೆ ತೆಗೆದುಕೊಳ್ಳಲಾಗುತ್ತಿದೆ. ತುರ್ತು ಸಂದರ್ಭಗಳಿಂದ ಬಾಹ್ಯಾಕಾಶಯಾನವು ವಿಫಲಗೊಂಡರೆ, ಅಂತರಿಕ್ಷ ನೌಕೆಯಲ್ಲಿನ ಕ್ರೂ ಮಾಡ್ಯೂಲ್‌ನಿಂದ ಗಗನಯಾನಿಗಳನ್ನು ಕಾಪಾಡಬಹುದು. ಸುರಕ್ಷಿತವಾಗಿ ಪಾರುಮಾಡುವ ಕ್ರೂ ಎಸ್ಕೇಪ್ ಸಿಸ್ಟಮ್ ಸೇರಿ ಎಲ್ಲವನ್ನೂ ಅತ್ಯಂತ ಎಚ್ಚರಿಕೆಯಿಂದ ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ.

ಭಾರತವು 2035ರ ವೇಳೆಗೆ ತನ್ನದೇ ಆದ ಬಾಹ್ಯಾಕಾಶ ನಿಲ್ದಾಣವನ್ನು ಸ್ಥಾಪಿಸಲಿದೆ ವಿಕಸಿತ ಭಾರತ್ 2047 ಅಡಿಯಲ್ಲಿ ಇಸ್ರೋದಿಂದ ಇಎಸ್‌ಟಿಐಸಿ 2025 ಕಾನ್‌ಕ್ಲೇವ್‌ಗೆ ತಯಾರಿ ನಡೆದಿದೆ. ನವೆಂಬರ್ 3 ರಿಂದ 5ರವರೆಗೆ ದೆಹಲಿಯಲ್ಲಿ ಕಾರ್ಯಕ್ರಮ ನಡೆಯಲಿದ್ದು, ಪ್ರಧಾನಿ ಮೋದಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದಿದ್ದಾರೆ. ಈಗಾಗಲೇ ಶೇ.90ರಷ್ಟು ಎಲ್ಲವೂ ಪೂರ್ಣಗೊಂಡಿದ್ದು, ಇನ್ನೂ ಕೊನೆಯ ಹಂತದ ಸಿದ್ಧತೆ ಬಾಕಿಯಿದೆ ಎಂದು ಮಾಹಿತಿ ನೀಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಅ.26, ಡಾ.ವಿಷ್ಣು ಸ್ಮಾರಕದಲ್ಲಿ ಸಂಗೀತಾಮೃತ ಗಾನ ಸಂಭ್ರಮ ಸೀಸನ್-3ರ ಸಂಗೀತ ಗಾಯನ

ಮೈಸೂರು,ಅ.23(ಜಿಎ)-ಡಾ.ವಿಷ್ಣು ವರ್ಧನ್ ಅವರಿಗೆ ಕರ್ನಾಟಕ ರತ್ನ ಪ್ರಶಸ್ತಿ ಘೋಷಣೆಯಾಗಿರುವ ಹಿನ್ನೆಲೆಯಲ್ಲಿ ಸಂಗೀತಾಮೃತ ಗಾನಸಂಭ್ರಮ ವತಿಯಿಂದ ಅ.26ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 6ರವರಗೆ ನ್ಯೂ ಸಂಗೀತಾಮೃತ ಗಾನ ಸಂಭ್ರಮ ಸೀಸನ್-3ರ ಸಂಗೀತ ಗಾಯನ ಕಾರ್ಯಕ್ರಮವನ್ನು ಉದ್ಬೂರು ಗೇಟ್ ಬಳಿ ಇರುವ ಡಾ.ವಿಷ್ಣು ವರ್ಧನ್ ಸ್ಮಾರಕ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಮಾಜ ಸೇವಕ ಎಂ.ಡಿ.ಪಾರ್ಥಸಾರಥಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9 ಗಂಟೆಗೆ ನಡೆಯಲಿರುವ ಕಾರ್ಯಕ್ರಮದಲ್ಲಿ ನಟ ಮಂಡ್ಯ ರಮೇಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಆಯೋಜಕರಾದ ಹರೀಶ್, ಸುಜಾತ, ರಂಗಸ್ವಾಮಿ ಭಾಗವಹಿಸುವರು. ಗಾಯಕರಾದ ರೂಪ್ ಕುಮಾರ್, ನಗುವಿನಹಳ್ಳಿ ಧನರಾಜ್, ಗೋವಿಂದರಾಜು, ಮಹದೇವು, ಶ್ರೀಧರ್, ಶಿವಕುಮಾರ್, ರೇಖಾ ಪ್ರಕಾಶ್, ಅನ್ನಪೂರ್ಣ ಅವರು 50ಕ್ಕೂ ಹೆಚ್ಚು ಗೀತೆಗಳನ್ನು ಲೈವ್ ಹಾಗೂ ಕರೋಕೆ ಮೂಲಕ ಪ್ರಸ್ತುತಪಡಿಸಲಿದ್ದಾರೆ. ಈ ವೇಳೆ ಸಂಗೀತದ ಪ್ರೇಮಿಗಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಕೂಡ ಮಾಡಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಆಯೋಜಕರಾದ ಹರೀಶ್, ಸುಜಾತ, ಗಾಯಕರಾದ ಗೋವಿಂದರಾಜು, ರಂಗಸ್ವಾಮಿ ಉಪಸ್ಥಿತರಿದ್ದರು.

ಮೃಗಾಲಯದ ಅಧ್ಯಕ್ಷ ರಂಗಸ್ವಾಮಿ ಅವರಿಂದ ಪ್ರಾಣಿ-ಪಕ್ಷಿಗಳ ಪರಿಶೀಲನೆ



ಮೃಗಾಲಯದ ನೂತನ ಅಧ್ಯಕ್ಷ ಹಾಡ್ಯ ರಂಗಸ್ವಾಮಿ ಮೃಗಾಲಯದ ಪ್ರಾಣಿ-ಪಕ್ಷಿಗಳನ್ನು ಪರಿಶೀಲಿಸಿದರು. ಈ ವೇಳೆ ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ. ಬಸವರಾಜ್, ಕೆಪಿಸಿಸಿ ಸದಸ್ಯ ಬಿಳುಗಲಿ ಪುರುಷೋತ್ತಮ್, ಸೋಮಸುಂದರ್, ಕಾರ್ಯದರ್ಶಿ ಬಿಳುಗಲಿ ಕುಮಾರ್, ತಗಡೂರು ಮಹದೇವ್‌ನಾಯ್ಕ, ಬಾಲು, ನಾರಾಯಣ್ ನಾಯ್ಕ, ನರಸಿಂಹಮೂರ್ತಿ, ಮೃಗಾಲಯದ ಅಧಿಕಾರಿಗಳು ಇದ್ದರು.

ಬಿಜೆಪಿ-ಜೆಡಿಎಸ್ ಸಮನ್ವಯ ಸಮಿತಿ ರಚನೆಗೆ ನಿರ್ಧಾರ ರಾಜಕೀಯ ದಿವಾಳಿತನಕ್ಕೆ ಸಾಕ್ಷಿ



ಎಚ್.ಎ.ವೆಂಕಟೇಶ್

ಮೈಸೂರು, ಅ. 23- ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ರಾಜ್ಯ ಸರ್ಕಾರದ ವಿರುದ್ಧ ಜಂಟಿಯಾಗಿ ಹೋರಾಡಲು ನಿರ್ಧರಿಸಿದ್ದೇವೆ ಎಂದು ಹೇಳಿರುವುದು ಎರಡು ಪಕ್ಷಗಳ ರಾಜಕೀಯ ದಿವಾಳಿತನವನ್ನು ಎತ್ತಿ ತೋರಿಸುತ್ತದೆ ಎಂದು ಕೆಪಿಸಿಸಿ ವಕ್ತಾರ ಎಚ್.ಎ.ವೆಂಕಟೇಶ್ ಅಭಿಪ್ರಾಯಪಟ್ಟಿದ್ದಾರೆ.

ಲೋಕಸಭಾ ಚುನಾವಣೆ ಕಳೆದು ಒಂದೂವರೆ ವರ್ಷಗಳಾಗಿವೆ. ಈಗ ಸಮನ್ವಯ ಸಮಿತಿ ರಚಿಸುವ ಔಚಿತ್ಯ ಎರಡು ಕುಟುಂಬಗಳ ಮಧ್ಯ ಅಧಿಕಾರ ಹಂಚಿಕೆಗಾಗಿ ಸಮನ್ವಯ ಸಮಿತಿಯೇ ಎಂಬುದನ್ನು ಸ್ಪಷ್ಟಪಡಿಸಬೇಕಾಗಿದೆ.

ಸಮನ್ವಯ ಸಮಿತಿಯ ನಿಜವಾದ ಉದ್ದೇಶ ಬಿ.ವೈ.ವಿಜಯೇಂದ್ರ ಹಾಗೂ ಎಚ್.ಡಿ.ಕುಮಾರಸ್ವಾಮಿಯವರಿಗೆ ತಮ್ಮ ಅಧಿಕಾರ ಕಳೆದುಕೊಳ್ಳುವ ಆತಂಕ ಎದುರಾಗಿದೆ. ತಮ್ಮ ಕುರ್ಚಿಯನ್ನು ಹೇಗಾದರೂ ಉಳಿಸಿಕೊಳ್ಳಲು ಈ ಮೂಲಕ ರಾಜಕೀಯವಾಗಿ ತಮ್ಮ ಅವಶ್ಯಕತೆಯನ್ನು ತೋರಿಸುವ ಉದ್ದೇಶವೇ ಹೊರತು ಮತ್ತೇನು ಇಲ್ಲ. ಸಂಪೂರ್ಣ ಜನಗಳ ವಿಶ್ವಾಸ ಗಳಿಸಿ ಎಂದೂ ಅಧಿಕಾರ ಪಡೆಯದ ಈ ಎರಡು ಪಕ್ಷಗಳ ನಾಯಕರ ವರ್ತನೆಯನ್ನು ಜನ ಗಮನಿಸುತ್ತಿದ್ದಾರೆ. ಪಕ್ಷ ಸಂಘಟಿಸುವ ಶಕ್ತಿ ವಿಜಯೇಂದ್ರಗೆ ಇಲ್ಲ. ಕೇಂದ್ರದಿಂದ ಯಾವುದೇ ಯೋಜನೆಯನ್ನು ತರಲು ವಿಫಲವಾಗಿರುವ ಕುಮಾರಸ್ವಾಮಿ ಮತ್ತೆ ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಲು ಈ ಇಬ್ಬರ ನಡುವೆ ಪೈಪೋಟಿ ವ್ಯಕ್ತವಾಗಿದೆ. ಯಾವ ಕಾರಣದಿಂದಲೂ ಇವರ ಉದ್ದೇಶ ಈಡೇರುವುದಿಲ್ಲ. ಜನ ಮನ್ನಣೆ ಸಾಧ್ಯವಾಗದ ಎರಡು ಪಕ್ಷದ ನಾಯಕರು ಅಧಿಕಾರಕ್ಕಾಗಿ ನಡೆಸುತ್ತಿರುವ ಕುತಂತ್ರ ನೋಡಿದರೆ ಮರುಕ ಹುಟ್ಟುತ್ತದೆ ಎಂದು ಪ್ರತಿಕ್ರಿಯಿಸಿದ್ದಾರೆ.

ಗೋಪೂಜೆ




ದೀಪಾವಳಿ ಹಬ್ಬದ ಪ್ರಯುಕ್ತ ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಪಂಚಮುಖಿ ಆಂಜನೇಯ ಸ್ವಾಮಿ ದೇಗುಲದಲ್ಲಿ ಪ್ರಧಾನ ಅರ್ಚಕರಾದ ಕೃಷ್ಣಮೂರ್ತಿ ನೇತೃತ್ವದಲ್ಲಿ ಗೋಪೂಜೆ ನೆರವೇರಿಸಿ ಹಸು ಕರುವಿಗೆ ಆರತಿ ಬೆಳಗಿ, ಬಾಳೆಹಣ್ಣು ಸೇರಿ ವಿವಿಧ ತಿಂಡಿ ತಿನ್ನಿಸಿ, ಭಕ್ತಿ ಸಮರ್ಪಿಸಲಾಯಿತು.

ಅ.26ರಂದು ಸಾಧಕರಿಗೆ ಪ್ರಶಸ್ತಿ ಪ್ರದಾನ

ಮೈಸೂರು,ಅ.23-ಮೈಸೂರಿನ ಸರಸ್ವತಿಪುರಂನಲ್ಲಿರುವ ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್ ಸಭಾಂಗಣದಲ್ಲಿ ಅ.26ರಂದು ಪುಸ್ತಕ ಲೋಕಾರ್ಪಣೆ, ಸನ್ವಿತಿ ಪ್ರಶಸ್ತಿ ಪ್ರದಾನ ಹಾಗೂ ಕಾವ್ಯ ಸಂಭ್ರಮ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸೇವೆ ಮತ್ತು ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ ರಾಜ್ಯ ಮಟ್ಟದ ಸನ್ವಿತಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಕನಕ ಸಾಹಿತ್ಯ ಪ್ರಶಸ್ತಿ-ಡಾ.ಸರ್ಜಾ ಶಂಕರ್ ಹರಳಿಮಠ, ಡಾ.ಶಿವರಾಮ ಕಾರಂತ ಮಾಧ್ಯಮ ಪ್ರಶಸ್ತಿ-ಜೀವನ್ಮುಖಿ ಟಿ.ಸುರೇಶ್, ಸಾಹಿತ್ಯ ಕ್ಷೇತ್ರ-ಡಾ.ಅಂಬಳೆ ಮಹಾದೇವಸ್ವಾಮಿ, ಸಂಶೋಧನೆ ಕ್ಷೇತ್ರ-ಡಾ.ಎನ್.ವಿ. ಮನೋಜ್ ಕುಮಾರ್, ಶಿಕ್ಷಣ ಕ್ಷೇತ್ರ- ಡಾ.ಹೆಚ್.ಕೆ. ಪ್ರಸಾದ್, ಸಂಘಟನೆ ಕ್ಷೇತ್ರ-ಸಾಲುಂಡಿ ಎಸ್.ದೊರೆಸ್ವಾಮಿ, ಸಮಗ್ರ ಸೇವೆ-ಕೆ.ಎಂ. ಮಹೇಂದ್ರ, ಜಾನಪದ ಕ್ಷೇತ್ರ-ಅಮ್ಮ ರಾಮಚಂದ್ರ, ಸುಗಮ ಸಂಗೀತ-ಮೈಸೂರು ಮಾಲಿಂಗ, ಸಮಗ್ರ ಸೇವೆ-ಎಂ.ಶಿವಬೀರಪ್ಪ ಸಮಗ್ರ ಸೇವೆ-ಪ್ರೊಬಡಿಗೇರ್ ಮೌನೇಶ್, ಸರ್ಕಾರಿ ಸೇವೆ-ಡಿ.ಪದ್ಮನಾಭ, ಭರತ ನಾಟ್ಯ-ಕು.ಎಂ.ಎಸ್.ಅಪೂರ್ವ, ಸಮಗ್ರ ಸೇವೆ-ಸಿ.ಮದನ್‌ಕುಮಾರ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಸೆಸ್ಕ್ ಆನ್‌ಲೈನ್ ಸೇವೆಗಳು ಇಂದು ರಾತ್ರಿ 8ರಿಂದ ನಾಳೆ ಮಧ್ಯಾಹ್ನ 1 ಗಂಟೆವರೆಗೆ ವ್ಯತ್ಯಯ



ಮೈಸೂರು,ಅ.23- ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್)ದ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ಉನ್ನತೀಕರಣದ ಹಿನ್ನೆಲೆಯಲ್ಲಿ ಅ.24 ಮತ್ತು 25ರಂದು ಆನ್‌ಲೈನ್ ಸೇವೆಗಳು ಲಭ್ಯವಿರುವುದಿಲ್ಲ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ನಿಗದಿತ ದಿನಾಂಕಗಳಂದು ಸರ್ವರ್ ನಿರ್ವಹಣೆ ಇರುವುದರಿಂದ ಅ.24ರ ರಾತ್ರಿ 8 ಗಂಟೆಯಿಂದ ಅ.25ರ ಮಧ್ಯಾಹ್ನ 1 ಗಂಟೆವರೆಗೆ ಸೆಸ್ಕ್ ಆನ್‌ಲೈನ್ ಸೇವೆಗಳಾದ ವಿದ್ಯುತ್ ಬಿಲ್ ಪಾವತಿ, ಹೆಸರು ಬದಲಾವಣೆ, ಜಕಾತಿ ಬದಲಾವಣೆ ಹಾಗೂ ಹೊಸ ಸಂಪರ್ಕ ಸೇರಿದಂತೆ ಇನ್ನಿತರ ಆನ್‌ಲೈನ್ ಆಧಾರಿತ ಸೇವೆಗಳು ಲಭ್ಯವಿರುವುದಿಲ್ಲ.

ಪ್ರಮುಖವಾಗಿ ಸೆಸ್ಕ್ ವ್ಯಾಪ್ತಿಯ ಪ್ರದೇಶಗಳಾದ ಮೈಸೂರು, ನಂಜನಗೂಡು, ಹುಣಸೂರು, ಕೆ.ಆರ್. ನಗರ, ಮಂಡ್ಯ, ಮಳವಳ್ಳಿ, ಚಾಮರಾಜನಗರ, ಕೊಳ್ಳೇಗಾಲ, ಹಾಸನ, ಅರಸೀಕೆರೆ, ಚನ್ನರಾಯಪಟ್ಟಣ ಹಾಗೂ ಮಡಿಕೇರಿ ವ್ಯಾಪ್ತಿಯ ಗ್ರಾಹಕರಿಗೆ ಆನ್‌ಲೈನ್ ಸೇವೆಗಳಲ್ಲಿ ವ್ಯತ್ಯಯ ಉಂಟಾಗಲಿದೆ. ಆದ್ದರಿಂದ ಗ್ರಾಹಕರು ಸಹಕರಿಸುವಂತೆ ಸೆಸ್ಕ್ ಪತ್ರಿಕಾ ಪ್ರಕಟಣೆಯಲ್ಲಿ ಕೋರಿದೆ.

ಮೈಸೂರು-ಚಾಮರಾಜನಗರ ರೈಲು ಮಾರ್ಗದ ವಿದ್ಯುದ್ದೀಕರಣ ಕಾಮಗಾರಿ

ಮಂಡಕಳ್ಳಿ ವಿಮಾನ ನಿಲ್ದಾಣದ ಬಳಿ ನೆನೆಗುದಿಗೆ ಬಿದ್ದಿದ್ದ ಬಾಕಿ ವಿದ್ಯುದ್ದೀಕರಣ ಕಾಮಗಾರಿಗೂ ಚಾಲನೆ

● ಶೀಘ್ರ ಪೂರ್ಣಗೊಳಿಸುವ ವಿಶ್ವಾಸ ವ್ಯಕ್ತಪಡಿಸಿದ ಮೈಸೂರು ವಿಭಾಗೀಯ ರೈಲ್ವೆ ಡಿಆರ್‌ಎಂ ಉದಿತ್ ಮಿತ್ತಲ್ ● ವಿಮಾನ ನಿಲ್ದಾಣ ಪ್ರಾಧಿಕಾರದಿಂದ ಕೊನೆಗೂ ಎನ್‌ಓಸಿ ● ರನ್ ವೇ ಭಾಗದಲ್ಲಿ ವಿದ್ಯುತ್‌ರಹಿತ 40 ಕಿ.ಮೀ. ವೇಗ ಚಲಿಸುವ ರೈಲು; ಬಳಿಕ ವಿದ್ಯುತ್ ಲೇನ್‌ನಲ್ಲಿ 70 ಕಿ.ಮೀ. ವೇಗದಲ್ಲಿ ಸಂಚಾರ

ಮೈಸೂರು, ಅ.23(ಎಂಟಿವೈ)- ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣದ ಬಳಿ ನೆನೆಗುದಿಗೆ ಬಿದ್ದಿದ್ದ ರೈಲ್ವೆ ಲೇನ್ ವಿದ್ಯುದ್ದೀಕರಣಕ್ಕೆ ಗ್ರೀನ್ ಸಿಗ್ನಲ್ ದೊರೆತಿದ್ದು, ಮುಂದಿನ ಎರಡು ವಾರದೊಳಗೆ ಈ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಮೈಸೂರು ವಿಭಾಗೀಯ ರೈಲ್ವೆ ಡಿಆರ್‌ಎಂ ಉದಿತ್ ಮಿತ್ತಲ್ ತಿಳಿಸಿದ್ದಾರೆ.





ಮೈಸೂರು ವಿಭಾಗೀಯ ರೈಲ್ವೆ ಡಿಆರ್‌ಎಂ ಉದಿತ್ ಮಿತ್ತಲ್

ಮೈಸೂರಿನ ಕೇಂದ್ರ ರೈಲ್ವೆ ನಿಲ್ದಾಣದ ಕಚೇರಿಯಲ್ಲಿ ಮಾತನಾಡಿದ ಅವರು, ಮೈಸೂರು-ಚಾಮರಾಜನಗರದ ರೈಲ್ವೆ ಹಳಿ ಮಾರ್ಗದ ವಿದ್ಯುದ್ದೀಕರಣ ಕಾಮಗಾರಿ ಪೂರ್ಣಗೊಳ್ಳುವ ಹಂತಕ್ಕೆ ಬಂದಿದೆ. ಆದರೆ, ಮಂಡಕಳ್ಳಿ ವಿಮಾನ ನಿಲ್ದಾಣ ಬಳಿ 1.5 ಕಿ.ಮೀ. ವಿಸ್ತೀರ್ಣದಲ್ಲಿ ಕಾಮಗಾರಿಗೆ ವಿಮಾನ ನಿಲ್ದಾಣ ಪ್ರಾಧಿಕಾರ ಅನುಮತಿ ನೀಡಿರಲಿಲ್ಲ. ರೈಲ್ವೆ ಹಳಿ ಮೇಲೆ ಅಳವಡಿಸಿರುವ ವಿದ್ಯುತ್ ಲೈನ್‌ನಲ್ಲಿ ಹೆಚ್ಚು ವೋಲ್ಟೇಜ್ ಸಾಮರ್ಥ್ಯದ ವಿದ್ಯುತ್ ಪ್ರವಹಿಸುವ ಕಾರಣದಿಂದ ವಿಮಾನ ಟೇಕಾಫ್ ಹಾಗೂ ಲ್ಯಾಂಡ್ ಆಗುವ ವೇಳೆ ವಿದ್ಯುತ್ ವಿಕಿರಣಗಳಿಂದ ದುಷ್ಪರಿಣಾಮ ಬೀರಬಹುದು ಎಂಬ ಕಾರಣದಿಂದ ಅನುಮತಿ ನೀಡಿರಲಿಲ್ಲ. ಹಾಗಾಗಿ ವಿದ್ಯುತ್ ಲೇನ್ ಕಾಮಗಾರಿ ನೆನೆಗುದಿಗೆ ಬಿದ್ದಿತ್ತು. ಇದೀಗ ಕೆಲ ಮಾರ್ಪಾಡಿನೊಂದಿಗೆ ಎನ್‌ಓಸಿ ನೀಡಿದೆ ಎಂದು ಹೇಳಿದರು.

ಈಗಾಗಲೇ ರನ್ ವೇ ಹಿಂಭಾಗದ ಕಡೆ ಇರುವ ರೈಲ್ವೆ ಹಳಿಗೆ ವಿದ್ಯುತ್ ಲೇನ್ ಅಳವಡಿಸುವ ಕಾಮಗಾರಿ ಆರಂಭಿಸಲಾಗಿದ್ದು, ಮುಂದಿನ ಎರಡು ವಾರದಲ್ಲಿ ಈ ಕಾಮಗಾರಿ ಪೂರ್ಣಗೊಳ್ಳಲಿದೆ. ನಂತರ ಮೈಸೂರು-ಚಾಮರಾಜನಗರದ ನಡುವೆಯೂ ವಿದ್ಯುತ್ ಚಾಲಿತ ರೈಲು ಸಂಚಾರ ಆರಂಭವಾಗಲಿದೆ ಎಂದು ಹೇಳಿದರು.

ಸಾಮಾನ್ಯವಾಗಿ ರೈಲ್ವೆ ಹಳಿಯಲ್ಲಿ 8.50 ಮೀಟರ್‌ಗೆ ಒಂದು ವಿದ್ಯುತ್ ಕಂಬ ಅಳವಡಿಸಲಾಗುತ್ತದೆ. ವಿಮಾನ ನಿಲ್ದಾಣದ ಬಳಿ 250 ಮೀಟರ್ ವಿದ್ಯುತ್ ಲೈನ್ ಅಳವಡಿಸಲಾಗುತ್ತದೆ. ಇದರಿಂದ ರನ್ ವೇ ಭಾಗದಲ್ಲಿ ವಿದ್ಯುತ್ ಸಂಪರ್ಕ ಇಲ್ಲದೇ ರೈಲು 40 ಕಿ.ಮೀ. ವೇಗದಲ್ಲಿ ಚಲಿಸುತ್ತದೆ. ಆದರೆ, ವಿಮಾನ ನಿಲ್ದಾಣದ ವ್ಯಾಪ್ತಿಯಿಂದ ಹೊರ ಬರುತ್ತಿದ್ದಂತೆಯೇ ರೈಲು ವಿದ್ಯುತ್ ಸಂಪರ್ಕ ಪಡೆದು ಗಂಟೆಗೆ 70 ಕಿ.ಮೀ. ವೇಗದಲ್ಲಿ ಚಲಿಸುತ್ತದೆ. ಈ ಹಿನ್ನೆಲೆಯಲ್ಲಿ ಮೈಸೂರು-ಚಾಮರಾಜನಗರ ನಡುವಿನ ರೈಲ್ವೆ ವಿದ್ಯುತ್ ಮಾರ್ಗ ಪೂರ್ಣಗೊಂಡು ಕಾರ್ಯಾರಂಭಕ್ಕೆ ಕಾಲ ಸನ್ನಿಹಿತವಾಗಿದೆ ಎಂದು ಉದಿತ್ ಮಿತ್ತಲ್ ತಿಳಿಸಿದರು.

4-5 ತಿಂಗಳಲ್ಲಿ ಫ್ಲಾಟ್ ಫಾರಂ ವಿಸ್ತರಣಾ ಕಾಮಗಾರಿ: ಮೈಸೂರು ಕೇಂದ್ರೀಯ ರೈಲ್ವೆ ನಿಲ್ದಾಣದ ವಿಸ್ತರಣಾ ಕಾಮಗಾರಿ ತ್ವರಿತವಾಗಿ ಪೂರೈಸಲು ಕ್ರಮ ಕೈಗೊಳ್ಳಲಾಗಿದೆ. ಮೈಸೂರಿಗೆ ಬರುವ ರೈಲುಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಫ್ಲಾಟ್‌ಫಾರಂ ವಿಸ್ತರಣೆ ಅಗತ್ಯ. ಈ ಹಿನ್ನೆಲೆಯಲ್ಲಿ ಫ್ಲಾಟ್‌ಫಾರಂ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಗುರುತಿಸಿರುವ ಸ್ಥಳದಲ್ಲಿರುವ ಸಿಬ್ಬಂದಿಗಳ ಕ್ವಾರ್ಟಸ್ ತೆರವು ಮಾಡಲು ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ಅಲ್ಲಿನ ಸಿಬ್ಬಂದಿ ಸ್ಥಳಾಂತರಕ್ಕೆ ಟೈಪ್-4 ಮತ್ತು ಟೈಪ್-5ರಲ್ಲಿ 18 ಮನೆಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಮುಂದಿನ 4-5 ತಿಂಗಳಲ್ಲಿ ಮನೆ ನಿರ್ಮಾಣ ಕಾರ್ಯ ಪೂರ್ಣಗೊಳ್ಳಲಿದ್ದು, ಆ ನಂತರ ಕ್ವಾರ್ಟಸ್ ತೆರವುಗೊಳಿಸಿ, ರೈಲ್ವೆ ನಿಲ್ದಾಣದ ಹೆಚ್ಚುವರಿ 5 ಫ್ಲಾಟ್‌ಫಾರಂ ನಿರ್ಮಾಣ ಕಾಮಗಾರಿ ಆರಂಭಗೊಳ್ಳಲಿದೆ. ಈಗಾಗಲೇ ಆರು ಫ್ಲಾಟ್ ಫಾರಂ ಇದ್ದು, ಹೊಸದಾಗಿ ನಿರ್ಮಾಣವಾಗುವ ಐದು ಫ್ಲಾಟ್‌ಫಾರಂನಿಂದಾಗಿ ಹೆಚ್ಚಿನ ಉಪಯೋಗವಾಗಲಿದೆ. ಅಲ್ಲದೆ, ಹೆಚ್ಚುವರಿಯಾಗಿ ರೈಲ್ವೆ ನಿಲ್ದಾಣಕ್ಕೆ ಮೂರನೇ ಗೇಟ್ ತೆರೆಯುವ ಪ್ರಸ್ತಾಪವೂ ನಮ್ಮ ಮುಂದೆ ಇದೆ ಎಂದು ತಿಳಿಸಿದರು.

ದಸರಾ ವೇಳೆ ಪ್ರಯಾಣಿಕರಿಗೆ ಉತ್ತಮ ಸೇವೆ: ನಾಡಹಬ್ಬ ದಸರಾ ಮಹೋತ್ಸವದ ವೇಳೆ ರೈಲ್ವೆ ಪ್ರಯಾಣಿಕರಿಗೆ ನೈರುತ್ಯ ರೈಲ್ವೆ ಇಲಾಖೆ ಅತ್ಯುತ್ತಮ ಸೇವೆ ಒದಗಿಸಿದೆ. ದಸರಾ ದಿನ ಮೈಸೂರಿಂದ ಬೆಂಗಳೂರು, ಚಾಮರಾಜನಗರ, ಹಾಸನ ಸೇರಿದಂತೆ ವಿವಿಧೆಡೆ 51 ವಿಶೇಷ ರೈಲು ಸಂಚರಿಸಿವೆ. ಲಕ್ಷಾಂತರ ಪ್ರಯಾಣಿಕರು ಸುಗಮವಾಗಿ ಸಂಚರಿಸಿದ್ದಾರೆ. ರೈಲ್ವೆ ನಿಲ್ದಾಣದಲ್ಲಿ ಪ್ರಯಾಣಿಕರ ಸುರಕ್ಷತೆಗೆ ಹೆಚ್ಚುವರಿ ಭದ್ರತೆ ಒದಗಿಸಲಾಗಿತ್ತು. ಹಾಲಿ ಇರುವ 41 ಸಿಸಿ ಕ್ಯಾಮರಾದೊಂದಿಗೆ ಹೆಚ್ಚುವರಿಯಾಗಿ 50 ಸಿಸಿ ಕ್ಯಾಮರಾ ಅಳವಡಿಸಿ, ನಿಗಾ ಇಡಲಾಗಿತ್ತು ಎಂದರು.

ಜೈನ ಸ್ವಾಮೀಜಿಗೆ ಚಿನ್ನದ ಸರ ಖರೀದಿ ನೆಪದಲ್ಲಿ ಲಕ್ಷಾಂತರ ಮೌಲ್ಯದ ಸರಗಳ ಕದ್ದ ನಯವಂಚಕ

● ಮೈಸೂರು ಅಶೋಕ ರಸ್ತೆ ಆಭರಣದ ಅಂಗಡಿಯಲ್ಲಿ ದೀಪಾವಳಿಯಂದು ಖದೀಮನ ಕೈಚಳಕ ● ಸರದೊಂದಿಗೆ ಕಾಯುತ್ತಿದ್ದ ಸ್ಕೂಟರ್‌ನಲ್ಲಿ ಪರಾರಿ

ಮೈಸೂರು, ಅ.23- ಜೈನ ದೇವಾಲಯದ ಸ್ವಾಮೀಜಿಗೆ ನೀಡಲು ಚಿನ್ನದ ಸರ ಬೇಕೆಂದು 5 ಸಾವಿರ ರೂ. ಅಡ್ವಾನ್ಸ್ ನೀಡಿ, ಚಿನ್ನಾಭರಣ ಅಂಗಡಿ ಮಾಲೀಕನಿಗೆ ತಿಳಿಯದಂತೆ ಲಕ್ಷಾಂತರ ರೂ. ಮೌಲ್ಯದ ಐದಾರು ಚಿನ್ನದ ಸರಗಳನ್ನು ಲಪಟಾಯಿಸಿರುವ ಘಟನೆ ಮೈಸೂರಿನಲ್ಲಿ ನಡೆದಿದೆ.

ಗ್ರಾಹಕನ ಸೋಗಿನಲ್ಲಿ ಅಶೋಕ ರಸ್ತೆಯ ದೀಪ್ ಜ್ಯುವೆಲರ್ಸ್ ಮಳಿಗೆಗೆ ಹೋಗಿದ್ದ ಸುಮಾರು 55 ವರ್ಷದ ಖದೀಮನೊಬ್ಬ, ಮೊದಲಿಗೆ ಬೆಳ್ಳಿ ನಾಣ್ಯ, ನಂತರ ಚಿನ್ನದ ನಾಣ್ಯಗಳ ಬಗ್ಗೆ ವಿಚಾರಿಸಿ, ಕಡೆಗೆ ಸ್ವಾಮೀಜಿಗೆ ಚಿನ್ನದ ಸರ ಬೇಕೆಂಬ ನೆಪದಲ್ಲಿ ಮಾಲೀಕನ ಗಮನವನ್ನು ಬೇರೆಡೆ ಸೆಳೆದು ವಂಚಿಸಿದ್ದಾನೆ. ದೀಪಾವಳಿ ಹಬ್ಬದಲ್ಲೇ ನಡೆದ ಈ ಘಟನೆಯಿಂದ ಆಘಾತಕ್ಕೀಡಾದ ಅಂಗಡಿ ಮಾಲೀಕ ರತನ್‌ಲಾಲ್ ದೂರು ನೀಡಿದ್ದು, ಲಷ್ಕರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯಾಮಾರಿಸಿದ ವಂಚಕ: ರತನ್‌ಲಾಲ್ ಅವರ ದೀಪ ಜ್ಯುವಲರ್ಸ್ ಅಂಗಡಿಗೆ ಅ.21ರಂದು ಮಧ್ಯಾಹ್ನ 1 ಗಂಟೆ ಸಮಯದಲ್ಲಿ ಸುಮಾರು 55 ವರ್ಷದ ವ್ಯಕ್ತಿ ಪ್ರವೇಶಿಸಿದ್ದಾನೆ. ಆತ ಬೆಳ್ಳಿಯ ನಾಣ್ಯ ತೋರಿಸುವಂತೆ ಹಿಂದಿಯಲ್ಲಿ ಕೇಳಿದ್ದಾನೆ. ಆಗ ರತನ್‌ಲಾಲ್, 20 ಗ್ರಾಂ ಬೆಳ್ಳಿ ನಾಣ್ಯವನ್ನು ಆತನ ಮುಂದಿಟ್ಟಿದ್ದಾರೆ. ಅದನ್ನು ನೋಡಿ ಪಕ್ಕಕ್ಕಿಟ್ಟ ಆತ 2 ಗ್ರಾಂ ಚಿನ್ನದ ನಾಣ್ಯವಿದ್ದರೆ ತೋರಿಸಿ, ದೇವಸ್ಥಾನಕ್ಕೆ ಕೊಡಬೇಕು, ಒಳಗಡೆ ಇಟ್ಟಿದ್ದರೆ ತೆಗೆದುಕೊಂಡು ಬನ್ನಿ ಎಂದು ಆತನೇ ಹೇಳಿದ್ದಾನೆ. ಆದರೆ ರತನ್‌ಲಾಲ್, ನಮ್ಮ ಬಳಿ ಚಿನ್ನದ ನಾಣ್ಯ ಇಲ್ಲ, ಬೇಕೆಂದರೆ ತರಿಸಿಕೊಡುತ್ತೇನೆಂದು ಪರಿಚಿತ ಲಾಲ್ಟು ಎಂಬುವರಿಗೆ ಕರೆ ಮಾಡಿ, ಚಿನ್ನದ ನಾಣ್ಯ ತರುವಂತೆ ತಿಳಿಸಿದ್ದಾರೆ.

ಅಷ್ಟರಲ್ಲಿ ಖದೀಮ, ಚಿನ್ನದ ಚೈನುಗಳನ್ನು ತೋರಿಸಿ ಎಂದಿದ್ದಾನೆ. ಆತ ಕೇಳಿದಂತೆ ಮಾಲೀಕ ಚಿನ್ನದ ಚೈನುಗಳನ್ನು ತೋರಿಸಿದ್ದಾರೆ. ಜೈನ ದೇವಾಲಯದ ಸ್ವಾಮೀಜಿಗೆ ಕೊಡಬೇಕು, ಆದ್ದರಿಂದ ಮಹಿಳೆಯರು ಮುಟ್ಟಿರದ, ಕವರ್‌ನಲ್ಲಿ ಇಟ್ಟಿರುವ ಚೈನುಗಳನ್ನು ತೋರಿಸಿ ಎಂದಿದ್ದಾನೆ. ಆಗ ರತನ್‌ಲಾಲ್, ಫೋಲ್ಡಿಂಗ್ ಲೆದರ್ ಬ್ಯಾಗ್‌ನಲ್ಲಿ ವಿವಿಧ ಡಿಸೈನ್‌ಗಳ 5ರಿಂದ 6 ಸರದ ಬಂಚ್ ಅನ್ನು ತೋರಿಸಿದ್ದಾರೆ. ಆತ ಆ ಸರಗಳನ್ನು ಪ್ರತ್ಯೇಕವಾಗಿ ಒಂದೊಂದೇ ಪ್ಲಾಸ್ಟಿಕ್ ಕವರ್‌ನಲ್ಲಿ ಹಾಕಿ, ಅಂಗಡಿಯಲ್ಲಿದ್ದ ಪೂಜೆ ಹಣ್ಣಿನ ಬ್ಯಾಗ್‌ನಲ್ಲಿ ಇಟ್ಟಿದ್ದಾನೆ. ಇದನ್ನು ಹೀಗೆ ಬ್ಯಾಗ್‌ನಲ್ಲಿ ಇಟ್ಟಿರಿ, ನಮ್ಮ ಹುಡುಗ ಬಂದು ಒಂದು ಸರವನ್ನು ಸೆಲೆಕ್ಟ್ ಮಾಡಿ, ತೆಗೆದುಕೊಂಡು ಹೋಗುತ್ತಾನೆ ಎಂದು 5 ಸಾವಿರ ರೂ. ಅಡ್ವಾನ್ಸ್ ನೀಡಿ, ಅಂಗಡಿಯಿಂದ ಹೊರಟು ಹೋಗುತ್ತಾನೆ.

ನಂತರ ಲಾಲ್ಟೂ ಚಿನ್ನದ ನಾಣ್ಯಗಳನ್ನು ಕೊಡಲೆಂದು ಅಂಗಡಿಗೆ ಬಂದಾಗ ರತನ್‌ಲಾಲ್, ಚಿನ್ನದ ಚೈನ್‌ಗಳನ್ನು ಕವರ್‌ಗಳನ್ನು ಪರಿಶೀಲಿಸಿದ್ದಾರೆ. ಅದರಲ್ಲಿ ಸುಮಾರು 105 ಗ್ರಾಂ ತೂಕದ ಐದಾರು ಚೈನ್‌ಗಳಿದ್ದ ಕವರ್ ಕಾಣಿಸಲಿಲ್ಲ. ಕೂಡಲೇ ಅಂಗಡಿಯ ಸಿಸಿ ಟಿವಿ ಕ್ಯಾಮರಾಗಳನ್ನು ಪರಿಶೀಲಿಸಿದಾಗ ಗ್ರಾಹಕನಂತೆ ಬಂದಿದ್ದ ವ್ಯಕ್ತಿ ಅಂಗಡಿಯಿಂದ ಹೊರಹೋಗಿ, ಸ್ವಲ್ಪ ದೂರದಲ್ಲಿ ಸ್ಕೂಟರ್‌ನಲ್ಲಿ ಕಾಯುತ್ತಿದ್ದ 35 ವರ್ಷದ ವ್ಯಕ್ತಿಯೊಂದಿಗೆ ಹೊರಟು ಹೋದ ದೃಶ್ಯ ಸೆರೆಯಾಗಿದೆ. ಬಳಿಕ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಯೋಜಿತ ದುಷ್ಕೃತ್ಯ: ಅಂಗಡಿಯಲ್ಲಿ ಒಬ್ಬರೇ ಇರುವುದನ್ನು ಗಮನಿಸಿ, ಗ್ರಾಹಕರ ಸೋಗಿನಲ್ಲಿ ಬಂದಿದ್ದ ವ್ಯಕ್ತಿ ಹಿಂದಿಯಲ್ಲೇ ಮಾತನಾಡಿದ್ದಾನೆ. ಅಂಗಡಿಯಲ್ಲಿ ಒಬ್ಬರೇ ಇರುವುದನ್ನು ಗಮನಿಸಿ, ಹೊಂಚು ಹಾಕಿಯೇ ಈ ದುಷ್ಕೃತ್ಯವೆಸಗಿದ್ದಾನೆ. ಆ ವೇಳೆ ಅಂಗಡಿ ಸಮೀಪವೇ ಮತ್ತೋರ್ವ ಖದೀಮ ಸ್ಕೂಟರ್ ನಿಲ್ಲಿಸಿಕೊಂಡು ಕಾಯುತ್ತಿದ್ದ ಎಂದಾದರೆ ಯಾವುದೋ ಗ್ಯಾಂಗ್ ಈ ದುಷ್ಕೃತ್ಯವೆಸಗಿರುವ ಸಾಧ್ಯತೆ ಇದೆ.

ಮೈಸೂರಲ್ಲಿ ಪಟಾಕಿ ಅವಘಡ: 11 ಮಂದಿಯ ಕಣ್ಣಿಗೆ ಗಾಯ



ಮೈಸೂರು,ಅ.23(ಆರ್‌ಕೆ)-ಸಡಗರದ ದೀಪಾವಳಿ ಹಬ್ಬ ಆಚರಣೆ ವೇಳೆ ಪಟಾಕಿ ಸಿಡಿಸುವಾಗ ಮೈಸೂರಲ್ಲಿ 11 ಮಂದಿಯ ಕಣ್ಣಿಗೆ ಗಾಯಗಳಾಗಿವೆ. ಸುರಕ್ಷತೆ ಬಗ್ಗೆ ಹಲವು ವರ್ಷಗಳಿಂದ ಜಾಗೃತಿ ಅಭಿಯಾನ ನಡೆಯುತ್ತಿದ್ದಾಗಿಯೂ, ಎಚ್ಚರ ವಹಿಸದೆ ಪಟಾಕಿ ಸಿಡಿಸಲು ಮುಂದಾದ 11 ಮಂದಿ ಪಟಾಕಿ ಸಿಡಿತದಿಂದ ಗಾಯಗೊಂಡಿದ್ದಾರೆ. ಅ.19ರಿಂದ 22ರವರೆಗೆ ಕೆಆರ್ ಆಸ್ಪತ್ರೆಯ ಕಣ್ಣಿನ ಚಿಕಿತ್ಸಾ ವಿಭಾಗದಲ್ಲಿ ಮಕ್ಕಳು ಸೇರಿದಂತೆ ಗಾಯಗೊಂಡವರಿಗೆ ಚಿಕಿತ್ಸೆ ನೀಡಲಾಗಿದೆ ಎಂದು ವಿಭಾಗದ ಮುಖ್ಯಸ್ಥ ಡಾ.ಕೆ.ಸತೀಶ್ ತಿಳಿಸಿದ್ದಾರೆ. 11 ಮಂದಿ ಪೈಕಿ 6 ಮಂದಿಗೆ ತೀವ್ರ ಗಾಯಗಳಾಗಿದ್ದು, ಓರ್ವ ದೃಷ್ಟಿ ಕಳೆದುಕೊಂಡಿದ್ದಾನೆ. ಉಳಿದ ಐವರಿಗೆ ಸಣ್ಣ ಪುಟ್ಟ ಗಾಯಗಳಾಗಿವೆ ಎಂದು ಹೇಳಿದ್ದಾರೆ.

ಬಿಗ್ ಬಾಸ್: ಅಶ್ವಿನಿಗೌಡ ವಿರುದ್ಧ ದೂರು ದಾಖಲು



ಬೆಂಗಳೂರು: ಬಿಗ್‌ಬಾಸ್ ಕನ್ನಡ ಸೀಸನ್ 12 ಮತ್ತೊಂದು ವಿವಾದಕ್ಕೆ ತುತ್ತಾಗಿದ್ದು, ಈ ಬಾರಿ ಬಿಗ್‌ಬಾಸ್ ಸೀಸನ್ 12ರ ಸ್ಪರ್ಧಿ ಅಶ್ವಿನಿಗೌಡ ವಿರುದ್ಧ ಸಹ ಸ್ಪರ್ಧಿ ರಕ್ಷಿತಾ ಶೆಟ್ಟಿ ಅವರನ್ನು ನಿಂದಿಸಿದ ಆರೋಪದಲ್ಲಿ ದೂರು ದಾಖಲಿಸಲಾಗಿದೆ ಎಂದು ತಿಳಿದುಬಂದಿದೆ. ಕಳೆದ ವಾರದ ಎಪಿಸೋಡ್‌ನಲ್ಲಿ ಜಾಹ್ನವಿ ಹಾಗೂ ಅಶ್ವಿನಿ ಗೌಡ ಕೂತು ರಕ್ಷಿತಾ ಬಗ್ಗೆ ಮಾತನಾಡುತ್ತಿದ್ದರು. ಈ ವೇಳೆ ರಕ್ಷಿತಾರನ್ನು 'ಸ್ಲಮ್' ಎಂದು ಅಶ್ವಿನಿ ಗೌಡ ಕರೆದಿದ್ದರು. ಬಳಿಕ 'ಎಸ್' ಪದ ಬಳಕೆ ಮಾಡಿದ್ದರು. ಇದೇ ವಿಚಾರವಾಗಿ ಇದೀಗ ಪೊಲೀಸ್ ದೂರು ದಾಖಲಾಗಿದೆ ಎಂದು ಹೇಳಲಾಗಿದೆ.

ಬಿಡದಿ ಪೊಲೀಸ್ ಠಾಣೆಯಲ್ಲಿ ಬಿಗ್‌ಬಾಸ್ ಸ್ಪರ್ಧಿ ಅಶ್ವಿನಿ ಗೌಡ ವಿರುದ್ಧ ಹಿರಿಯ ವಕೀಲ ಪ್ರಶಾಂತ್ ಮೆತಲ್ ಎಂಬುವವರು ಜಾತಿ ನಿಂದನೆ, ವ್ಯಕ್ತಿ ನಿಂದನೆ ಆರೋಪದಡಿ ದೂರು ದಾಖಲು ಮಾಡಿದ್ದಾರೆ ಎಂದು ತಿಳಿದುಬಂದಿದೆ. ಅಲ್ಲದೆ ಅವರು ಕಲರ್ಸ್ ಕನ್ನಡ ಬ್ಯುಸಿನೆಸ್ ಹೆಡ್ ಪ್ರಶಾಂತ್‌ನಾಯಕ್ ಶೋ ಆಯೋಜಕರ ವಿರುದ್ಧವೂ ದೂರು ನೀಡಿದ್ದಾರೆ.

ಸಮಾಜದಲ್ಲಿ ಎಲ್ಲರೂ ಒಂದೇ, ಯಾವುದೇ ಜಾತಿ ಭೇದ ಹರಡಬಾರದು. ಅಶ್ವಿನಿ ಗೌಡ ಮಾತನ್ನು ತೆಗೆಯದೇ ಕಾರ್ಯಕ್ರಮ ಪ್ರಸಾರ ಮಾಡಿದ್ದು ತಪ್ಪು. ಇದರಿಂದ ಕೆಟ್ಟ ಸಂದೇಶ ರವಾನೆಯಾಗುತ್ತದೆ ಎಂದು ದೂರುದಾರರು ಆರೋಪಿಸಿದ್ದಾರೆ. ವಕೀಲರು ನೀಡಿದ ದೂರು ಆಧರಿಸಿ ಬಿಡದಿ ಪೊಲೀಸರು ಎನ್‌ಸಿಆರ್ ದಾಖಲಿಸಿಕೊಂಡಿದ್ದಾರೆ.

ದಸರಾ ವಿದ್ಯುತ್ ದೀಪಾಲಂಕಾರ ವೀಕ್ಷಣೆ

ಅಂಬಾರಿ ಡಬಲ್‌ಡೆಕ್ಕರ್ ಬಸ್‌ನಲ್ಲಿ ದೀಪಗಳ ಸೊಬಗು ಸವಿದ 15 ಸಾವಿರಕ್ಕೂ ಅಧಿಕ ಮಂದಿ

ಮೈಸೂರು,ಅ.23(ಪಿಎಂ)- ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆಎಸ್‌ಟಿಡಿಸಿ)ದ ಅಂಬಾರಿ ಡಬಲ್ ಡೆಕ್ಕರ್ ಬಸ್‌ನಲ್ಲಿ ಪ್ರಯಾಣಿಸಿ ಈ ಬಾರಿ ಅಂದಾಜು 15 ಸಾವಿರಕ್ಕೂ ಅಧಿಕ ಮಂದಿ ಮೈಸೂರು ನಗರದಲ್ಲಿ ಸಂಚರಿಸಿ, ದಸರಾ ವಿದ್ಯುತ್ ದೀಪಾಲಂಕಾರ ಕಣ್ತುಂಬಿಕೊಂಡಿದ್ದಾರೆ.

ಈ ರೀತಿಯ ವಿಶಿಷ್ಟ ವಿನ್ಯಾಸದ ಬಸ್‌ನ ಮೇಲ್ಭಾಗದ (ಅಪ್ಪರ್ ಡೆಕ್) ಸೀಟುಗಳಲ್ಲಿ ಆಸೀನರಾಗಿ ಓಪನ್ ಟಾಪ್‌ನಲ್ಲಿ ದೀಪಾಲಂಕಾರ ಸವಿಯಲು ಈ ಬಾರಿಯೂ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. ಅಂತೆಯೇ ಇದೇ ಮಾದರಿಯ ಬಸ್‌ಗಳ ಲೋಯರ್ ಡೆಕ್‌ನಲ್ಲಿ (ಬಸ್‌ನ ಕೆಳಭಾಗ) ಪ್ರಯಾಣ ಮಾಡುವ ಮೂಲಕ ನಗರದ ದೀಪಾಲಂಕಾರ ಕಂಡು ಬೆರಗಾಗಿದ್ದಾರೆ.



ಅಂಬಾರಿ ಬಸ್‌ನಲ್ಲಿ ದಸರಾ ವಿದ್ಯುತ್ ದೀಪಾಲಂಕಾರ ವೀಕ್ಷಿಸಿದ ಪ್ರವಾಸಿಗರನ್ನು ಚಿತ್ರದಲ್ಲಿ ಕಾಣಬಹುದು.

ನಾಡಹಬ್ಬ ಮೈಸೂರು ದಸರಾದಲ್ಲಿ ನಗರದ ವೃತ್ತ, ರಸ್ತೆಗಳು ವಿದ್ಯುತ್ ದೀಪಗಳಿಂದ ಆಕರ್ಷಣೀಯವಾಗಿ ಶೃಂಗಾರಗೊಂಡಿದ್ದವು. ಪ್ರತಿ ವರ್ಷದಂತೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್)ದಿಂದ ದಸರಾ ದೀಪಾಲಂಕಾರ ಮಾಡಲಾಗಿತ್ತು. ಜೊತೆಗೆ ವಿದ್ಯುತ್ ದೀಪಗಳಿಂದಲೇ ನಿರ್ಮಿಸಿದ್ದ ಕಲಾಕೃತಿಗಳು ಕಣ್ಮನ ಸೆಳೆಯುತ್ತಿದ್ದವು. ಸೆ.22ರಿಂದ ಅ.12ರವರೆಗೆ 21 ದಿನಗಳ ಕಾಲ ವಿದ್ಯುತ್ ದೀಪಾಲಂಕಾರ ನಗರದಲ್ಲಿ ಕಂಗೊಳಿಸಿತು. ಇಂತಹ ಮನಮೋಹಕ ದೃಶ್ಯಾವಳಿಯನ್ನು ಅಂಬಾರಿ ಡಬಲ್ ಡೆಕ್ಕರ್ ಬಸ್‌ನಲ್ಲಿ ನೋಡುವವರಲ್ಲಿ ಸಂಭ್ರಮ ಮನೆ ಮಾಡುತ್ತಿತ್ತು. 'ಅಂಬಾರಿ ದಸರಾ ದೀಪಾಲಂಕಾರ ಸುತ್ತಾಟದ ಪ್ರಯಾಣ' ಶೀರ್ಷಿಕೆಯಡಿ ಕೆಎಸ್‌ಟಿಡಿಸಿ ಈ ಪ್ರಯಾಣ ಸೌಲಭ್ಯ ಕಲ್ಪಿಸಿತ್ತು.

> “ ದಸರಾ ವೇಳೆ ಪ್ರತಿದಿನ ಸಂಜೆ 6.30, 7.30 ರಾತ್ರಿ 10.30ಕ್ಕೆ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕೆಎಸ್‌ಟಿಡಿಸಿ ಅಧೀನದ ಹೋಟೆಲ್ ಮಯೂರ ಹೊಯ್ಸಳ ಆವರಣದಿಂದ ಅಂಬಾರಿ ಡಬಲ್ ಡೆಕ್ಕರ್ ಬಸ್‌ಗಳು ಸಂಚಾರ ಪ್ರಾರಂಭಿಸುತ್ತಿದ್ದವು. ಇದು ದಸರಾ ದೀಪಾಲಂಕಾರ ವೀಕ್ಷಣೆಗೆ ಮಾಡಿದ್ದ ವ್ಯವಸ್ಥೆ. ಇದರ ಹೊರತಾಗಿ ಸಾಮಾನ್ಯ ದಿನಗಳಲ್ಲಿ ಬೆಳಗ್ಗೆಯಿಂದ ಸಂಜೆಯವರೆಗೆ ಬಸ್ ಸಂಚಾರ ಇರಲಿದ್ದು, ಅರಮನೆ ವರಾಹ ಗೇಟ್‌ನಿಂದ ನಿರ್ಗಮಿಸಿ, ಮತ್ತೆ ಅಲ್ಲಿಗೆ ಬಸ್ ಮರಳಲು ವ್ಯವಸ್ಥೆ ಮಾಡಲಾಗಿದೆ.
> **-ಕೆಎಸ್‌ಟಿಡಿಸಿ ಮೈಸೂರು ಸಾರಿಗೆ ವಿಭಾಗದ ಅಧಿಕಾರಿಗಳು.**

2021ರಿಂದ ಈ ಪ್ರಯಾಣದ ಕಾರ್ಯಕ್ರಮ ನಡೆಯುತ್ತಿದ್ದು, ಅಂಬಾರಿ ಬಸ್ ಸುತ್ತಾಟದಲ್ಲಿ ಒಂದು ತಾಸು ಸಂಚರಿಸಿ ದೀಪಾಲಂಕಾರದ ಸೊಬಗು ನೋಡಿ ಪ್ರತಿವರ್ಷ ಸಹಸ್ರಾರು ಜನ ಮನಸೋತಿದ್ದಾರೆ. ಈ ಬಾರಿ ಸೆ.22ರಿಂದ ಅ.1ವರೆಗೆ ಒಟ್ಟು 5 ಬಸ್‌ಗಳು ಹಾಗೂ ಅ.3ರಿಂದ 12ರವರೆಗೆ ಆರು ಬಸ್‌ಗಳು ಝಗಮಗಿಸುವ ವಿದ್ಯುತ್ ದೀಪಗಳನ್ನು ಪ್ರವಾಸಿಗರ ಕಣ್ತುಂಬಿಸಿವೆ. ಪ್ರತಿ ಬಸ್‌ನ ಅಪ್ಪರ್ ಡೆಕ್ 20, ಲೋಯರ್ ಡೆಕ್ 20 ಆಸನಗಳನ್ನು ಹೊಂದಿರುವ ಬಸ್‌ಗಳಲ್ಲಿ ಆಸನ ದೊರೆಯದಿದ್ದರೆ, 5ರಿಂದ 6 ಮಂದಿಗೆ ನಿಂತು ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿತ್ತು.

ಧರ್ಮಸ್ಥಳ ಬುರುಡೆ ಕೇಸ್; ಈ ತಿಂಗಳ ಅಂತ್ಯಕ್ಕೆ ಎಸ್‌ಐಟಿ ವರದಿ ಸಲ್ಲಿಕೆ

ಬೆಂಗಳೂರು, ಅ.23- ಈ ತಿಂಗಳ ಅಂತ್ಯಕ್ಕೆ ಧರ್ಮಸ್ಥಳ ಕೇಸ್ ತನಿಖೆಗೆ ಸಂಬಂಧಿಸಿದಂತೆ ಎಸ್‌ಐಟಿ ವರದಿ ಸಲ್ಲಿಕೆ ಆಗುವ ಸಾಧ್ಯತೆ ಇದೆ.

ಜು.20 ರಂದು ಎಸ್‌ಐಟಿ ರಚನೆ ಮಾಡಿ ರಾಜ್ಯ ಸರ್ಕಾರ ಅಧಿಕೃತ ಆದೇಶ ಹೊರಡಿಸಿತ್ತು. ಧರ್ಮಸ್ಥಳದಲ್ಲಿ ಶವಗಳ ಹೂತಿಟ್ಟ ಪ್ರಕರಣಗಳ ಆರೋಪದ ಬಗ್ಗೆ ತನಿಖೆ ನಡೆಸುವಂತೆ ಸೂಚಿಸಿ ರಾಜ್ಯ ಸರ್ಕಾರ ಎಸ್‌ಐಟಿ ರಚನೆ ಮಾಡಿತ್ತು. ಅದಾದ ಬಳಿಕ ತನಿಖೆಯ ಭಾಗವಾಗಿ ಸಾಕಷ್ಟು ಬೆಳವಣಿಗೆಗಳು ಕೂಡ ನಡೆದಿದ್ದವು. ತದನಂತರ ದೂರು ಕೊಟ್ಟವರೇ ಉಲ್ಟಾ ಹೊಡೆದು ಪ್ರಕರಣದ ತಿರುವನ್ನೇ ಬದಲಾಯಿಸಿದ್ದರು. ಆದರೆ ಈಗ 100 ದಿನಗಳ ಬಳಿಕ ಎಸ್‌ಐಟಿ ವರದಿ ಕುತೂಹಲ ಹೆಚ್ಚಿದ್ದು, ಎಲ್ಲರ ಅಸಲಿಯತ್ತು ಬಯಲಾಗುತ್ತಾ ಕಾದುನೋಡಬೇಕಿದೆ.

ಅ.26, ಸ್ಥಳದಲ್ಲಿಯೇ ಚಿತ್ರ ಬಿಡಿಸುವ ಸ್ಪರ್ಧೆ

ಮೈಸೂರು: ಚೈತನ್ಯ ಸ್ಕೂಲ್ ಆಫ್ ಆರ್ಟ್ಸ್ ಮತ್ತು ಡ್ಯಾನ್ಸ್ ಶಾಲೆ ವತಿಯಿಂದ ದೀಪಾವಳಿ ಮತ್ತು ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಅ.26ರಂದು ಬೆಳಗ್ಗೆ 11 ಗಂಟೆಗೆ ಲಲಿತಮಹಲ್ ನಗರ (ಆಲನಹಳ್ಳಿ ಬಡಾವಣೆ)ದಲ್ಲಿರುವ ಶಾಲೆಯಲ್ಲಿ ಎಲ್‌ಕೆಜಿಯಿಂದ 8ನೇ ತರಗತಿವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಚಿತ್ರ ಬಿಡಿಸುವ ಸ್ಪರ್ಧೆ ಏರ್ಪಡಿಸಲಾಗಿದೆ. ಮಾಹಿತಿಗೆ ಮೊ. 9900824282, 9448247766.

ರಸ್ತೆ ಗುಂಡಿ ಮುಚ್ಚಲು ದೀಪ ಹಚ್ಚಿ ಪ್ರತಿಭಟನೆ



ರಸ್ತೆ ಗುಂಡಿ ಮುಚ್ಚಲು ಒತ್ತಾಯಿಸಿ ದೀಪ ಬೆಳಗಿಸಿ ಪ್ರತಿಭಟಿಸಿದರು.

ಕಿಕ್ಕೇರಿ: ಕಿಕ್ಕೇರಿ ಮಾರ್ಗದ ರಾಜ್ಯ ಹೆದ್ದಾರಿಯ ಮೈಸೂರು–ಅರಸೀರೆ ರಸ್ತೆ ಸಂಪೂರ್ಣ ಹಾಳಾಗಿದ್ದು ಪ್ರಯಾಣಿಕರು, ಪಾದಚಾರಿಗಳು ಜೀವಭಯದಿಂದ ಓಡಾಡಬೇಕಿದೆ ಎಂದು ಆಕ್ರೋಶ ವ್ಯಕ್ತಪಡಿಸಿ ಪಟ್ಟಣದ ಕೆ.ಎಸ್. ನರಸಿಂಹಸ್ವಾಮಿ ಸಮುದಾಯ ಭವನ ಬಳಿ ಇರುವ ಗುಂಡಿ ಬಿದ್ದ ರಾಜ್ಯ ಹೆದ್ದಾರಿಯ ಗುಂಡಿಯಲ್ಲಿ ವೃದ್ಧಾಶ್ರಮದಲ್ಲಿರುವ ಆಶ್ರಿತರು, ಸಾರ್ವಜನಿಕರು ದೀಪಾವಳಿ ಹಬ್ಬದ ಬುಧವಾರ ಸಂಜೆ ಗುಂಡಿಗಳಲ್ಲಿ ಹಣತೆ ಹಚ್ಚಿ ಬೆಳಗಿಸಿ ಕತ್ತಲೆಯಿಂದ ದೂರ ಸರಿಸಿ, ಗುಂಡಿಗೆ ಬಿದ್ದು ಕೈಕಾಲು ಮುರಿದುಕೊಳ್ಳುವ, ಪ್ರಾಣ ಕಳೆದುಕೊಳ್ಳುವವರನ್ನು ರಕ್ಷಿಸಿ ಎಂದು ದೀಪಗಳನ್ನು ಇಟ್ಟು ಸಾರ್ವಜನಿಕರೊಂದಿಗೆ ಪ್ರತಿಭಟನೆಗೆ ಇಳಿದ ವೃದ್ಧಾಶ್ರಮದ ನಾಗಣ್ಣ ಸರ್ಕಾರ, ಅಧಿಕಾರಿಗಳ ವರ್ತನೆ ಕುರಿತು ಕಿಡಿಕಾರಿದರು.

ನಿತ್ಯ ನೂರಾರು ವಾಹನ ಮುಂಬೈ, ಗೋವಾ, ಶಿವಮೊಗ್ಗ, ಹುಬ್ಬಳ್ಳಿ, ಮಾನಂದವಾಡಿ ಸೇರಿದಂತೆ ವಿವಿಧ ನಗರ ಪ್ರದೇಶಗಳಿಗೆ ಓಡಾಡುತ್ತಿವೆ. ಹದಗೆಟ್ಟ ರಸ್ತೆ, ಗುಂಡಿಗಳಿಂದ ಅಪಘಾತ ಹೆಚ್ಚುತ್ತಿದೆ. ಶಾಲಾ ಕಾಲೇಜು ಮಕ್ಕಳು, ವಯೋವೃದ್ದರು, ರೋಗಿಗಳು, ಗರ್ಭಿಣಿಯರು ಪ್ರಯಾಣ ಮಾಡುವುದೇ ಕಷ್ಟ ಆಗಿದೆ. ಸಾಕಷ್ಟು ಬಾರಿ ಮನವಿ ಮಾಡಲಾಗಿದ್ದರೂ ಪ್ರಯೋಜನವಾಗಿಲ್ಲ.

ಕನಿಷ್ಟ ಗುಂಡಿ ಮುಚ್ಚುವ ಕೆಲಸವನ್ನು ಮಾಡಿಲ್ಲ. ಸಾರ್ವಜನಿಕರ ಸಹಕಾರದಿಂದ ತಾನೇ ಸಾಕಷ್ಟು ಬಾರಿ ಗುಂಡಿ ಮುಚ್ಚಿದ್ದೇನೆ. ಇದು ಸಾಂಕೇತಿಕ ಪ್ರತಿಭಟನೆಯಾಗಿದೆ. ಇದೇ ರೀತಿ ಮುಂದುವರೆದರೆ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು. ಮಾತೃಭೂಮಿ ಸಂಸ್ಥೆ ಆಶ್ರಿತರು, ಸಾರ್ವಜನಿಕರು ಉಪಸ್ಥಿತರಿದ್ದರು.

ವೈಭವದ ಶ್ರೀ ಲಕ್ಷ್ಮಿ ದೇವಿ ಜಾತ್ರಾ ಮಹೋತ್ಸವ

ಪಾಂಡವಪುರ: ತಾಲೂಕಿನ ಜಾಗಟೆ ಮಲ್ಲೇನಹಳ್ಳಿ ಗ್ರಾಮದಲ್ಲಿ ದೀಪಾವಳಿ ಹಬ್ಬದ ಅಂಗವಾಗಿ ಬುಧವಾರ ನಡೆದ ಶ್ರೀಲಕ್ಷ್ಮೀ ದೇವಿ ಜಾತ್ರಾ ಮಹೋತ್ಸವಕ್ಕೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಚಾಲನೆ ನೀಡಿದರು.

ಪ್ರತಿವರ್ಷ ದೀಪಾವಳಿ ಹಬ್ಬದ ದಿನದಂದು ನಡೆಯುವ ಉದ್ಭವ ಮೂರ್ತಿ ಶಕ್ತಿದೇವತೆ ಶ್ರೀಲಕ್ಷ್ಮೀದೇವಿ ಜಾತ್ರಾ ಮಹೋತ್ಸವದಲ್ಲಿ ಜಾಗಟೆ ಮಲ್ಲೇನಹಳ್ಳಿ, ಶ್ಯಾದನಹಳ್ಳಿ ಹಾಗೂ ಅರಳಕುಪ್ಪೆ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಿಂದ ನೂರಾರು ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿ ದೇವರಿಗೆ ಪೂಜೆ ಸಲ್ಲಿಸುತ್ತಾರೆ. ಜಾತ್ರೆಯ ಅಂಗವಾಗಿ ಹರಕೆ ಹೊತ್ತು ಭಕ್ತರು ದೇವಿಗೆ ಬಾಳೆಹಣ್ಣಿನ ಗೊನೆ ನೀಡಿದರು. ಬುಧವಾರ ಬೆಳಿಗ್ಗೆಯಿಂದಲೇ ಭಕ್ತರು ಸರತಿ ಸಾಲಿನಲ್ಲಿ ಆಗಮಿಸಿ ದೇವಿಯ ದರ್ಶನ ಪಡೆದು ಭಕ್ತಿಭಾವ ಸಮರ್ಪಿಸಿದರು. ಆಗಮಿಸಿದ ಭಕ್ತರಿಗೆ ಜಾತ್ರಾ ಸಮಿತಿಯ ವತಿಯಿಂದ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಿತು. ಜಾತ್ರಾ ಮಹೋತ್ಸವಕ್ಕೆ ಆಗಮಿಸುವ ಭಕ್ತರ ಮನರಂಜನೆಗಾಗಿ ಗ್ರಾಮರಂಗ ವೇದಿಕೆಯ ಪ್ರಸಿದ್ದ ಗಾಯಕ ನಾಗಲಿಂಗೇಗೌಡ ಮತ್ತು ತಂಡದಿಂದ ಸುಗಮ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಶ್ರೀಲಕ್ಷ್ಮೀದೇವಿ ಜಾತ್ರಾ ಮಹೋತ್ಸವಕ್ಕೆ ಆಗಮಿಸಿದ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಅವರು ದೇವಿಯ ದರ್ಶನ ಪಡೆದು ಬಳಿಕ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಿದರು, ಬಳಿಕ ಜಾತ್ರಾ ಸಮಿತಿ ವತಿಯಿಂದ ಅಭಿನಂದನೆ ಸ್ವೀಕರಿಸಿದರು. ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಅವರು ಭಾಗವಹಿಸಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ದರ್ಶನ ಪಡೆದರು. ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಸೋದರ ರಾಘವ ಅವರು ಆಗಮಿಸಿ ದೇವಿಯ ದರ್ಶನಪಡೆದರು.

ಇದೇ ವೇಳೆ ಜಾತ್ರಾ ಸಮಿತಿಯ ಅಧ್ಯಕ್ಷ ಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಚಲುವರಾಜು ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಭಕ್ತರು, ಸಾರ್ವಜನಿಕರು, ಮುಖಂಡರು ಭಾಗವಹಿಸಿದ್ದರು.



ಶ್ರೀಲಕ್ಷ್ಮೀದೇವಿ ಜಾತ್ರಾ ಮಹೋತ್ಸವಕ್ಕೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಚಾಲನೆ ನೀಡಿದರು.

ಪತ್ನಿ ಶೀಲ ಶಂಕಿಸಿ ಕತ್ತು ಸೀಳಿ ಕೊಲೆ ಮಾಡಿದ ಪತಿ

ಮಂಡ್ಯ: ಹೆಂಡತಿಯ ಶೀಲ ಶಂಕಿಸಿದ ಪತಿಯೊಬ್ಬ ಹೆಂಡತಿಯ ಕತ್ತು ಸೀಳಿ ಭೀಕರವಾಗಿ ಕೊಲೆ ಮಾಡಿರುವ ಘಟನೆ ತಾಲೂಕಿನ ಕಾಳೇನಹಳ್ಳಿ ಗ್ರಾಮದಲ್ಲಿ ಬುಧವಾರ ಸಂಜೆ ನಡೆದಿದೆ.

ಗ್ರಾಮದ ಶ್ವೇತಾ(38) ಕೊಲೆಯಾದ ಗೃಹಿಣಿಯಾಗಿದ್ದು, ಲೋಕೇಶ್ ಹತ್ಯೆ ಮಾಡಿದ ಪತಿಯಾಗಿದ್ದಾನೆ. 17 ವರ್ಷದ ಹಿಂದೆ ಪ್ರೀತಿಸಿ ಮದುವೆಯಾಗಿದ್ದ ಲೋಕೇಶ್ ಹಾಗೂ ಶ್ವೇತಾ ದಂಪತಿ, ಕೆಲ ವರ್ಷ ಅನ್ಯೋನ್ಯವಾಗಿ ಜೀವನ ಸಾಗಿಸುತ್ತಿದ್ದರು. ನಂತರದ ದಿನಗಳಲ್ಲಿ ಪತಿ–ಪತ್ನಿ ನಡುವೆ ಪದೇ ಪದೇ ಜಗಳ ನಡೆಯುತ್ತಿತ್ತು. ಪತಿ ಲೋಕೇಶ್, ಶ್ವೇತಾಳ ಶೀಲ ಶಂಕಿಸಿ ಜಗಳ ತೆಗೆಯುತ್ತಿದ್ದನು ಎಂದು ತಿಳಿದು ಬಂದಿದೆ.

ಅದರಂತೆ ಬುಧವಾರ ಸಂಜೆಯೂ ಜಗಳ ನಡೆದಿದೆ. ಕೋಪ ವಿಕೋಪಕ್ಕೆ ತಿರುಗಿ, ಆಗ ಪತಿ ಲೋಕೇಶ್ ಚಾಕುವಿನಿಂದ ಶ್ವೇತಾಳ ಕತ್ತು ಕೊಯ್ದು ಕೊಲೆ ಮಾಡಿದ್ದಾನೆ. ಕೊಲೆ ಮಾಡಿ ಮನೆ ಬಾಗಿಲಲ್ಲೇ ಕುಳಿತಿದ್ದನು. ಮನೆ ಬಾಗಿಲು ಮತ್ತು ಒಳಗಡೆ ರಕ್ತಪಾತವಾಗಿರುವುದನ್ನು ಕಂಡು ಸ್ಥಳೀಯರು ಆತಂಕಗೊಂಡರು.

ಸ್ಥಳೀಯರ ಮಾಹಿತಿ ಆಧರಿಸಿ ಸ್ಥಳಕ್ಕೆ ಮಂಡ್ಯ ಗ್ರಾಮಾಂತರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ, ಪತ್ನಿ ಕೊಲೆಗೈದ ಲೋಕೇಶ್‌ನನ್ನು ಬಂಧಿಸಿದ್ದಾರೆ. ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಬಿಡದೆ ಸುರಿದ ಮಳೆಗೆ ಮನೆ ಕುಸಿತ



ಕಿಕ್ಕೇರಿ: ಸಮೀಪದ ಕಾರಿಗಾನಹಳ್ಳಿ ಗ್ರಾಮದಲ್ಲಿ ರೈತರೊಬ್ಬರ ಮನೆ ಸತತವಾಗಿ ಬಿಡದೆ ಸುರಿದ ಮಳೆಯಿಂದ ಕುಸಿದಿದೆ. ಮನೆ ಹಾನಿಗೊಳಗಾದ ರೈತ ಗ್ರಾಮದ ಕಾಂತರಾಜು. ಮಂಗಳವಾರ ಸುರಿದ ಮಳೆಗೆ ಮೊದಲೇ ಮಣ್ಣಿನ ಗೋಡೆಯ ಮನೆ ತೇವಾಂಶವಾಗಿತ್ತು. ಶೀಘ್ರವಾಗಿ ಮನೆಯ ಗೋಡೆ ಕುಸಿದಿದೆ. ಇದರಿಂದಾಗಿ ಮನೆಯ ಮೇಲ್ಚಾವಣಿ, ಹೆಂಚು, ತೊಲೆಗಳು ನೆಲಸಮವಾಗಿವೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಆಗಿರುವುದಿಲ್ಲ. ಮನೆಯಲ್ಲಿದ್ದ ಧವಸ, ಧಾನ್ಯ, ಅಡುಗೆ ಪಾತ್ರೆಗಳು ಹಾಳಾಗಿವೆ. ರೈತ ಕಾಂತರಾಜುಗೆ ಪ್ರಾಕೃತಿಕ ವಿಕೋಪದಡಿಯಲ್ಲಿ ತ್ವರಿತವಾಗಿ ಸರ್ಕಾರವು ನೆರವು ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಶ್ರೀ ಮಾಸ್ತಮ್ಮ ದೇವಿಯ ಪ್ರತಿಷ್ಠಾಪನೆ



ಮಳವಳ್ಳಿ, ಅ.23– ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕು ಕ್ಯಾತೇ ಗೌಡನದೊಡ್ಡಿ ಗ್ರಾಮ ದೇವತೆ ಶ್ರೀ ಮಾಸ್ತಮ್ಮ ದೇವಿಯ ವಿಗ್ರಹ ಪ್ರತಿಷ್ಠಾಪನೆ, ಕಳಸ ಪ್ರತಿಷ್ಠಾಪನೆ, ಬಸವಣ್ಣ ದೇವರುಗಳ ಪೂಜೆ ಮತ್ತು ಅನ್ನ ಸಂತರ್ಪಣೆ ಕಾರ್ಯಕ್ರಮವು ಅದ್ದೂರಿಯಾಗಿ ನೆರವೇರಿತು.

ಮಳವಳ್ಳಿ ಮಂಟೇಸ್ವಾಮಿ ಬಸವಣ್ಣನ ಆದೇಶದ ಮೇರೆಗೆ ಈ ದೇವಸ್ಥಾನ ನಿರ್ಮಾಣಗೊಂಡಿದೆ. ಗುರುವಾರ ಸಂಜೆ 5ರಿಂದ ಗೋಧೂಳಿ ಲಗ್ನದಲ್ಲಿ ಗಂಗಾ ಪೂಜೆ ಗಣಪತಿ ಪೂಜೆ, ಹೋಮ ಮತ್ತು ಹೂ ಹೊಂಬಾಳೆ ಸಮೇತ ದೇವರನ್ನು ಬರಮಾಡಿಕೊಳ್ಳಲಾಯಿತು.

ಗುರುವಾರ ದೇವಿಯ ಪ್ರತಿಷ್ಠಾಪನೆ, ಕಳಸ ಪ್ರತಿಷ್ಠಾಪನೆ, ನವಗ್ರಹ ಹೋಮ ಮತ್ತು ಪೂರ್ಣಾವತಿ ನೆರವೇರಿತು.ಈ ಪೂಜೆ ಕಾರ್ಯಕ್ರಮವನ್ನು ಶ್ರೀ ಧರೆಗೆ ದೊಡ್ಡವರ ಪಟ್ಟದ ಮಳವಳ್ಳಿ ಮಂಟೇಸ್ವಾಮಿ ಬಸವಣ್ಣನವರ ನೇತೃತ್ವದಲ್ಲಿ ಜರುಗಿತು. ಆ ಊರಿನ ಯಜಮಾನರು, ಯುವಕರು, ಸಂಘ ಸಂಸ್ಥೆಯ ಕಾರ್ಯಕರ್ತರು ಎಲ್ಲಾ ಊರಿನ ಭಕ್ತರುಗಳು ಹಾಗೂ ಅಕ್ಕಪಕ್ಕದ ಗ್ರಾಮಸ್ಥರು ವಿಜೃಂಭಣೆಯಿಂದ ನಡೆದ ಮಾಸ್ತಮ್ಮ ದೇವಿಯ ಪೂಜೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಎಲ್ಲ ಪೂಜಾ ಕಾರ್ಯಕ್ರಮವನ್ನು ಅಂಚೇದೊಡ್ಡಿ ಗುರುಮಠದ ಶ್ರೀ ನಾಗಭೂಷಣರಾಧ್ಯರು ಮತ್ತು ಅವರ ತಂಡದವರ ವತಿಯಿಂದ ನಡೆಯಿತು.

ಫಲಕಗಳಲ್ಲಿ ಕನ್ನಡ ಬಳಕೆಗೆ ಆಗ್ರಹಿಸಿ ಪ್ರತಿಭಟನೆ



ಕರವೇ ಕಾರ್ಯಕರ್ತರು ತಾಲೂಕು ಕಚೇರಿ ಆವರಣದಲ್ಲಿ ಪ್ರತಿಭಟನೆ ಮಾಡಿದರು.

ಮದ್ದೂರು: ನಗರ ಸೇರಿದಂತೆ ತಾಲೂಕಿನ ಎಲ್ಲಾ ಅಂಗಡಿ ಮುಂಗ್ಗಟ್ಟು ಹಾಗೂ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಜಾಹೀರಾತು ಫಲಕಗಳು ಕಡ್ಡಾಯವಾಗಿ ಕನ್ನಡ ಭಾಷೆ ಬಳಕೆ ಮಾಡಬೇಕೆಂದು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ನಗರದ ತಾಲೂಕು ಕಚೇರಿ ಆವರಣದಲ್ಲಿ ಪ್ರತಿಭಟನೆ ಮಾಡಿದರು.

ಗುರುವಾರ ಕಚೇರಿ ಮುಂದೆ ಆಗಮಿಸಿದ ವೇದಿಕೆ ಕಾರ್ಯಕರ್ತರು ಕಡ್ಡಾಯವಾಗಿ ಕನ್ನಡ ನಾಮಫಲಕಗಳನ್ನು ಅಳವಡಿಸಲು ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳದೆ ಬೇಜಾಬ್ದಾರಿತನ ಪ್ರದರ್ಶನ ಮಾಡುತ್ತಿದ್ದಾರೆಂದು ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ವೇದಿಕೆಯ ತಾಲೂಕು ಅಧ್ಯಕ್ಷ ಮಣಿಗೆರೆ ರಾಮಚಂದ್ರೇಗೌಡ ಮಾತನಾಡಿದರು. ಸ್ಥಳಕ್ಕೆ ಆಗಮಿಸಿದ ತಹಸೀಲ್ದಾರ್ ಪರಶುರಾಮ್ ಸತ್ತಿಗೇರಿ ಮನವಿ ಸ್ವೀಕರಿಸಿ ಮಾತನಾಡಿ, ಈ ಸಂಬಂಧ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂಪಡೆಯಲಾಯಿತು.

ಪ್ರತಿಭಟನೆಯಲ್ಲಿ ವೇದಿಕೆಯ ತಾಲೂಕು ಮಹಿಳಾ ಅಧ್ಯಕ್ಷೆ ಪ್ರಭಾವತಿ ಬೋರೇ ಗೌಡ, ಉಪಾಧ್ಯಕ್ಷರಾದ ಗಣೇಶ್, ಗಿರೀಶ್, ಕಾರ್ಯದರ್ಶಿ ಪುಟ್ಟರಾಜು, ಮುಖಂಡರಾದ ಶಿವರಾಜು, ಕಾಂತರಾಜು, ಮದ್ದೂರು ಮಹದೇವು, ವಸಂತಮ್ಮ ಇದ್ದರು.

ಮಂಡ್ಯ ಜಿಲ್ಲೆಯಲ್ಲಿ ಮಳೆ ಅವಾಂತರ ತಡೆಯಿರಿ



ಅಧಿಕಾರಿಗಳೊಂದಿಗೆ ಸಭೆ ನಡೆಸುತ್ತಿರುವ ಜಿಲ್ಲಾಧಿಕಾರಿ ಡಾ.ಕುಮಾರ.

ಮಂಡ್ಯ,ಅ.23– ಕಳೆದ ಎರಡು ದಿನಗಳಿಂದ ಮಳೆ ಸುರಿಯುತ್ತಿದ್ದು ಹವಾಮಾನ ಇಲಾಖೆಯ ವರದಿಯ ಪ್ರಕಾರ ಇನ್ನೂ ಮೂರು ಅಥವಾ ನಾಲ್ಕು ದಿನಗಳ ಕಾಲ ಜಿಲ್ಲೆಯಲ್ಲಿ ಮಳೆ ಮುಂದುವರಿಯಲಿದೆ. ಈ ಸಂದರ್ಭದಲ್ಲಿ ಅಧಿಕಾರಿಗಳು ವಿಪತ್ತು ನಿರ್ವಹಣೆಯ ಕುರಿತು ಅಗತ್ಯ ಕ್ರಮ ಕೈಗೊಳ್ಳಿ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆಯೋಜಿಸಲಾಗಿದ್ದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೊಡಗಿನಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ಹೇಮಾವತಿ ಜಲಾಶಯದಿಂದ ಕೃಷ್ಣರಾಜಸಾಗರ ಜಲಾಶಯಕ್ಕೆ 4600 ಕ್ಯೂಸೆಕ್ ನೀರು ಬಿಡಲಾಗಿದೆ, ಕಾವೇರಿ ನದಿಪಾತ್ರದಲ್ಲಿ ವಿಪತ್ತು ನಿರ್ವಹಣೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಕಳೆದ ಬಾರಿ ಜಿಲ್ಲೆಯಲ್ಲಿ ಸುರಿದ ಮಳೆಯಿಂದಾಗಿ ಜಿಲ್ಲೆಯ ಕೆಎಚ್‌ಬಿ ಕಾಲೋನಿ ನೀರು ನುಗ್ಗಿದ್ದು, ಸಿ.ಡಿ.ಎಸ್ ನಾಲೆ ಹೊಡೆದು ಹೋಗಿತ್ತು. ಮಳೆಯಿಂದ ಹಾನಿಗೊಳಗಾದ ಸ್ಥಳಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶಾಸಕರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಸದರಿ ಸ್ಥಳಗಳಲ್ಲಿ ಮಳೆಯಿಂದ ಹಾನಿಗೊಳಗಾದ ಸಂತ್ರಸ್ತರ ಪರಿಹಾರಕ್ಕೆ ಪರಿಹಾರ ತಂತ್ರಾಂಶದಲ್ಲಿ ಅಗತ್ಯ ಮಾಹಿತಿ ಒದಗಿಸಿ. ಯಾವುದೇ ಕಾರಣಕ್ಕೂ ಒಬ್ಬ ಸಂತ್ರಸ್ತರನ್ನು ಪರಿಹಾರದ ಪಟ್ಟಿಯಿಂದ ಕೈಬಿಡುವಂತಿಲ್ಲ, ಸಂಬಂಧಪಟ್ಟ ತಹಶೀಲ್ದಾರ್ ಗಳು ಹಾನಿಗೊಳಗಾದವರ ಪಟ್ಟಿಯನ್ನು ಕೂಲಂಕಷವಾಗಿ ಪರಿಶೀಲಿಸಿ ಪರಿಹಾರವನ್ನು ಶೀಘ್ರವಾಗಿ ಕೊಡಿಸಿ ಎಂದು ತಿಳಿಸಿದರು.

ಕೆ.ಎಚ್.ಬಿ ಕಾಲೋನಿಯಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ, ಇನ್ನೂ ಮೂರ್ನಾಲ್ಕು ದಿನಗಳ ಕಾಲ ಮಳೆ ಇರುವುದರಿಂದ ಕೆಎಚ್‌ಬಿ ಕಾಲೋನಿಗೆ ನೀರು ನುಗ್ಗಿದರೆ ನೇರವಾಗಿ ಅಧಿಕಾರಿಗಳೇ ಹೊಣೆ, ಮಳೆಯಿಂದಾಗಿ ಕೆ.ಆರ್.ಪೇಟೆಯ 24 ಶಾಲೆಗಳಿಗೆ ಹಾನಿಯಾಗಿದೆ ಎಂದು ವರದಿ ನೀಡಲಾಗಿದೆ. ತಹಶೀಲ್ದಾರ್ ಖುದ್ದಾಗಿ 24 ಶಾಲೆಗಳಿಗೂ ಭೇಟಿ ನೀಡಿ ಪರಿಶೀಲನೆ ನಡೆಸಿ ಎಂದರು.

ನಾಗಮಂಗಲ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ನೀರು ನಿಲ್ಲದಂತೆ ದುರಸ್ತಿ ಮಾಡಲು ಟೆಂಡರ್ ಕರೆಯಲಾಗಿತ್ತು, ಈಗಾಗಲೇ ಶೇ.25ರಷ್ಟು ಕಾಮಗಾರಿ ಪೂರ್ಣಗೊಂಡಿದೆ, ಉಳಿದ ಕಾಮಗಾರಿಯನ್ನು ತಿಂಗಳೊಳಗೆ ಮುಗಿಸಬೇಕು ಎಂದರು.

ಒಂದನೇ ಪುಟದಿಂದ

ಸತೀಶ್ ಜಾರಕಿಹೊಳಿ ಉತ್ತರಾಧಿಕಾರಿ!!

ಡಾ.ಯತೀಂದ್ರ ತಮ್ಮ ತಂದೆ ಸಿದ್ದರಾಮಯ್ಯ ನಂತರ ಜಾರಕಿಹೊಳಿಯೇ ನಾಯಕರು ಎಂದು ಘೋಷಿಸಿದ್ದಾರೆ. ತಂದೆಯವರು ಸಾಮಾಜಿಕ ನ್ಯಾಯದಲ್ಲಿ ನಂಬಿಕೆ ಇಟ್ಟವರು. ಅದೇ ಸಿದ್ಧಾಂತದಲ್ಲಿ ಸತೀಶ್ ಜಾರಕಿಹೊಳಿ ಸಹ ನಂಬಿಕೆ ಇಟ್ಟಿದ್ದಾರೆ.

ಸೈದ್ಧಾಂತಿಕ ರಾಜಕಾರಣ ಮಾಡುವ ನಾಯಕರು ನಮ್ಮನ್ನು ಮುನ್ನಡೆಸಲಿ ಎಂಬುದಾಗಿ ಹೇಳಿದ್ದೇನೆಯೇ ಹೊರತು ಇದರಲ್ಲಿ ಬೇರೆ ಅರ್ಥ ಕಲ್ಪಿಸುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಸತೀಶ್ ಜಾರಕಿಹೊಳಿ ಜೊತೆಗೂಡಿ ಬೆಳಗಾವಿಯಲ್ಲಿ ನಡೆದ ಸಾರ್ವಜನಿಕ ಸಮಾರಂಭದಲ್ಲೇ ಇಂತಹ ಹೇಳಿಕೆ ನೀಡಿರುವ ಡಾ.ಯತೀಂದ್ರ, ನಮ್ಮ ಸಿದ್ದರಾಮಯ್ಯ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಣಕ್ಕಿಳಿಯದೆ, ಚುನಾವಣಾ ರಾಜಕೀಯದಿಂದ ದೂರ ಉಳಿಯಲಿದ್ದಾರೆ. ಇಂತಹ ಸನ್ನಿವೇಶದಲ್ಲಿ ನಮ್ಮನ್ನು ಮುನ್ನಡೆಸಲು ಸತೀಶ್ ಸಮರ್ಥ ನಾಯಕರು, ಮುಖ್ಯಮಂತ್ರಿಯ ಪ್ರಸಕ್ತ ಅವಧಿಯನ್ನು ನಮ್ಮ ತಂದೆ ಪೂರ್ಣಗೊಳಿಸಲಿದ್ದಾರೆ ಎಂದರು.

ದೇವರಾಜ ಅರಸು ನಂತರ ಹಲವು ನಾಯಕರು ಸಾಮಾಜಿಕ ನ್ಯಾಯದಲ್ಲಿ ನಂಬಿಕೆ ಇಟ್ಟು ರಾಜಕೀಯ ಮಾಡಿದ್ದಲ್ಲದೆ, ಸಂಘಟನೆಯನ್ನೂ ಮಾಡಿದರು. ತದನಂತರ ಸಿದ್ದರಾಮಯ್ಯ ಇದೇ ಸಿದ್ಧಾಂತದಲ್ಲಿ ರಾಜಕೀಯ ಮಾಡಿಕೊಂಡು ಬಡವರು, ದಲಿತರು, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರಿಗೆ ಸಲ್ಲಬೇಕಾದ ನ್ಯಾಯ ಕೊಡಿಸುವಲ್ಲಿ ಶ್ರಮ ವಹಿಸಿದ್ದಾರೆ.

ಇದು ನಿಂತ ನೀರಾಗಬಾರದು. ಈ ವರ್ಗದ ಜನರ ಕಲ್ಯಾಣಕ್ಕೆ ಸಿದ್ದರಾಮಯ್ಯ ಅಂತಹ ನಾಯಕರ ಅಗತ್ಯವಿದೆ. ಅಂತಹ ಗುಣವನ್ನು ಸತೀಶ್ ಅವರಲ್ಲಿ ಕಂಡು ನಿಮ್ಮಲ್ಲಿ ಬಹಿರಂಗವಾಗಿಯೇ ಹೇಳುತ್ತಿದ್ದೇನೆ.

2028ರ ವಿಧಾನಸಭಾ ಚುನಾವಣಾ ನಾಯಕತ್ವವನ್ನೂ ಸತೀಶ್ ಅವರೇ ವಹಿಸಿಕೊಳ್ಳಲಿ. ಅವರ ಹಿಂದೆ ನನ್ನಂತಹ ಲಕ್ಷಾಂತರ ಕಾರ್ಯಕರ್ತರು ಮತ್ತು ಮುಖಂಡರು ಬೆನ್ನಲುಬಾಗಿ ನಿಲ್ಲಲಿದ್ದಾರೆ ಎಂದರು.

ಸಮಾರಂಭದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಡಾ.ಯತೀಂದ್ರ, ಪರ್ಯಾಯ ನಾಯಕ ಎಂದ ತಕ್ಷಣ ಸಿದ್ದರಾಮಯ್ಯ ಅಧಿಕಾರ ಬಿಟ್ಟುಕೊಡುತ್ತಾರೆ ಎಂಬ ಅರ್ಥದಲ್ಲಿ ಹೇಳಿಲ್ಲ.

ನವೆಂಬರ್‌ನಲ್ಲಿ ಕ್ರಾಂತಿ ಎನ್ನುವುದು ಊಹಾಪೋಹ. ನಾಯಕತ್ವ ಬದಲಾವಣೆ ಪ್ರಶ್ನೆಯೇ ಇಲ್ಲ. ಪಕ್ಷದಲ್ಲಿ ಅಂತಹ ಚರ್ಚೆಯೂ ನಡೆದಿಲ್ಲ. ರಾಜ್ಯ ಕಾಂಗ್ರೆಸ್‌ನಲ್ಲಿ ಮುಖ್ಯ ಮಂತ್ರಿ ಆಗುವ ಹಲವು ಸಮರ್ಥ ನಾಯಕರಿದ್ದಾರೆ. ಶಾಸಕರು ಮತ್ತು ಪಕ್ಷದ ವರಿಷ್ಠರು, ಶಾಸಕಾಂಗ ಪಕ್ಷದ ನಾಯಕ ಯಾರಾಗಬೇಕು ಎಂಬುದನ್ನು ನಿರ್ಧರಿಸುತ್ತಾರೆ. ಪ್ರಸ್ತುತ ನಡೆಯುತ್ತಿರುವ ಎಲ್ಲಾ ವಿಚಾರಗಳೂ ಊಹಾಪೋಹ ಎಂದರು.

ಡಿಕ್ಕಿ ಹೊಡೆಸಿ ಉದ್ಯಮಿ ಹತ್ಯೆಗೆ ಯತ್ನ

ಇದರಿಂದ ಕಾರು ತಿರುಗು–ಮುರುಗು ಆಗಿ ನಿಂತಿದೆ. ಮತ್ತೆ ಲಾರಿಯನ್ನು ರಿವರ್ಸ್ ತೆಗೆದುಕೊಂಡ ಚಾಲಕ ಮತ್ತೊಮ್ಮೆ ಕಾರಿಗೆ ಡಿಕ್ಕಿ ಹೊಡೆಸಲು ಪ್ರಯತ್ನಿಸುವ ಸಂದರ್ಭ ತೇಜಕುಮಾರ್, ಕಾರಿನಿಂದ ಇಳಿದು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಇದೇ ರಸ್ತೆಯಲ್ಲಿ ಬೈಕ್‌ನಲ್ಲಿ ಬರುತ್ತಿದ್ದ ಇಬ್ಬರು ವ್ಯಕ್ತಿಗಳು ಲಾರಿ ಅತೀ ವೇಗವಾಗಿ ಹಿಂದಕ್ಕೆ ಬರುತ್ತಿದ್ದುದ್ದನ್ನು ಗಮನಿಸಿ ಬೈಕ್ ಅನ್ನು ಸ್ಥಳದಲ್ಲೇ ಬಿಟ್ಟು ಓಡಿ ಹೋಗಿ ಅಪಾಯದಿಂದ ಪಾರಾಗಿದ್ದಾರೆ. ಈ ಸಂದರ್ಭದಲ್ಲಿ ಲಾರಿಯ ಅಡಿಯಲ್ಲಿ ಬೈಕ್ ಸಿಲುಕಿಕೊಂಡ ಪರಿಣಾಮ ಲಾರಿ ರಸ್ತೆ ಪಕ್ಕದ ಗುಂಡಿಗೆ ಇಳಿದು ಹೂತು ಚಲಿಸಲು ಸಾಧ್ಯವಾಗಿಲ್ಲ.

ಈ ಸಂದರ್ಭದಲ್ಲಿ ಸ್ಥಳದಲ್ಲೇ ಲಾರಿ ಬಿಟ್ಟು ಚಾಲಕ ಹಾಗೂ ಅದರಲ್ಲಿದ್ದ ಮತ್ತೋರ್ವ ಪರಾರಿಯಾಗಿದ್ದಾರೆ. ಕಾರಿನ ಏರ್ ಬ್ಯಾಗ್ ತೆರೆದುಕೊಂಡ ಪರಿಣಾಮ ತೇಜಕುಮಾರ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಘಟನೆಯಿಂದ ತೇಜ ಕುಮಾರ್ ಅವರ ಕಾಲಿಗೆ ಸಣ್ಣಪುಟ್ಟ ಗಾಯವಾಗಿದ್ದು ಕಾರಿನ ಮುಂಭಾಗ ಜಖಂ ಆಗಿದೆ.

ಲಾರಿ ಅಡಿಗೆ ಸಿಲುಕಿದ ಬೈಕ್ ಸಂಪೂರ್ಣ ನಜ್ಜು ಗುಜ್ಜಾಗಿದೆ. ಕುಶಾಲನಗರ ಡಿವೈಎಸ್‌ಪಿ ಚಂದ್ರಶೇಖರ್ ಮತ್ತು ಸಿಬ್ಬಂದಿ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಘಟನೆ ಬಗ್ಗೆ ವಿವರಿಸಿದ ತೇಜಕುಮಾರ್, ವೈಯುಕ್ತಿಕ ದ್ವೇಷದಿಂದ ರಮೇಶ್ ಮತ್ತು ಜೆಸಿಬಿ ದಿವಾಕರ್ ಎಂಬುವರು ಈ ಕೃತ್ಯ ನಡೆಸಿದ್ದಾರೆ ಎಂದು ಆರೋಪಿಸಿದ್ದಾರೆ. ಇವರಿಬ್ಬರು 2 ತಿಂಗಳ ಹಿಂದೆ ಪೆಟ್ರೋಲ್ ಬಂಕ್ ಸಮೀಪವಿರುವ ಕ್ಯಾಂಟಿನ್ ಮುಂಭಾಗ ಕತ್ತಿ ಬೀಸಿ ತಮ್ಮ ಹತ್ಯೆಗೆ ಪ್ರಯತ್ನಿಸಿದ್ದು ಈ ಬಗ್ಗೆ ಶನಿವಾರಸಂತೆ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಆ ಪ್ರಕರಣದಲ್ಲಿ ಪೊಲೀಸರು ಕಠಿಣ ಕ್ರಮ ಜರುಗಿಸಿದ್ದರೆ ಇಂದು ನನ್ನ ಹತ್ಯೆ ಯತ್ನದ ಘಟನೆ ಮರುಕಳಿಸುತ್ತಿರಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಘಟನೆಗೆ ಸಂಬಂಧಿಸಿದಂತೆ ಶನಿವಾರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳ ಪತ್ತೆಗಾಗಿ ಪೊಲೀಸರು ಶೋಧ ನಡೆಸುತ್ತಿದ್ದಾರೆ. ಕಾರಿಗೆ ಲಾರಿ ಡಿಕ್ಕಿ ಹೊಡೆದು ಸಿನಿಮೀಯ ರೀತಿಯಲ್ಲಿ ವ್ಯಕ್ತಿಯ ಹತ್ಯೆಗೆ ಪ್ರಯತ್ನಿಸಿದ ಘಟನೆಯಿಂದ ಈ ಭಾಗದ ಜನರು ಆತಂಕಗೊಂಡಿದ್ದಾರೆ.

ಇಂತಹ ಅಪರಾಧ ಕೃತ್ಯಗಳಿಗೆ ಆರಂಭದಲ್ಲೇ ಪೊಲೀಸರು ಕಠಿಣ ಕಾನೂನು ಕ್ರಮದ ಮೂಲಕ ಕಡಿವಾಣ ಹಾಕಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಐಷಾರಾಮಿ ಬಂಗಲೆಯಲ್ಲಿ ಭ್ರೂಣ ಲಿಂಗ ಪತ್ತೆ, ಹತ್ಯೆ ದಂಧೆ

ಮಂಡ್ಯದ ನಾಗಮಂಗಲ ತಾಲೂಕಿನ ಮಾವಿನಕೆರೆ ಗ್ರಾಮದ ಜಮೀನಿನ ಆಲೆ ಮನೆಯೊಂದರಲ್ಲಿ ಕಳೆದ ವರ್ಷ ಹೆಣ್ಣು ಭ್ರೂಣ ಹತ್ಯೆ ಪ್ರಕರಣ ಬಯಲಾದ ನಂತರ ಆ ಘಟನೆಯನ್ನು ಮೀರಿಸುವ ಮತ್ತೊಂದು ಅಮಾನವೀಯ ದಂಧೆ ಬಯಲಾಗಿದೆ. ಹೆಣ್ಣು ಭ್ರೂಣ ಪತ್ತೆ ಮಾಡಿ ಹತ್ಯೆ ಮಾಡುತ್ತಿದ್ದ ನರ್ಸ್ ಶ್ಯಾಮಲಾ ಹಾಗೂ ಈಕೆಯ ಸಹೋದರ ಗೋವಿಂದ ರಾಜು ಸೇರಿದಂತೆ ನಾಲ್ವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ಇಬ್ಬರು ತಲೆ ಮರೆಸಿಕೊಂಡಿದ್ದಾರೆ.

ಮೈಸೂರು ತಾಲೂಕು ಹುನಗನಹಳ್ಳಿಯ ಐಷಾರಾಮಿ ಬಂಗಲೆಯಲ್ಲಿ ಹೆಣ್ಣು ಭ್ರೂಣ ಪತ್ತೆ ಹಾಗೂ ಹತ್ಯೆ ನಡೆಯುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ರಾಜ್ಯ ಆರೋಗ್ಯ ಇಲಾಖೆಯ ಉಪ ನಿರ್ದೇಶಕ ವಿವೇಕ ದೊರೈ ಅವರು ರಹಸ್ಯ ಕಾರ್ಯಾಚರಣೆಗೆ ಯೋಜನೆ ರೂಪಿಸಿದ್ದರು. ಇದಕ್ಕಾಗಿ ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ ಹಾಗೂ ಮಂಡ್ಯ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಮೋಹನ್ ಸೇರಿದಂತೆ 8 ಜನರ ತಂಡ ರಚನೆ ಮಾಡಿದ್ದರು.

ಕಾರ್ಯಾಚರಣೆಯ ಸಣ್ಣ ಸುಳಿವು ದೊರೆಯದಂತೆ ಗೌಪ್ಯತೆ ಕಾಪಾಡಿದ್ದರು. ಅತ್ತ ಪೊಲೀಸರಿಗೂ ಇದರ ಮಾಹಿತಿ ಇರಲಿಲ್ಲ. ಮಂಡ್ಯ ಜಿಲ್ಲಾ ಆರೋಗ್ಯಾಧಿಕಾರಿಗಳ ಕಚೇರಿಯ ಚಾಲಕ ಬೆಟ್ಟಸ್ವಾಮಿಗೆ ಹೆಣ್ಣು ಭ್ರೂಣ ಹತ್ಯೆ ಮಾಡುವ ಜಾಲದ ಏಜೆಂಟ್‌ನನ್ನು ಸಂಪರ್ಕಿಸುವ ಜವಾಬ್ದಾರಿ ನೀಡಿದ್ದರು. ಜೊತೆಗೆ ಆರೋಗ್ಯ ಇಲಾಖೆಯ ಗರ್ಭಿಣಿಯೊಬ್ಬರನ್ನು ಕಾರ್ಯಾಚರಣೆಗೆ ನಿಯೋಜಿಸಲಾಗಿತ್ತು. ಪೂರ್ವ ಯೋಜನೆಯಂತೆ ನನ್ನ ಸಹೋದರಿಯ ಭ್ರೂಣ ಪತ್ತೆ ಮಾಡಬೇಕೆಂದು ಏಜೆಂಟ್ ಸಂಪರ್ಕಿಸಿದ ಬೆಟ್ಟಸ್ವಾಮಿಯ ಪ್ರಸ್ತಾಪಕ್ಕೆ ತಕ್ಷಣಕ್ಕೆ ಒಪ್ಪಿಕೊಳ್ಳದ ಏಜೆಂಟ್, ಅಕ್ಟೋಬರ್ 20ರ ಸಮಯ ನಿಗದಿ ಮಾಡಿದ್ದ.

ಅದರಂತೆ ಬೆಟ್ಟಸ್ವಾಮಿ ನಿನ್ನೆ ಮಧ್ಯಾಹ್ನ 3 ಗಂಟೆಗೆ ಬನ್ನೂರು ರಸ್ತೆಯ ಮೆಲ್ಲಹಳ್ಳಿಗೆ ಬಂದಿದ್ದಾರೆ. ಈ ವೇಳೆ ಕಾರ್ಯಾಚರಣೆಯಲ್ಲಿದ್ದ ವಿವೇಕ ದೊರೈ ಸೇರಿದಂತೆ ಇತರರು ಅಂತರ ಕಾಯ್ದುಕೊಂಡಿದ್ದರು.

ಅಲ್ಲಿಗೆ ಬಂದ ಏಜೆಂಟ್, ನಿಮ್ಮ ಸಹೋದರಿಯ ನನ್ನೊಂದಿಗೆ ಕಳಿಸಿ, ಅವರ ಭ್ರೂಣ ಪತ್ತೆ ಮಾಡಿದ ಮೇಲೆ ಇಲ್ಲಿಗೆ ಕರೆತಂದು ಬಿಡುತ್ತೇನೆ. ಆದರೆ ಈಗಲೇ 30 ಸಾವಿರ ರೂ. ನೀಡಬೇಕೆಂದು ಬೆಟ್ಟಸ್ವಾಮಿಗೆ ಷರತ್ತು ವಿಧಿಸಿದ್ದಾನೆ. ನಿಮ್ಮ ಜೊತೆಯಲ್ಲಿ ನಾವು ಬರುತ್ತೇವೆ, ಅಲ್ಲೇ ಹಣ ಕೊಡುತ್ತೇವೆ ಎಂದರೂ ಏಜೆಂಟ್ ಅದಕ್ಕೆ ಒಪ್ಪಲಿಲ್ಲ.


ಅನಿವಾರ್ಯವಾಗಿ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ ಆರೋಗ್ಯ ಇಲಾಖೆಯ ಸಿಬ್ಬಂದಿ ಗರ್ಭಿಣಿಯನ್ನು ಏಜೆಂಟ್ ಜೊತೆಯಲ್ಲಿ ಕಳುಹಿಸುವುದರೊಂದಿಗೆ 30 ಸಾವಿರ ಹಣ ಕೂಡ ನೀಡಿದ್ದಾರೆ. ಮೆಲ್ಲಹಳ್ಳಿಯಿಂದ ಆಕೆಯನ್ನು ಬೈಕ್‌ನಲ್ಲಿ ಕೂರಿಸಿಕೊಂಡು ಹೋದ ಏಜೆಂಟ್ ಸ್ವಲ್ಪ ದೂರ ಹೋದ ನಂತರ ಬೈಕ್ ಬದಲಿಸಿ ತಮಿಳು ನಾಡಿನ ನೋಂದಣಿ ಸಂಖ್ಯೆಯುಳ್ಳ ಮಾರುತಿ ವ್ಯಾನ್‌ನಲ್ಲಿ ಅವರನ್ನು ಕೂರಿಸಿಕೊಂಡು ಹೋಗಿದ್ದಾನೆ.

ವ್ಯಾನ್ ಹಿಂದೆ ಅಂತರ ಕಾಯ್ದುಕೊಂಡು ಹೋಗುತ್ತಿದ್ದಾಗ ಅವರನ್ನು ಚೇಸ್ ಮಾಡಲು ಸಾಧ್ಯವಾಗದೆ ಬೆಟ್ಟಸ್ವಾಮಿ ದಾರಿ ತಪ್ಪಿದ್ದಾರೆ. ಆದರೆ ಏಜೆಂಟ್ ಜೊತೆಯಲ್ಲಿ ಕಳುಹಿಸಿದ್ದ ಆರೋಗ್ಯ ಇಲಾಖೆಯ ಗರ್ಭಿಣಿ ಮಹಿಳೆ ಮೊಬೈಲ್ ಫೋನ್‌ಗೆ ಜಿಪಿಎಸ್ ಅಳವಡಿಸಿದ್ದ ಹಿನ್ನೆಲೆಯಲ್ಲಿ ಅದರ ಆಧಾರದ ಮೇಲೆ ಆ ಬಂಗಲೆ ಪತ್ತೆ ಮಾಡಿದ್ದಾರೆ.

ಬನ್ನೂರು ರಸ್ತೆಯ ಹನುಗನಹಳ್ಳಿ ಗ್ರಾಮದಿಂದ ಒಂದು ಕಿಲೋ ಮೀಟರ್ ದೂರದಲ್ಲಿ ಆ ಐಷಾರಾಮಿ ಬಂಗಲೆ ಇದೆ. ಗರ್ಭಿಣಿ ಮಹಿಳೆಯನ್ನು ಕರೆದೊಯ್ದ ವ್ಯಾನ್ ಸಹ ಬಂಗಲೆ ಒಳಗಿರುವುದು ಕಂಡುಬಂದಿದೆ. ಬಾಗಿಲು ತೆಗೆಯುವಂತೆ ಬೆಟ್ಟಸ್ವಾಮಿ ಹೇಳಿದಾಗ ಶ್ಯಾಮಲಾ ಸೇರಿದಂತೆ ಇತರರು ಸುತಾರಾಂ ಒಪ್ಪಲಿಲ್ಲ. ಕೊನೆಗೆ ಜೋರು ಮಾಡಿದಾಗ ಬಾಗಿಲು ತೆರೆದಿದ್ದಾರೆ. ಆದರೆ ಇಲ್ಲಿ ಯಾವುದೇ ರೀತಿಯ ಅಕ್ರಮ ಚಟುವಟಿಕೆ ನಡೆಯುತ್ತಿಲ್ಲ ಎಂದು ಶ್ಯಾಮಲಾ ಹಾಗೂ ಗೋವಿಂದ ರಾಜು ಸಮರ್ಥನೆ ಮಾಡಿಕೊಂಡಿದ್ದಾರೆ.

ಅಷ್ಟರಲ್ಲಿ ಬೆಟ್ಟಸ್ವಾಮಿ ನೀಡಿದ ಮಾಹಿತಿ ಮೇರೆಗೆ ವಿವೇಕ ದೊರೈ, ಡಿಹೆಚ್‌ಒಗಳಾದ ಡಾ.ಕುಮಾರಸ್ವಾಮಿ, ಡಾ.ಮೋಹನ್ ಸೇರಿದಂತೆ ಆರೋಗ್ಯ ಇಲಾಖೆಯ ಇತರರು ಸ್ಥಳಕ್ಕೆ ಬಂದಿದ್ದಾರೆ. ಬಳಿಕ ಬಂಗಲೆಯನ್ನು ಇಂಚಿಂಚು ಪರಿಶೀಲನೆ ಮಾಡಿದಾಗ ಮೊದಲ ಮಹಡಿಯಲ್ಲಿ ಭ್ರೂಣ ಪತ್ತೆ ಮಾಡುವ ಸ್ಕ್ಯಾನಿಂಗ್ ಯಂತ್ರ ಹಾಗೂ ಭ್ರೂಣ ಹತ್ಯೆ ಮಾಡುವ ಪರಿಕರಗಳು ಪತ್ತೆಯಾಗಿವೆ.

ಭ್ರೂಣ ಲಿಂಗ ಪತ್ತೆ ಪರೀಕ್ಷೆಗೆ ಇಬ್ಬರು ಗರ್ಭಿಣಿ ಮಹಿಳೆಯರು ಹಾಗೂ ಅವರ ಪೋಷಕರು ಈ ವೇಳೆ ಅಲ್ಲಿದ್ದರು. ಆರೋಗ್ಯ ಇಲಾಖೆಯ ಅಧಿಕಾರಿಗಳು ನೀಡಿದ ದೂರಿನ ಮೇರೆಗೆ ವರುಣ ಪೊಲೀಸ್ ಠಾಣೆಯ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿದರು. ಆರೋಗ್ಯಾಧಿಕಾರಿಗಳು ಹಾಗೂ ಪೊಲೀಸರು ಮಹಜರು ಸೇರಿದಂತೆ ಇತರೆ ಕಾನೂನಾತ್ಮಕ ಪ್ರಕ್ರಿಯೆ ಪೂರೈಸಿದರು. ಸಂಜೆ ಸುಮಾರು 4 ಗಂಟೆಗೆ ಆರಂಭವಾದ ಈ ಪ್ರಕ್ರಿಯೆ ರಾತ್ರಿ 12 ಗಂಟೆವರೆಗೆ ನಡೆಯಿತು.



ಬುಧವಾರ ಬನ್ನೂರು ರಸ್ತೆಯಲ್ಲಿನ ಬಂಗಲೆ ಮೇಲೆ ದಾಳಿ ನಡೆಸಿ ವಶಪಡಿಸಿಕೊಂಡ ನಗದು ಮತ್ತು ಇತರೆ ಪರಿಕರಗಳೊಂದಿಗೆ ವರುಣ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ತಿಮ್ಮರೆಡ್ಡಿ, ತಿ.ನರಸೀಪುರ ತಾಲೂಕು ಆರೋಗ್ಯಾಧಿಕಾರಿ ಡಾ. ರವಿಕುಮಾರ್, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ. ಗೋಪಿನಾಥ್, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಪಿ.ಸಿ. ಕುಮಾರಸ್ವಾಮಿ ಮತ್ತು ಇತರರಿದ್ದಾರೆ.

ಐಷಾರಾಮಿ ಬಂಗಲೆ ಶ್ಯಾಮಲಾದ್ದು!

ಹೆಣ್ಣು ಭ್ರೂಣ ಹತ್ಯೆ ಮಾಡುತ್ತಿರುವ ಬಗ್ಗೆ ಕಳೆದ ಮೂರು ತಿಂಗಳ ಹಿಂದೆಯೇ ಮಾಹಿತಿ ಸಿಕ್ಕಿತ್ತು. ಆದರೆ ಸರಿಯಾದ ಪುರಾವೆ ಸಿಕ್ಕಿರಲಿಲ್ಲ. ಈ ವಿಚಾರವಾಗಿ ಸಾಕ್ಷ್ಯ ಕಲೆ ಹಾಕಲಾಗುತ್ತಿತ್ತು. ಸರ್ಕಾರಿ ಆಸ್ಪತ್ರೆಗಳಲ್ಲಿ ತಾಯಿ ಕಾರ್ಡ್ ಪಡೆದಿರುವ ಮಹಿಳೆಯರು ಅಬಾರ್ಶನ್ ಆಗಿರುವ ವಿಚಾರದ ಸೂಕ್ಷ್ಮತೆ ಗಮನಿಸಲಾಗುತ್ತಿತ್ತು. ತರುವಾಯ ಖಚಿತವಾದ ಮೇಲೆ ಕಾರ್ಯಾಚರಣೆ ಮಾಡಲು ನಿರ್ಧರಿಸಲಾಯಿತು. ಆರೋಗ್ಯ ಇಲಾಖೆಯ ಪ್ರಧಾನ ಕಚೇರಿಗೆ ಈ ಬಗ್ಗೆ ಮಾಹಿತಿ ತಿಳಿಸಿ, ನಾವು ಮತ್ತು ಅವರು ಇಬ್ಬರು ಸೇರಿ ಜಂಟಿ ಕಾರ್ಯಾಚರಣೆ ನಡೆಸಿದೆವು. ಭ್ರೂಣ ಪತ್ತೆ ಮಾಡುತ್ತಿರುವ ಐಷರಾಮಿ ಬಂಗಲೆ, ಪ್ರಕರಣದ ಮೊದಲ ಆರೋಪಿ ಶ್ಯಾಮಲಾಗೆ ಸೇರಿದೆ ಎಂಬ ಮಾಹಿತಿ ದೊರೆತಿದೆ. ಈ ಬಗ್ಗೆ ತನಿಖೆ ನಡೆಯುತ್ತಿದೆ.

– ಡಾ. ಗೋಪಿನಾಥ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ

ಗ್ರಾಮೀಣ ಮಹಿಳೆಯರೇ ಇವರ ಟಾರ್ಗೆಟ್

ಭ್ರೂಣ ಲಿಂಗ ಪತ್ತೆ ಹಾಗೂ ಹೆಣ್ಣು ಭ್ರೂಣ ಹತ್ಯೆಗೆ ಗ್ರಾಮೀಣ ಭಾಗದ ಮಹಿಳೆಯರು ಇವರಿಗೆ ಟಾರ್ಗೆಟ್ ಆಗಿತ್ತು ಎಂಬ ವಿಚಾರ ಬೆಳಕಿಗೆ ಬಂದಿದೆ. ಈಗಾಗಲೇ ಒಂದು ಅಥವಾ ಎರಡು ಹೆಣ್ಣು ಮಗುವಿದೆ. ಮತ್ತೆ ಈ ಮಗು ಕೂಡ ಹೆಣ್ಣಾದರೆ ಗಂಡು ಸಂತಾನ ಇಲ್ಲದಂತಾಗುತ್ತದೆ. ವಂಶ ಬೆಳಗುವವನು ಇಲ್ಲದಂತಾಗುತ್ತಾನೆ ಎಂದು ಕೆಲವರು ಕೊರಗುತ್ತಿರುತ್ತಾರೆ.

ಈ ಪ್ರಕರಣದ ಕಿಂಗ್‌ಪಿನ್‌ಗಳಾದ ಶ್ಯಾಮಲಾ ಹಾಗೂ ಗೋವಿಂದರಾಜು ಕೆಲವು ಹಳ್ಳಿಗಳಲ್ಲಿ ಏಜೆಂಟ್‌ಗಳನ್ನು ನೇಮಕ ಮಾಡಿಕೊಂಡಿದ್ದರು. ಹೀಗೆ ಆಸ್ಪತ್ರೆಗೆ ಬರುವ ಗರ್ಭಿಣಿಯರನ್ನು ಏಜೆಂಟ್ ಪರಿಚಯ ಮಾಡಿಕೊಂಡು ಅಂತಹವರನ್ನು ಇಲ್ಲಿಗೆ ಕರೆ ತರುತ್ತಿದ್ದರು.

ಈ ದಂಧೆಯಿಂದ ಆರೋಪಿಗಳು ಲಕ್ಷಾಂತರ ರೂಪಾಯಿ ಸಂಪಾದನೆ ಮಾಡುತ್ತಿದ್ದರು. ಸ್ಥಳದಲ್ಲಿದ್ದ ಕಬ್ಬಿಣದ ಸೇಫ್ಟಿ ಲಾಕರ್ ನೋಡಿದರೆ ಅಲ್ಲಿ ಸಂಪಾದನೆ ಆಗುತ್ತಿದ್ದ ಹಣವೆಷ್ಟು ಎಂಬುದು ಅಂದಾಜಿಗೆ ಸಿಗುತ್ತದೆ. ಈ ತನಕ ಭ್ರೂಣ ಲಿಂಗ ಪತ್ತೆ ಹಾಗೂ ಹೆಣ್ಣು ಭ್ರೂಣ ಹತ್ಯೆ ಮಾಡಿರುವ ಪ್ರಕರಣದ ಹೆಚ್ಚಿನ ಮಾಹಿತಿ ಆರೋಪಿಗಳು ಬರೆದಿರುವ ಡೈರಿ ಸ್ಥಳದಲ್ಲಿ ಪತ್ತೆಯಾಗಿದೆ.

ಭ್ರೂಣ ಲಿಂಗ ಪತ್ತೆ, ಹತ್ಯೆ ಪ್ಯಾಕೇಜ್‌ಗೆ 60 ಸಾವಿರ!

ಭ್ರೂಣ ಲಿಂಗ ಪತ್ತೆ ಹಾಗೂ ಹೆಣ್ಣು ಭ್ರೂಣ ಹತ್ಯೆ ತಡೆಗೆ ಸರ್ಕಾರ ಕಟ್ಟುನಿಟ್ಟಿನ ಕಾನೂನು ರೂಪಿಸಿದೆ. ಆದರೆ,ಹಣಕ್ಕಾಗಿ ಕದ್ದು ಮುಚ್ಚಿ ಇದು ನಡೆಯುತ್ತಲೇ ಇದೆ.

ಬನ್ನೂರಿನ ಖಾಸಗಿ ಆಸ್ಪತ್ರೆಯ ನರ್ಸ್ ಶ್ಯಾಮಲಾ ಹಾಗೂ ಗೋವಿಂದ ರಾಜು ಈ ಜಾಲದ ಕಿಂಗ್‌ಪಿನ್‌ಗಳು. ಭ್ರೂಣ ಲಿಂಗ ಪತ್ತೆಗೆ 30 ಸಾವಿರ ಹಾಗೂ ಹೆಣ್ಣು ಭ್ರೂಣ ಹತ್ಯೆಗೆ 30 ಸಾವಿರ, ಒಟ್ಟು 60 ಸಾವಿರ ರೂಪಾಯಿ ಪ್ಯಾಕೇಜ್ ನೀಡಿದ್ದರು. ಆದರೆ, ಭ್ರೂಣ ಲಿಂಗ ಪತ್ತೆ ಹಾಗೂ ಹತ್ಯೆಗೆ 3 ತಿಂಗಳು 10 ದಿನವಾಗಿರಬೇಕು ಎಂಬ ಷರತ್ತು ವಿಧಿಸಿದ್ದರು. ಈ ಮಾರ್ಗದಲ್ಲಿ ಇಬ್ಬರೂ ಲಕ್ಷಾಂತರ ರೂಪಾಯಿ ಹಣ ಸಂಪಾದಿಸುತ್ತಿದ್ದರು. ಆರೋಗ್ಯಾಧಿಕಾರಿಗಳು ಐಷರಾಮಿ ಬಂಗಲೆ ಮೇಲೆ ದಾಳಿ ಮಾಡಿದ ಸಂದರ್ಭದಲ್ಲಿ ಕಬ್ಬಿಣದ ಲಾಕರ್‌ನಲ್ಲಿ ಸುಮಾರು ಮೂರೂವರೆ ಲಕ್ಷ ರೂಪಾಯಿ ನಗದು ಪತ್ತೆಯಾಗಿದ್ದು, ಅದನ್ನು ವಶಪಡಿಸಿಕೊಳ್ಳಲಾಗಿದೆ. ಈ ಸಂಬಂಧ ವರುಣ ಪೊಲೀಸರು ಪ್ರಕರಣ ದಾಖಲಿಸಿದ್ದು, ತನಿಖೆ ನಡೆಸುತ್ತಿದ್ದಾರೆ.

ಡಿಕಾಯ್ ಆಪರೇಷನ್ ಸಕ್ಸಸ್

ಭ್ರೂಣ ಲಿಂಗ ಪತ್ತೆ ಹಾಗೂ ಹೆಣ್ಣು ಭ್ರೂಣ ಹತ್ಯೆ ಪ್ರಕರಣ ಬಯಲಿಗೆ ತರಲು ಆರೋಗ್ಯ ಇಲಾಖೆಯ ಕೇಂದ್ರ ಕಚೇರಿ ಹಾಗೂ ಮೈಸೂರು ಜಿಲ್ಲಾ ಕಚೇರಿ ಜಂಟಿಯಾಗಿ ನಡೆಸಿತು. ಇದೊಂದು ಡಿಕಾಯ್ ಆಪರೇಷನ್ ಆಗಿತ್ತು. ಬನ್ನೂರಿನ ಎಸ್.ಕೆ. ಆಸ್ಪತ್ರೆ ನರ್ಸ್ ಮುಂದಾಳತ್ವದಲ್ಲಿ ಸ್ಕ್ಯಾನಿಂಗ್ ಮಾಡಲಾಗುತ್ತಿತ್ತು. ರೇಡ್ ನಡೆದ ಜಾಗದಲ್ಲಿ ಎಷ್ಟು ದಿನಗಳಿಂದ ಭ್ರೂಣ ಲಿಂಗ ಪತ್ತೆ ಮಾಡಲಾಗುತ್ತಿತ್ತು, ಇಲ್ಲಿ ತನಕ ಎಷ್ಟು ಭ್ರೂಣ ಹತ್ಯೆ ಮಾಡಲಾಗಿದೆ ಎಂಬ ಬಗ್ಗೆ ತನಿಖೆ ನಡೆಯುತ್ತಿದೆ. ಕೆಪಿಎಂಇ ಕಾಯ್ದೆ ಉಲ್ಲಂಘನೆ ಮಾಡಿರುವ ಬಗ್ಗೆ ಈಗಾಗಲೇ 48 ಪ್ರಕರಣ ದಾಖಲಿಸಲಾಗಿದೆ. ಭ್ರೂಣ ಲಿಂಗ ಪತ್ತೆ ಹಾಗೂ ಹೆಣ್ಣು ಭ್ರೂಣ ಹತ್ಯೆ, ಇದರಲ್ಲಿ ಭಾಗಿಯಾದವರಿಗೆ ಕಠಿಣ ಶಿಕ್ಷೆ ವಿಧಿಸಲಾಗುತ್ತದೆ ಎಂದು ಎಚ್ಚರಿಸಿ, ಜಾಗೃತಿ ಕೂಡ ಮೂಡಿಸಲಾಗುತ್ತಿದೆ. ಆದರೂ ಇಲ್ಲಿ ಇಂತಹ ಪ್ರಕರಣ ನಡೆದಿರುವುದು ಆತಂಕಕಾರಿ ಘಟನೆ.

– ಡಾ. ಕುಮಾರಸ್ವಾಮಿ, ಜಿಲ್ಲಾ ಆರೋಗ್ಯಾಧಿಕಾರಿ, ಮೈಸೂರು.

ಶಾಸ್ತ್ರೋಕ್ತವಾಗಿ ಗರ್ಭಗುಡಿ ಬಾಗಿಲು ಬಂದ್

ಮಹೋತ್ಸವಕ್ಕೆ ತೆರೆ ಬಿದ್ದಿದೆ. ಅ.9ರಿಂದ ಆರಂಭವಾಗಿ ಅ.23ರವರೆಗೆ ದರ್ಶನ ಭಾಗ್ಯ ಕರುಣಿಸಿದ ಹಾಸನಾಂಬೆ ಮತ್ತೆ ಒಂದು ವರ್ಷ ಕಾಲ ಮರೆಗೆ ಸರಿದಳು. ಗುರುವಾರ ಮಧ್ಯಾಹ್ನ 1.06ಕ್ಕೆ ಶಾಸ್ತ್ರೋಕ್ತವಾಗಿ ಗರ್ಭಗುಡಿ ಬಾಗಿಲನ್ನು ಮುಚ್ಚಲಾಯಿತು. ಈ ವೇಳೆ ಪಂಜಿನ ಪೂಜೆ, ಮಂಗಳವಾದ್ಯ ಮೊಳಗಿತು. ಕಳೆದ ಬಾರಿ ಜಾತ್ರೆ ವೇಳೆ ಅವ್ಯವಸ್ಥೆ ಆಗಿತ್ತು. ಇದನ್ನು ಸರಿಪಡಿಸಿ ಶಾಂತಿಯುತವಾಗಿ ದರ್ಶನ ಆಗಲು ಜಿಲ್ಲಾಡಳಿತ, ಸಚಿವರ ಜಾಣ್ಮೆ ಕಾರ್ಯವೈಖರಿಯಿಂದ ಎಲ್ಲವನ್ನೂ ಕಾಲಕಾಲಕ್ಕೆ ಸರಿಪಡಿಸಿ ಯಶಸ್ವಿಯಾಗಿ ಜಾತ್ರೆ ನಡೆಸಿದ್ದಾರೆ. ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಕಂದಾಯ ಇಲಾಖೆ, ಪೌರಕಾರ್ಮಿಕರು, ವಿದ್ಯುತ್ ಇಲಾಖೆ, ಅಗ್ನಿಶಾಮಕದಳ, ಡಿಎಫ್‌ಓ ಸೇರಿ ಎಲ್ಲಾ ಇಲಾಖೆಯವರು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ. ಹಗಲು ರಾತ್ರಿ ದುಡಿದಿದ್ದಾರೆ.

ಮುಂದಿನ ವರ್ಷದ ಹಾಸನಾಂಬೆ ಉತ್ಸವಕ್ಕೆ ದಿನಾಂಕ ನಿಗದಿ: ಈ ಬಾರಿಯ ಹಾಸನಾಂಬೆ ದರ್ಶನೋತ್ಸವ ಇತಿಹಾಸ ನಿರ್ಮಿಸಿ, ದಾಖಲೆ ಬರೆಯುವ ಜೊತೆಗೆ ಅತ್ಯಂತ ಯಶಸ್ವಿ ಮತ್ತು ಅಚ್ಚುಕಟ್ಟಾಗಿ ನಡೆಯಿತು. ಮುಂದಿನ ವರ್ಷದ ಹಾಸನಾಂಬೆ ಉತ್ಸವ ದಿನಾಂಕವನ್ನು ಪಂಚಾಂಗದ ಪ್ರಕಾರ ನಿಗದಿ ಮಾಡಲಾಗಿದೆ. 2026ರ ಅ.29ರಿಂದ ನ.11ರವರೆಗೆ ನಡೆಯಲಿದೆ.

ಪತ್ನಿ ಸಮೇತ ಮಂತ್ರಾಲಯದಲ್ಲಿ ಡಿಕೆಶಿ ತುಲಾಭಾರ ಸೇವೆ



ಮಂತ್ರಾಲಯ, ಅ.23– ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬುಧವಾರ ದೀಪಾವಳಿಯ ಬಲಿಪಾಡ್ಯಮಿಯಂದು ಮಂತ್ರಾಲಯ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ದರ್ಶನವನ್ನು ಪತ್ನಿ ಜೊತೆಗೂಡಿ ಪಡೆದಿದ್ದಾರೆ. ರಾಯರ ಅನುಗ್ರಹಕ್ಕಾಗಿ ತುಲಾಭಾರ ನೆರವೇರಿಸಿದರು. ಗುರು ರಾಘವೇಂದ್ರ ಸ್ವಾಮಿಗಳ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿ ಬಳಿಕ ಪಂಚಮುಖಿ ದೇಗುಲದಲ್ಲಿ ಪೂಜೆ ಸಲ್ಲಿಸಿ, ಮೂಲ ರಾಮ ದೇವರ ದರ್ಶನವನ್ನೂ ಮಾಡಿದ್ದಾರೆ.

ಗುರುರಾಯರ ದರ್ಶನ ಬಳಿಕ ಡಿಕೆ ಶಿವಕುಮಾರ್ ಅವರು ಶ್ರೀ ಸುಬುಧೇಂದ್ರ ತೀರ್ಥ ಶ್ರೀಗಳನ್ನು ಭೇಟಿಯಾಗಿ ಶ್ರೀಮಠದ ಬಗ್ಗೆ ಮಾಹಿತಿ ಪಡೆದರು. ಈ ವೇಳೆ ಶ್ರೀಮಠದಿಂದ ಡಿಕೆಶಿ ದಂಪತಿಗೆ ಶಾಲು ಹೊದಿಸಿ ಸನ್ಮಾನಿಸಲಾಯಿತು.

ಶ್ರೀಗಳ ಭೇಟಿ ಬಳಿಕ ಮಾತನಾಡಿದ ಅವರು, ಶ್ರೀಮಠದಿಂದ ಮಂತ್ರಾಲಯಕ್ಕೆ ಬರಲು ಆಹ್ವಾನವಿತ್ತು. ರಾಯರ ಅನುಗ್ರಹಕ್ಕಾಗಿ ಬಹಳ ದಿನಗಳಿಂದ ಬರಬೇಕೆಂದು ಇದ್ದೆ. ಗುರುಗಳ ಅನುಗ್ರಹ ಎಲ್ಲಕ್ಕೂ ಅವಶ್ಯಕ. ಇಂದು ವಿಶೇಷ ದಿನವಾಗಿದ್ದು, ಶ್ರೀಮಠದ ಭೂಮಿ ಪೂಜೆ ಕಾರ್ಯಕ್ರಮದಲ್ಲೂ ಭಾಗಿಯಾದೆ. ಕಳೆದ ಬಾರಿ ಸಂಕಲ್ಪ ಮಾಡಿದ್ದಕ್ಕೆ ನಮ್ಮ ಸರ್ಕಾರ ಬಂದಿದೆ. ಎಲ್ಲರಿಗೆ, ನಾಡಿಗೆ ಒಳ್ಳೆಯದಾಗಲಿ ಅಂತ ಬೇಡಿಕೊಂಡಿದ್ದೇನೆ ಎಂದರು.

ಪಂಚಮುಖಿ ದರ್ಶನದ ಬಳಿಕ ಮಂತ್ರಾಲಯಕ್ಕೆ ಮರಳಿದ ಡಿಕೆಶಿ ತುಲಾಭಾರ ನೆರವೇರಿಸಿದರು. ರಾಯರ ಅನುಗ್ರಹಕ್ಕಾಗಿ ಬೆಲ್ಲದ ಮೂಟೆಯನ್ನಿಟ್ಟು ಮಠದ ಅರ್ಚಕರಿಂದ ಡಿ.ಕೆ.ಶಿವಕುಮಾರ್ ಅವರಿಗೆ ತುಲಾಭಾರ ಮಾಡಲಾಯಿತು. ಬಳಿಕ ಮಂತ್ರಾಲಯದಲ್ಲಿ ವರ್ಷಕ್ಕೆ 2 ಬಾರಿ ಮಾತ್ರ ನಡೆಯುವ ಧಾರ್ಮಿಕ ಕಾರ್ಯಕ್ರಮ ಮೂಲ ರಾಮದೇವರ ಪೂಜೆಯಲ್ಲಿ ಭಾಗಿಯಾಗಿದ್ದರು. ಬಲಿಪಾಡ್ಯಮಿ ಹಿನ್ನೆಲೆ ಮೂಲರಾಮ ದೇವರಿಗೆ ವಿಶೇಷ ಅಭಿಷೇಕ ನೆರವೇರಿಸಿದರು.

ಮೈಸೂರಲ್ಲಿ ವೀರ ವನಿತೆ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಆಚರಣೆ

ಮೊದಲ ಸ್ವಾತಂತ್ರ್ಯ ಹೋರಾಟಗಾರ್ತಿಯ ಸಾಹಸ ಗುಣಗಾನ



ಕಲಾಮಂದಿರದ ಕಿರುರಂಗಮಂದಿರದಲ್ಲಿ ಗುರುವಾರ 'ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ' ಆಚರಿಸಲಾಯಿತು.

ಮೈಸೂರು,ಅ.23(ಎಂಕೆ)– ಮೈಸೂರಿನ ಕರ್ನಾಟಕ ಕಲಾಮಂದಿರದ ಕಿರುರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ನಗರ ಪಾಲಿಕೆ ವತಿಯಿಂದ 'ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ' ಆಚರಿಸಲಾಯಿತು.

ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ಕಿತ್ತೂರು ರಾಣಿ ಚೆನ್ನಮ್ಮ ಅವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ಮಾತನಾಡಿ, ಮೊಟ್ಟ ಮೊದಲ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿ ಕಿತ್ತೂರು ರಾಣಿ ಚೆನ್ನಮ್ಮ ಅವರು, ಮಹಿಳಾ ಶಕ್ತಿಯ ಪ್ರತಿಬಿಂಬವಾಗಿ ಸದಾ ಪ್ರಸ್ತುತರಾಗಿದ್ದಾರೆ ಎಂದು ಸ್ಮರಿಸಿದರು.

ಕಿತ್ತೂರು ರಾಣಿ ಚೆನ್ನಮ್ಮ ಎಂದಾಕ್ಷಣವೇ ನೆನಪಾಗುವುದು ಅವರು, ಸ್ವಾತಂತ್ರ್ಯ ಹೋರಾಟಗಾರ್ತಿ ಎಂದು. 18ನೇ ಶತಮಾನದಲ್ಲಿ ತನ್ನ ಸಾಮ್ರಾಜ್ಯದ ಉಳಿವಿಗಾಗಿ ಬ್ರಿಟಿಷರ ವಿರುದ್ಧ ಹೋರಾಡಿ ಜಯಶೀಲರಾದ ವೀರ ಮಹಿಳೆ. ನಿಮಗೇಕೆ ಕೊಡಬೇಕು ಕಪ್ಪಾ ಎಂದು ವೀರಾವೇಶ ತೋರಿದ ಕಿತ್ತೂರು ರಾಣಿ ಚೆನ್ನಮ್ಮ, ಆದರ್ಶ ವನಿತೆಯಾಗಿ ಇವತ್ತಿಗೂ ಪ್ರಸ್ತುತವಾಗಿದ್ದಾರೆ ಎಂದರು.

ಪ್ರಜಾಪ್ರಭುತ್ವ, ದೇಶದ ಏಕತೆ, ನಾಡು–ನುಡಿಗೆ ಧಕ್ಕೆಯಾದಾಗ ಗಟ್ಟಿಯಾಗಿ ಎದುರಿಸುವ, ಕುಗ್ಗದೆ ಬದುಕುವ ಮತ್ತು ಬೆಳೆಯುವ ಶಕ್ತಿಯನ್ನು ಹೆಣ್ಣು ಮಕ್ಕಳು ರೂಢಿಸಿಕೊಳ್ಳಬೇಕು. ಅನ್ಯಾಯವನ್ನು ಎದುರಿಸಿ, ಗೆದ್ದು ನಿಲ್ಲಬೇಕು ಎಂಬುದಕ್ಕೆ ಕಿತ್ತೂರು ರಾಣಿ ಚೆನ್ನಮ್ಮ ಪ್ರೇರಣೆ ಎಂದರು.

ಉಪನ್ಯಾಸ ನೀಡಿದ ಸಾಹಿತಿ ಡಾ.ಸುಜಾತ ಅಕ್ಕಿ, ಭಾರತಕ್ಕೆ ವ್ಯಾಪಾರಕ್ಕೋಸ್ಕರ ಬಂದ ಬ್ರಿಟಿಷರು, ಇಲ್ಲಿನ ನೈಸರ್ಗಿಕ ಸಂಪನ್ಮೂಲವನ್ನು ಲೂಟಿ ಮಾಡಿದರಲ್ಲದೆ ಶ್ರೀಮಂತಿಕೆ ಸವಿಯುತ್ತ ಇಲ್ಲೇ ನೆಲೆಸಿದರು. ವ್ಯಾಪಾರ ಮಾಡುತ್ತಲೇ ಎಲ್ಲಾ ಸಂಸ್ಥಾನಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡ ಬ್ರಿಟಿಷರ ವಿರುದ್ಧ ಹೋರಾಡಿದ ಧೈರ್ಯಶಾಲಿ ಕಿತ್ತೂರು ರಾಣಿ ಚೆನ್ನಮ್ಮ ಎಂದು ನೆನೆದರು.

1778ರಲ್ಲಿ ಜನಿಸಿದ ಕಿತ್ತೂರು ರಾಣಿ ಚೆನ್ನಮ್ಮರದ್ದು, ಕ್ರಿಯಾಶೀಲ ವ್ಯಕ್ತಿತ್ವ ಆಕೆಯ ವ್ಯಕ್ತಿತ್ವವನ್ನು ಕಂಡು ಅವರ ತಂದೆ ಬಿಲ್ಲು ವಿದ್ಯೆ, ಕತ್ತಿ ವರಸೆ, ಕುದುರೆ ಸವಾರಿ ಸೇರಿದಂತೆ ಒಬ್ಬ ರಾಜನಿಗೆ ಬಾಲ್ಯದಿಂದಲೇ ಯಾವೆಲ್ಲಾ ಯುದ್ಧ ತರಬೇತಿ ಕೊಡಬೇಕೋ, ಆ ಎಲ್ಲಾ ತರಬೇತಿಯನ್ನು ಮಗಳಿಗೆ ನೀಡಿದರು. 14 ವರ್ಷಕ್ಕೆ ಗಂಡನ ಮನೆಗೆ ಬಂದ ರಾಣಿ ಚೆನ್ನಮ್ಮನಿಗೆ ಹಲವಾರು ರೀತಿಯ ಸವಾಲುಗಳು ಎದುರಾದವು. ಅವುಗಳನ್ನು ಮೆಟ್ಟಿನಿಂತು ಆಡಳಿತ ನಡೆಸಿದರು. ಕೊನೆಯವರೆಗೂ ಕಿತ್ತೂರಿಗಾಗಿ ಹೋರಾಟ ನಡೆಸಿದರು ಎಂದರು.

ಉತ್ತಮ ಪ್ರಜೆಗಳನ್ನಾಗಿ ರೂಪಿಸಿ: ಪೋಷಕರು ಕಿತ್ತೂರು ರಾಣಿ ಚೆನ್ನಮ್ಮ ಅವರ ತಂದೆಯಂತೆಯೇ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ನೀಡಿ ಸಮಾಜದಲ್ಲಿ ಉತ್ತಮ ಪ್ರಜೆಗಳನ್ನಾಗಿ ರೂಪುಗೊಳಿಸುವಂತೆ ಕಿವಿಮಾತು ಹೇಳಿದರು. ಬಳಿಕ ಜಯಂತಿ ಅಂಗವಾಗಿ ನಡೆಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾಗಿದ್ದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಹೋರಾಟಗಾರ ಮೂಗೂರು ನಂಜುಂಡ ಸ್ವಾಮಿ, ಮಹಿಳಾ ಸಂಘಟಕರಾದ ಯಮುನಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಮತ್ತಿತರರು ಉಪಸ್ಥಿತರಿದ್ದರು.

ಡಾ.ಯತೀಂದ್ರ ಹೇಳಿಕೆಗೆ ಆಕ್ಷೇಪ

ಡಿ.ಕೆ.ಶಿವಕುಮಾರ್ ಉಳಿದ ಅವಧಿಗೆ ಮುಖ್ಯಮಂತ್ರಿ ಆಗಬೇಕು

ಕೆಪಿಸಿಸಿ ವಕ್ತಾರ ಶ್ರೀನಿವಾಸ್ ಪ್ರತಿಪಾದನೆ



ಟಿ.ಶ್ರೀನಿವಾಸ್

ಮೈಸೂರು, ಅ.23(ಎಂಕೆ)– ರಾಜ್ಯ ಸರ್ಕಾರದ ಉಳಿದ ಅವಧಿಗೆ (ಎರಡೂವರೆ ವರ್ಷ) ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಗಳಾಗಬೇಕು ಎಂಬುದು ನಮ್ಮ ಅಭಿಲಾಷೆಯಾಗಿದೆ ಎಂದು ಕೆಪಿಸಿಸಿ ವಕ್ತಾರ ಟಿ.ಶ್ರೀನಿವಾಸ್ ಹೇಳಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜಕೀಯ ಸಂಧ್ಯಾಕಾಲದಲ್ಲಿದ್ದು, ಅವರ ನಂತರ ಈ ಜವಾಬ್ದಾರಿ ತೆಗೆದುಕೊಳ್ಳಲು ಸತೀಶ್ ಜಾರಕಿಹೋಳಿ ಅವರು ಸಮರ್ಥರು ಎಂಬ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿದ ಅವರು, ಸಿಎಂ ಯಾರಾಗಬೇಕು ಎಂಬುದನ್ನು ಪಕ್ಷದ ಹೈಕಮಾಂಡ್ ನಿರ್ಧರಿಸಲಿದೆ. ಇದರ ನಡುವೆ ಅವರು ಸಮರ್ಥರು, ಇವರು ಸಮರ್ಥರು ಎಂಬ ಹೇಳಿಕೆಗಳಿಂದ ಪಕ್ಷಕ್ಕೆ ಡ್ಯಾಮೇಜ್ ಆಗುವುದಲ್ಲದೆ ವಿರೋಧ ಪಕ್ಷಗಳಿಗೆ ಆಹಾರವಾಗಬೇಕಾಗುತ್ತದೆ ಎಂದರು.

ವಿಧಾನ ಪರಿಷತ್ ಸದಸ್ಯರಾದ ಡಾ.ಯತೀಂದ್ರ ಸಿದ್ದರಾಮಯ್ಯ ಅವರು, ಸತೀಶ್ ಜಾರಕಿಹೋಳಿ ಅವರ ಪರವಾಗಿ ಮಾತನಾಡಿರುವುದರಲ್ಲಿ ತಪ್ಪಿಲ್ಲ. ಆದರೆ, ಕೆಪಿಸಿಸಿ ಅಧ್ಯಕ್ಷರಾದವರು ಮುಖ್ಯಮಂತ್ರಿಗಳಾಗಬೇಕು ಎಂಬುದು ಪಕ್ಷದಲ್ಲಿನ ಬಹುತೇಕರ ಬಯಕೆ. ಅಲ್ಲದೆ ಮುಖ್ಯಮಂತ್ರಿಗಳ ಆಯ್ಕೆ ವಿಚಾರ ಹೈಕಮಾಂಡ್ ನಿರ್ಧಾರವಾಗಿರುವುದರಿಂದ ಇಂತಹ ಹೇಳಿಕೆಗಳು ವಿರೋಧ ಪಕ್ಷಗಳಿಗೆ ಲಾಭವಾಗಬಹುದು ಎಂದರು ಎಚ್ಚರಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದ ಚುಕ್ಕಾಣಿ ಹಿಡಿಯಲು ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಪರಿಶ್ರಮ ಸಾಕ್ಷಿಯಿದೆ. ಹಾಗಾಗಿ ಅವರೂ ಕೂಡ ಮುಖ್ಯಮಂತ್ರಿಗಳಾಗಬೇಕು. ಸಾಧ್ಯವಾದರೆ ಈ ಅವಧಿಯಲ್ಲೇ ಆಗಬೇಕು ಎಂಬುದು ನನ್ನ ಅಭಿಲಾಷೆಯಾಗಿದೆ. ಇದೆಲ್ಲದರ ನಡುವೆ ಹೈಕಮಾಂಡ್ ನಿರ್ಧಾರಕ್ಕೂ ಸ್ವಾಗತವಿದೆ ಎಂದು ಹೇಳಿದರು.

ಸರ್ಕಾರಿ ಆದರ್ಶ ಪಿಯು ಕಾಲೇಜುಗಳ

ಅತಿಥಿ ಉಪನ್ಯಾಸಕರ ವೇತನ ಬಿಡುಗಡೆಗೆ ಕ್ರಮ ವಹಿಸಿ

ಮುಖ್ಯಮಂತ್ರಿಗೆ ಎಂಎಲ್‌ಸಿ ವಿವೇಕಾನಂದ ಪತ್ರ



ಮೈಸೂರು,ಅ.23(ಪಿಎಂ)– ರಾಜ್ಯಾದ್ಯಂತ ಪ್ರಸಕ್ತ ಸಾಲಿನಿಂದ ಆರಂಭವಾಗಿರುವ ಸರ್ಕಾರಿ ಆದರ್ಶ ಪದವಿಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರ ವೇತನ ಬಿಡುಗಡೆಗೆ ಕ್ರಮ ವಹಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ ಪತ್ರ ಮುಖೇನ ಮನವಿ ಮಾಡಿದ್ದಾರೆ.

ಸದರಿ ಕಾಲೇಜುಗಳ ಸರಿಸುಮಾರು 800 ಅತಿಥಿ ಉಪನ್ಯಾಸಕರ ವೇತನವನ್ನು ಕಾಲೇಜು ಪ್ರಾರಂಭವಾದಾಗಿನಿಂದ ಈವರೆಗೂ ನೀಡದ ಪರಿಣಾಮ ಈ ಉಪನ್ಯಾಸಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಾಲೇಜು ಆರಂಭಿಸಿದ ಕಳೆದ ಐದು ತಿಂಗಳಿಂದ ವೇತನ ನೀಡದಿರುವುದು ಅತ್ಯಂತ ಬೇಸರದ ಸಂಗತಿ. ಈ ವಿಚಾರ ಈಗಾಗಲೇ ಹಲವು ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದು, ತಾವು ಗಮನಹರಿಸಿ ಸಂಬಂಧಿಸಿದ ಅಧಿಕಾರಿ ವರ್ಗಕ್ಕೆ ಸೂಕ್ತ ಸೂಚನೆ ನೀಡಿ ವೇತನ ಬಿಡುಗಡೆಗೆ ಕ್ರಮ ವಹಿಸುವಂತೆ ಅವರು ಕೋರಿದ್ದಾರೆ.

ಅ.26ರಂದು ಸರ್ವ ಸದಸ್ಯರ ಸಭೆ

ಮೈಸೂರು,ಅ.23(ಜಿಎ)–ಮೈಸೂರು ಜಿಲ್ಲಾ ವಿಶ್ವಕರ್ಮ ನೌಕರರ ಮತ್ತು ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಮೊದಲನೇ ವಾರ್ಷಿಕೋತ್ಸವ ಹಾಗೂ ಸರ್ವ ಸದಸ್ಯರ ಸಭೆಯನ್ನು ಅ.26ರಂದು ಬೆಳಗ್ಗೆ 10 ಗಂಟೆಗೆ ಇನ್ ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ಆರ್.ಸೋಮಶೇಖರ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ಕೆ.ಪಿ.ಶ್ರೀಕಾಂತ ಆಚಾರ್, ಖಜಾಂಚಿ ಕೆಆರ್. ರಘುನಾಥಾಚಾರ್ ಉಪಸ್ಥಿತರಿದ್ದರು.

ಮತಗಳ್ಳತನ ಪ್ರಕರಣ: ಎಸ್‌ಐಟಿ ತನಿಖೆಯಲ್ಲಿ ಸ್ಫೋಟಕ ಮಾಹಿತಿ ಬಹಿರಂಗ

ಹಗರಣದಲ್ಲಿ ಭಾಗಿಯಾಗಿದ್ದ 6 ಮಂದಿ ಶಂಕಿತರ ಪತ್ತೆ



ಬೆಂಗಳೂರು: 2023ರ ವಿಧಾನಸಭಾ ಚುನಾವಣೆಯಲ್ಲಿ ಆಳಂದ ಕ್ಷೇತ್ರದಲ್ಲಿ ನಡೆದಿದೆ ಎನ್ನಲಾದ ಮತಗಳ್ಳತನ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು (ಎಸ್‌ಐಟಿ), ಮತಗಳನ್ನು ಅಳಿಸಲು ಪ್ರಯತ್ನಗಳು ನಡೆದಿರುವುದನ್ನು ಪತ್ತೆಹಚ್ಚಿದೆ ಮತ್ತು ಹಗರಣದಲ್ಲಿ ಭಾಗಿಯಾಗಿರುವ 6 ಶಂಕಿತರನ್ನು ಪತ್ತೆಹಚ್ಚಿದೆ.

ಯಶಸ್ವಿಯಾಗಿ ಅಳಿಸಲಾದ ಪ್ರತಿ ಮತಕ್ಕೂ ಶಂಕಿತರಿಗೆ 80 ರೂ.ಗಳನ್ನು ನೀಡಲಾಗಿದೆ ಎಂದು ಅಪರಾಧ ತನಿಖಾ ಇಲಾಖೆ ಉನ್ನತ ಮೂಲಗಳು ತಿಳಿಸಿವೆ. 6,994 ಮತಗಳನ್ನು ಅಳಿಸಲು ವಿನಂತಿಗಳು ಬಂದಿದ್ದವು. ಅವುಗಳಲ್ಲಿ ಕೆಲವನ್ನು ಹೊರತುಪಡಿಸಿ, ಬಹುತೇಕ ವಿನಂತಿಗಳು ನಕಲಿಯಾಗಿದ್ದವು. ಆಳಂದ ಕ್ಷೇತ್ರವು ಕಲಬುರಗಿ ಜಿಲ್ಲೆಯಲ್ಲಿದ್ದು ಹಿರಿಯ ಕಾಂಗ್ರೆಸ್ ಶಾಸಕ ಬಿಆರ್ ಪಾಟೀಲ್ ವಿಧಾನಸಭಾ ಕ್ಷೇತ್ರವಾಗಿದೆ. ಬಿಆರ್ ಪಾಟೀಲ್ ಮತ್ತು ಸಚಿವ ಮತ್ತು ಚಿತ್ತಾಪುರ ಶಾಸಕ ಪ್ರಿಯಾಂಕ್ ಖರ್ಗೆ ಅವರು ಮತ ಅಳಿಸುವಿಕೆ ಪ್ರಯತ್ನಗಳ ಬಗ್ಗೆ ಕರ್ನಾಟಕ ಮುಖ್ಯ ಚುನಾವಣಾ ಅಧಿಕಾರಿಗಳ ಗಮನಕ್ಕೆ ತಂದಿದ್ದರು.

ಪಾಟೀಲ್ ಅವರ ಪ್ರಕಾರ ದಲಿತರು ಮತ್ತು ಅಲ್ಪಸಂಖ್ಯಾತರನ್ನು ಒಳಗೊಂಡ 6,994 ಕಾಂಗ್ರೆಸ್ ಮತಗಳನ್ನು ಅಳಿಸಲು ಅರ್ಜಿಗಳನ್ನು ಸಲ್ಲಿಸಲಾಗಿತ್ತು. ಸಿಇಒ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶಿಸಿದ ನಂತರ ಮತ ಅಳಿಸುವಿಕೆಯನ್ನು ನಿಲ್ಲಿಸಲಾಯಿತು. ಈ ಮತಗಳನ್ನು ಅಳಿಸಿದ್ದರೆ ನಾನು ಖಂಡಿತವಾಗಿಯೂ ಚುನಾವಣೆಯಲ್ಲಿ ಸೋಲುತ್ತಿದ್ದೆ ಎಂದಿದ್ದಾರೆ.

ಅವರು 2023ರ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಹತ್ತಿರದ ಪ್ರತಿಸ್ಪರ್ಧಿ ಸುಭಾಷ್ ಗುತ್ತೇದಾರ್ (ಬಿಜೆಪಿ) ವಿರುದ್ಧ ಸುಮಾರು 10,000 ಮತಗಳ ಅಂತರದಿಂದ ಗೆದ್ದಿದ್ದರು. ಇತ್ತೀಚೆಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನವದೆಹಲಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ 'ವೋಟ್ ಚೋರಿ' ಹೇಗೆ ನಡೆಯುತ್ತಿದೆ ಎಂಬುದನ್ನು ವಿವರಿಸಿದರು ಮತ್ತು ಆಳಂದ ಕ್ಷೇತ್ರದ ಉದಾಹರಣೆ ನೀಡಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿದ ಕರ್ನಾಟಕ ಸರ್ಕಾರ, ಸಿಐಡಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಬಿಕೆ ಸಿಂಗ್ ಇದರ ನೇತೃತ್ವದಲ್ಲಿ ಮತ ಕಳ್ಳತನದ ತನಿಖೆಗಾಗಿ ಎಸ್‌ಐಟಿ ರಚಿಸಿತು.

ಆಳಂದದಲ್ಲಿ ಮತಗಳನ್ನು ಅಳಿಸಲು ಪ್ರಯತ್ನಗಳು ನಡೆದಿವೆ. ನಾವು ಸುಮಾರು 30 ಜನರನ್ನು ಪ್ರಶ್ನಿಸಿದ್ದೇವೆ ಮತ್ತು ಅವರಲ್ಲಿ ಐದರಿಂದ 6 ಮಂದಿ ಶಂಕಿತರಾಗಿದ್ದಾರೆ. ಅವರನ್ನು ಬಂಧಿಸಬಹುದು. ಬೇರೆಡೆ ಇದೇ ರೀತಿಯ ಪ್ರಯತ್ನಗಳು ನಡೆದಿರುವ ಸಾಧ್ಯತೆಯನ್ನು ತಳ್ಳಿಹಾಕದಿದ್ದರೂ, ದೂರು ಆ ಕ್ಷೇತ್ರಕ್ಕೆ ಸಂಬಂಧಿಸಿರುವುದರಿಂದ ನಾವು ಆಳಂದದ ಮೇಲೆ ಮಾತ್ರ ಗಮನಹರಿಸುತ್ತಿದ್ದೇವೆ ಎಂದು ಸಿಐಡಿಯ ಉನ್ನತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೈಸೂರು ರೈಲ್ವೆ ನಿಲ್ದಾಣದಲ್ಲಿ ಮಗು ಅಪಹರಣಕ್ಕೆ ಯತ್ನಿಸಿದ ಮಹಿಳೆ ಬಂಧನ

ಆರ್‌ಪಿಎಫ್ ಸಿಬ್ಬಂದಿಯಿಂದ 6 ತಿಂಗಳ ಹಸುಗೂಸು ರಕ್ಷಣೆ



ಮೈಸೂರು, ಅ.23(ಆರ್‌ಕೆ)– ತಾಯಿ ಜೊತೆ ಮೈಸೂರಿನ ರೈಲ್ವೆ ನಿಲ್ದಾಣದ ಪೋರ್ಟಿಕೋದಲ್ಲಿ ಮಲಗಿದ್ದ ಆರು ತಿಂಗಳ ಕಂದಮ್ಮನನ್ನು ಅಪಹರಿಸಲೆತ್ನಿಸಿದ ಮಹಿಳೆಯನ್ನು ರೈಲ್ವೆ ರಕ್ಷಣಾ ದಳದ (ಆರ್‌ಪಿಎಫ್) ಸಿಬ್ಬಂದಿ ಬಂಧಿಸಿ, ನಿನ್ನೆ (ಅಕ್ಟೋಬರ್ 22) ಜೈಲಿಗಟ್ಟಿದ್ದಾರೆ.

ಹಾಸನದ ಪೆನ್ಷನ್ ಮೊಹಲ್ಲಾ ನಿವಾಸಿ ಲೇಟ್ ಸುರೇಶ್ ಅವರ ಪತ್ನಿ ನಂದಿನಿ (45) ಮಗು ಅಪಹರಣಕ್ಕೆ ಯತ್ನಿಸಿ ಸಿಕ್ಕಿಬಿದ್ದಿರುವ ಆರೋಪಿ. ರಾಮನಗರದ ಐಜೂರು ಗ್ರಾಮದ ನಿವಾಸಿ ಅಯಾಜ್‌ಖಾನ್ ಅವರ ಪತ್ನಿ ಜಾಸ್ಮಿನ್ ತಾಜ್, ತನ್ನ ಆರು ತಿಂಗಳ ಗಂಡು ಮಗುವಿನೊಂದಿಗೆ ಮೈಸೂರಿಗೆ ಬಂದಿದ್ದು, ಮಂಗಳವಾರ ರಾತ್ರಿ ವಾಪಸ್ ತೆರಳಲು ರೈಲ್ವೆ ನಿಲ್ದಾಣಕ್ಕೆ ಬಂದಿದ್ದರು. ಆದರೆ, ಆ ವೇಳೆ ಯಾವುದೇ ರೈಲುಗಳು ಸಿಗದ ಕಾರಣ ಅಲ್ಲಿಯೇ ಪೋರ್ಟಿಕೋದಲ್ಲಿ ಮಲಗಿದ್ದ ವೇಳೆ ಬುಧವಾರ ಮುಂಜಾನೆ ಸುಮಾರು 5.30 ಗಂಟೆಯಲ್ಲಿ ಆರೋಪಿ ನಂದಿನಿ ಮಗುವನ್ನು ಅಪಹರಿಸಿದ್ದಳು.

ಸ್ವಲ್ಪ ಹೊತ್ತಿಗೆ ನಿದ್ರೆಯಿಂದ ಎಚ್ಚರಗೊಂಡ ಜಾಸ್ಮಿನ್ ತಾಜ್, ಪಕ್ಕದಲ್ಲಿದ್ದ ಮಗು ನಾಪತ್ತೆಯಾಗಿರುವುದು ಅರಿವಾಗುತ್ತಿದ್ದಂತೆ ಗಾಬರಿಯಿಂದ ರೈಲ್ವೆ ನಿಲ್ದಾಣದಲ್ಲಿ ಹುಡುಕಾಡುತ್ತಿದ್ದರು. ಆ ವೇಳೆ ಕರ್ತವ್ಯದಲ್ಲಿದ್ದ ಆರ್‌ಪಿಎಫ್ ಸಿಬ್ಬಂದಿ ನಾಗರಾಜು ಅವರಿಗೆ ವಿಷಯ ತಿಳಿದು ತಕ್ಷಣ ಅವರು ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕಾಗಮಿಸಿದ ಇನ್‌ಸ್ಪೆಕ್ಟರ್ ಹಾಗೂ ಇತರ ಸಿಬ್ಬಂದಿ ತ್ವರಿತ ಕಾರ್ಯೋನ್ಮುಖರಾಗಿ ಸಿಸಿಟಿವಿ ದೃಶ್ಯಾವಳಿಗಳನ್ನು ಗಮನಿಸಿದಾಗ ಸುಮಾರು 50 ವರ್ಷದ ಮಹಿಳೆಯೊಬ್ಬರು ಪುಟ್ಟ ಮಗುವೊಂದನ್ನು ಎತ್ತಿಕೊಂಡು ಆರನೇ ಪ್ಲಾಟ್‌ಫಾರಂನಲ್ಲಿ ನಿಂತಿದ್ದ ರೈಲು ಏರಿರುವುದು ಕಂಡುಬಂದಿತು.

ತಕ್ಷಣ ಶೋಧ ಕಾರ್ಯ ನಡೆಸಿದ ಅಧಿಕಾರಿಗಳಿಗೆ ಆರೋಪಿ ನಂದಿನಿ ಮಗುವಿನೊಂದಿಗೆ ಪತ್ತೆಯಾದಳು. ಆಕೆಯಿಂದ ಮಗುವನ್ನು ರಕ್ಷಿಸಿ ತಾಯಿಗೆ ಒಪ್ಪಿಸಿದ ಆರ್‌ಪಿಎಫ್ ಅಧಿಕಾರಿಗಳು, ಆರೋಪಿಯನ್ನು ಬಂಧಿಸಿ ಪ್ರಕರಣವನ್ನು ಮೈಸೂರು ರೈಲ್ವೆ ಠಾಣೆಗೆ ಒಪ್ಪಿಸಿದ್ದಾರೆ. ರೈಲ್ವೆ ಪೊಲೀಸರು ಆರೋಪಿಯನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದು, ಆಕೆಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಹಾಸನಾಂಬೆ ದರ್ಶನ ದಾಖಲೆಗೆ ಶಕ್ತಿ ಯೋಜನೆ ಮಹಿಮೆ

- ಹಾಸನಾಂಬೆ ಸನ್ನಿಧಿಗೆ 26 ಲಕ್ಷ ಭಕ್ತರ ದಂಡು
- 22 ಕೋಟಿ ರೂ. ಆದಾಯ ಸಂಗ್ರಹ
- ಸಾರ್ವಜನಿಕ ದರ್ಶನ ಪಡೆದ ಭಕ್ತರ ಸಂಖ್ಯೆಯಲ್ಲಿ ಶೇ.49ರಷ್ಟು ಹೆಚ್ಚಳ



ದಿನೇಶ್ ಗೂಳಿಗೌಡ

ಮಂಡ್ಯ,ಅ.23–ಇತಿಹಾಸಿಕ ಶಕ್ತಿ ದೇವತೆ ಹಾಸನಾಂಬೆ ಸನ್ನಿಧಿಯಲ್ಲಿ ಈ ವರ್ಷ ಸಾರ್ವಜನಿಕರ ದರ್ಶನದ ಸಂಖ್ಯೆ ಹೊಸ ದಾಖಲೆ ಬರೆದಿದೆ. ಕಳೆದ 13 ದಿನಗಳಲ್ಲಿ ಬರೋಬ್ಬರಿ 26 ಲಕ್ಷಕ್ಕೂ ಹೆಚ್ಚು ಭಕ್ತಾದಿಗಳು ಶಕ್ತಿ ದೇವತೆಯ ದರ್ಶನ ಪಡೆದಿದ್ದಾರೆ. ಈ ಭಾರಿ ಜನಸಾಗರಕ್ಕೆ ಮುಖ್ಯ ಕಾರಣ, ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ 'ಶಕ್ತಿ' ಯೋಜನೆ ಎಂದು ವಿಧಾನಪರಿಷತ್ ಶಾಸಕರು, ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷರು ಆಗಿರುವ ದಿನೇಶ್ ಗೂಳಿಗೌಡ ಬಣ್ಣಿಸಿದ್ದಾರೆ.

ರಾಜ್ಯ ಸರ್ಕಾರವು ಘೋಷಿಸಿದ ಪಂಚ ಗ್ಯಾರಂಟಿಗಳ ಪೈಕಿ ಒಂದಾದ ಶಕ್ತಿ ಯೋಜನೆ ಜಾರಿಯಾದ ನಂತರ, ರಾಜ್ಯದ ಮಹಿಳೆಯರು ಉಚಿತವಾಗಿ ಸರ್ಕಾರಿ ಬಸ್‌ಗಳಲ್ಲಿ ಪ್ರಯಾಣಿಸುತ್ತಿದ್ದು, ಇದು ಎಲ್ಲ ಧಾರ್ಮಿಕ ಕೇಂದ್ರಗಳ ಆದಾಯ ಮತ್ತು ಭಕ್ತರ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಿದೆ. ಇದಕ್ಕೆ ಈಗ ಹಾಸನಾಂಬೆಯ ದರ್ಶನವೇ ಸಾಕ್ಷಿ. ಪ್ರತಿ ವರ್ಷ ಹಾಸನಾಂಬೆ ದರ್ಶನಕ್ಕೆ 4ರಿಂದ 5 ಲಕ್ಷ ಜನರಷ್ಟೇ ಸೇರುತ್ತಿದ್ದರು. ಆದರೆ ರಾಜ್ಯ ಸರ್ಕಾರ ಉಚಿತವಾಗಿ ಬಸ್ ಪ್ರಯಾಣವನ್ನು ಮಹಿಳೆಯರಿಗೆ ನೀಡಿದ್ದರಿಂದ ಈಗ ಅವರು ಸಹ ಪ್ರವಾಸಿ ತಾಣಗಳ ಸಹಿತ ದೇಗುಲಗಳಿಗೆ ಭೇಟಿ ನೀಡುತ್ತಿದ್ದಾರೆ. ಹೀಗಾಗಿ ಶಕ್ತಿಯು ಉಚಿತ ಯೋಜನೆಯಾಗಿರದೆ ಪ್ರವಾಸೋದ್ಯಮಕ್ಕೂ ಉತ್ತೇಜನ ನೀಡುತ್ತಾ, ಆರ್ಥಿಕವಾಗಿ ಸಬಲತೆಯನ್ನು ಸಾಧಿಸುವತ್ತ ಹೆಜ್ಜೆ ಇಟ್ಟಿದೆ ಎಂದರು.



ಶಕ್ತಿ ಯೋಜನೆಯಿಂದ ರಾಜ್ಯದ ಜನತೆಗೆ ವಿಶೇಷವಾಗಿ ಮಹಿಳೆಯರಿಗೆ ಬಹಳ ದೊಡ್ಡ ಅನುಕೂಲವಾಗಿದೆ. ಸರ್ಕಾರ ಜಾರಿಗೆ ತಂದ ಶಕ್ತಿ ಯೋಜನೆಯ ಮಹಿಮೆ ಇಂದು ಹಾಸನಾಂಬೆ ಸನ್ನಿಧಿಯಲ್ಲಿ ಕಂಡಿದೆ. ಇದಕ್ಕಾಗಿ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳಿಗೆ ನನ್ನ ಅಭಿನಂದನೆಗಳು ಎಂದು ಹರ್ಷ ವ್ಯಕ್ತಪಡಿಸಿದರು.

ದಾಖಲೆ ಸಂಖ್ಯೆ ಹಾಗೂ ಆದಾಯ: ದೇವಾಲಯದ ಆಡಳಿತ ಮಂಡಳಿ ನೀಡಿದ ಮಾಹಿತಿ ಪ್ರಕಾರ ಕಳೆದ 13 ದಿನಗಳಲ್ಲಿ ಒಟ್ಟು 26,06,691 ಭಕ್ತರು ಹಾಸನಾಂಬೆ ದೇವಿಯ ದರ್ಶನ ಪಡೆದಿದ್ದಾರೆ. ಇದು ಹಿಂದಿನ ವರ್ಷಕ್ಕೆ (2024ರಲ್ಲಿ 17,47,240 ಭಕ್ತರು) ಹೋಲಿಸಿದರೆ ಶೇ. 49ಕ್ಕಿಂತ ಹೆಚ್ಚು ಭಕ್ತರ ಹೆಚ್ಚಳವಾಗಿದೆ. ದಾಖಲೆಯ ಭಕ್ತರ ಆಗಮನದಿಂದಾಗಿ ದೇವಾಲಯಕ್ಕೆ ಈ ವರ್ಷ 22 ಕೋಟಿಗೂ ಹೆಚ್ಚು ಆದಾಯ ಸಂಗ್ರಹವಾಗಿದೆ ಎಂದು ತಿಳಿಸಿದರು.

ಸುರಕ್ಷತೆ ಮತ್ತು ಗಣ್ಯರ ಭೇಟಿ: ದರ್ಶನದ ಕೊನೆಯ ದಿನವಾದ ಬುಧವಾರ ಲಕ್ಷಾಂತರ ಭಕ್ತರು ದರ್ಶನ ಪಡೆದರು. ಇಷ್ಟು ದೊಡ್ಡ ಸಂಖ್ಯೆಯ ಭಕ್ತರನ್ನು ನಮ್ಮ ಸರ್ಕಾರ ನಿಭಾಯಿಸಿದೆ. ಕಾನೂನು ಸುವ್ಯವಸ್ಥೆ ಮತ್ತು ವ್ಯವಸ್ಥೆಗಳನ್ನು ಪರಿಶೀಲಿಸಿರುವುದು ನಮ್ಮ ಕಾಂಗ್ರೆಸ್ ಸರ್ಕಾರದ ಬದ್ಧತೆ ತೋರಿಸುತ್ತದೆ ಎಂದು ದಿನೇಶ್ ಗೂಳಿಗೌಡ ಹೇಳಿದರು.

ಸೌದಿ ಅರೇಬಿಯಾದ ಗ್ರ್ಯಾಂಡ್ ಮುಫ್ತಿಯಾಗಿ ಶೇಖ್ ಸಾಲಿಹ್ ಬಿನ್ ಫೌಝಾನ್ ನೇಮಕ




ರಿಯಾದ್: ಸೌದಿ ಅರೇಬಿಯಾ ರಾಜಮನೆತನವು ಶೇಖ್ ಸಾಲಿಹ್ ಬಿನ್ ಫೌಝಾನ್ ಬಿನ್ ಅಬ್ದುಲ್ಲಾ ಅಲ್–ಫೌಝಾನ್ ಅವರನ್ನು ದೇಶದ ನೂತನ ಗ್ರ್ಯಾಂಡ್ ಮುಫ್ತಿಯಾಗಿ ಹಾಗೂ ಹಿರಿಯ ವಿದ್ವಾಂಸರ ಮಂಡಳಿ ಅಧ್ಯಕ್ಷರನ್ನಾಗಿ ಅಧಿಕೃತವಾಗಿ ನೇಮಿಸಿದೆ.

ರಾಜಮನೆತನದ ಆದೇಶದಂತೆ, ಈ ನೇಮಕಾತಿ ಸೌದಿ ಯುವರಾಜ ಮುಹಮ್ಮದ್ ಬಿನ್ ಸಲ್ಮಾನ್ ಅವರ ಶಿಫಾರಸಿನ ಆಧಾರದ ಮೇಲೆ ಜಾರಿಯಾಗಿದೆ ಎಂದು ಸೌದಿ ಪ್ರೆಸ್ ಏಜೆನ್ಸಿ ವರದಿ ಮಾಡಿದೆ. ಶೇಖ್ ಅಲ್–ಫೌಝಾನ್ ಅವರು ಧಾರ್ಮಿಕ ವ್ಯಾಖ್ಯಾನಗಳು, ಸಂಶೋಧನೆಗಳಿಗೆ ಸಂಬಂಧಿಸಿದ ಸ್ಕಾಲರ್‌ಲಿ ರಿಸರ್ಚ್ ಅಂಡ್ ಇಫ್ತಾ ಜನರಲ್ ಪ್ರೆಸಿಡೆನ್ಸಿಯ ಅಧ್ಯಕ್ಷರ ಹುದ್ದೆಯನ್ನೂ ವಹಿಸಿಕೊಳ್ಳಲಿದ್ದಾರೆ. ಸೆ.23ರಂದು ನಿಧನರಾದ ಗ್ರ್ಯಾಂಡ್ ಮುಫ್ತಿ ಶೇಖ್ ಅಬ್ದುಲ್ ಅಝೀಝ್ ಅಲ್ ಶೇಖ್ ಅವರ ನಿಧನದ ಬಳಿಕ ಈ ನೇಮಕಾತಿ ನಡೆದಿದೆ. ಧಾರ್ಮಿಕ ವಿದ್ಯಾಭ್ಯಾಸ ಮತ್ತು ಇಸ್ಲಾಮಿಕ್ ನ್ಯಾಯಶಾಸ್ತ್ರದ ಕ್ಷೇತ್ರದಲ್ಲಿ ವಿಶಾಲ ಅನುಭವ ಹೊಂದಿರುವ ಶೇಖ್ ಅಲ್–ಫೌಝಾನ್ ಅವರನ್ನು ಸೌದಿ ಅರೇಬಿಯಾದ ಪ್ರಭಾವಶಾಲಿ ಧಾರ್ಮಿಕ ವಿದ್ವಾಂಸರಲ್ಲಿ ಒಬ್ಬರಾಗಿ ಪರಿಗಣಿಸಲಾಗಿದೆ.

ದೇಶ - ವಿದೇಶ

ಸಿಗ್ಮಾ ಗ್ಯಾಂಗ್‌ನ ನಾಲ್ವರು ಮೋಸ್ಟ್ ವಾಂಟೆಡ್ ದರೋಡೆಕೋರರ ಹತ್ಯೆ



ನವದೆಹಲಿ: ದೆಹಲಿಯ ರೋಹಿಣಿಯಲ್ಲಿ ಬೆಳಗಿನ ಜಾವ ಪೊಲೀಸ್ ಎನ್ ಕೌಂಟರ್‌ನಲ್ಲಿ ಸಿಗ್ಮಾ ಗ್ಯಾಂಗ್‌ನ ನಾಲ್ವರು ಮೋಸ್ಟ್ ವಾಂಟೆಡ್ ಗ್ಯಾಂಗ್‌ಸ್ಟರ್‌ಗಳನ್ನು ಹತ್ಯೆ ಮಾಡಲಾಗಿದೆ.

ದೆಹಲಿ ಮತ್ತು ಬಿಹಾರ ಪೊಲೀಸರ ತಂಡಗಳು ಮತ್ತು ಗ್ಯಾಂಗ್‌ಸ್ಟರ್‌ಗಳ ನಡುವೆ ವಾಯುವ್ಯ ದೆಹಲಿಯಲ್ಲಿ ಬೆಳಗಿನ ಜಾವ 2.20 ಕ್ಕೆ ಗುಂಡಿನ ಚಕಮಕಿ ನಡೆಯಿತು. ಪೊಲೀಸರು ಗ್ಯಾಂಗ್ ಸದಸ್ಯರನ್ನು ತಡೆಯಲು ಪ್ರಯತ್ನಿಸಿದ ವೇಳೆ ಗ್ಯಾಂಗ್‌ಸ್ಟರ್‌ಗಳು ಪೊಲೀಸರ ಮೇಲೆ ಗುಂಡು ಹಾರಿಸಿದಾಗ ಅವರು ಕೂಡ ಪ್ರತೀಕಾರದ ದಾಳಿ ನಡೆಸಿದರು.

ನಾಲ್ವರು ಆರೋಪಿಗಳಿಗೂ ಗುಂಡೇಟಿನಿಂದಾಗಿ ಗಂಭೀರ ಗಾಯಗಳಾಗಿದ್ದು, ಅವರನ್ನು ರೋಹಿಣಿಯ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಆಸ್ಪತ್ರೆಗೆ ದಾಖಲಿಸಲಾಗಿತ್ತು ಅಲ್ಲಿ ಎಲ್ಲಾ ನಾಲ್ವರು ಸಾವನ್ನಪ್ಪಿರುವುದಾಗಿ ವೈದ್ಯರು ತಿಳಿಸಿದ್ದಾರೆ.

ಗ್ಯಾಂಗ್‌ಸ್ಟರ್ ರಂಜನ್ ಪಾಠಕ್ (25 ವರ್ಷ), ಬಿಮ್ಲೇಶ್ ಮಹ್ತೊ (25 ವರ್ಷ), ಮನೀಶ್ ಪಾಠಕ್ (33 ವರ್ಷ) ಮತ್ತು ಅಮನ್ ಠಾಕೂರ್ (21 ವರ್ಷ) ಎಂದು ಗುರುತಿಸಲಾಗಿದೆ.

ಡ್ರಗ್ಸ್‌ನ ಅಮಲಿನಲ್ಲಿ ಅಡ್ಡಾದಿಡ್ಡಿಯಾಗಿ ಟ್ರಕ್ ಓಡಿಸಿದ ಭಾರತೀಯ ವಲಸಿಗ, 3 ಸಾವು



ದಕ್ಷಿಣ ಕ್ಯಾಲಿಫೋರ್ನಿಯಾ: 21 ವರ್ಷದ ಭಾರತದ ಅಕ್ರಮ ವಲಸಿಗ ನೋರ್ವ ದಕ್ಷಿಣ ಕ್ಯಾಲಿಫೋರ್ನಿಯಾದಲ್ಲಿ ಅಡ್ಡಾದಿಡ್ಡಿಯಾಗಿ ಟ್ರಕ್ ಓಡಿಸಿ ಮೂವರ ಸಾವಿಗೆ ಕಾರಣವಾಗಿದ್ದಾರೆ. ಈತನನ್ನು ಜಶನ್ ಪ್ರೀತ್‌ಸಿಂಗ್ ಎಂದು ಗುರುತಿಸಲಾಗಿದೆ. ಸ್ಯಾನ್ ಬರ್ನಾರ್ಡಿನೋ ಕೌಂಟಿಯ ಫ್ರೀವೇಯಲ್ಲಿ ಟ್ರಾಫಿಕ್ ನಿಧಾನಗತಿಯಲ್ಲಿದ್ದರೂ ಮಾದಕ ದ್ರವ್ಯದ ನಶೆಯಲ್ಲಿ ಕಾರಿಗೆ ಗುದ್ದಿ, ನಂತರ ಟ್ರಕ್ ಸೇರಿದಂತೆ ಎದುರಿಗೆ ಬಂದ ವಾಹನಗಳಿಗೆ ಗುದ್ದಿದ್ದಾನೆ. ಈ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಸರಣಿ ಅಪಘಾತ ಹಿನ್ನೆಲೆಯಲ್ಲಿ ಅವರನ್ನು ಬಂಧಿಸಲಾಗಿದೆ ಎಂದು ಯುಎಸ್ ನ್ಯೂಸ್ ವರದಿಗಳು ಹೇಳಿವೆ. ಸಿಂಗ್ 2022ರಲ್ಲಿ ದಕ್ಷಿಣ ಯುಎಸ್ ಗಡಿಯನ್ನು ದಾಟಿದ್ದಾರೆಂದು ವರದಿಯಾಗಿದೆ. ಅವರು ಮಾರ್ಚ್ 2022ರಲ್ಲಿ ಕ್ಯಾಲಿಫೋರ್ನಿಯಾದ ಎಲ್ ಸೆಂಟ್ರೊ ಸೆಕ್ಟರ್‌ನಲ್ಲಿ ಗಡಿ ಗಸ್ತು ಏಜೆಂಟರಿಗೆ ಸಿಕ್ಕಿಬಿದ್ದಿದ್ದರು. ಆದರೆ ಬೈಡನ್ ಆಡಳಿತಾವಧಿಯಲ್ಲಿ ಅವರನ್ನು ಬಿಡುಗಡೆ ಮಾಡಲಾಗಿತ್ತು. ಅಪಘಾತದ ದೃಶ್ಯವು ಜಶನ್‌ಪ್ರೀತ್ ಸಿಂಗ್ ಅವರ ಟ್ರಕ್‌ನಲ್ಲಿದ್ದ ಡ್ಯಾಶ್‌ಕ್ಯಾಮ್‌ನಲ್ಲಿ ಸೆರೆಹಿಡಿಯಲ್ಪಟ್ಟಿದೆ.

ಲೆಫ್ಟಿನೆಂಟ್ ಕರ್ನಲ್ ಹುದ್ದೆ ಅಲಂಕರಿಸಿದ ನೀರಜ್ ಚೋಪ್ರಾ



ನವದೆಹಲಿ: ಜಾವೆಲಿನ್ ಥ್ರೋ ತಾರೆ, ಒಲಿಂಪಿಕ್ ಚಿನ್ನದ ಪದಕ ವಿಜೇತ ಕ್ರೀಡಾಪಟು ನೀರಜ್ ಚೋಪ್ರಾ ಭಾರತೀಯ ಸೇನೆಯ ಮೀಸಲು ಘಟಕ ಟೆರಿಟೋರಿಯಲ್ ಆರ್ಮಿ ಸೇರ್ಪಡೆಯಾಗಿದ್ದಾರೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ದೆಹಲಿ ಕಚೇರಿಯಲ್ಲಿ ಚೋಪ್ರಾ ಅವರಿಗೆ ಟೆರಿಟೋರಿಯಲ್ ಆರ್ಮಿಯ ಲೆಫ್ಟಿನೆಂಟ್ ಕರ್ನಲ್ ಗೌರವ ಹುದ್ದೆಯ ಲಾಂಛನ ತೊಡಿಸಿದರು. ಈ ವೇಳೆ ಭಾರತೀಯ ಸೇನೆ ಮುಖ್ಯಸ್ಥ ಉಪೇಂದ್ರ ದ್ವಿವೇದಿ ಇದ್ದರು.

ನೀರಜ್ ಚೋಪ್ರಾ ಭಾರತದ ಅತ್ಯುತ್ತಮ ಕ್ರೀಡಾಪಟು. ಅವರ ನಿರಂತರ ಪರಿಶ್ರಮ, ದೇಶಭಕ್ತಿಯು ಭಾರತೀಯ ಮನೋಭಾವದ ಸಂಕೇತ. ಭವಿಷ್ಯದಲ್ಲಿ ಅವರ ಎಲ್ಲಾ ಪ್ರಯತ್ನಗಳಲ್ಲಿ ಅವರಿಗೆ ಯಶಸ್ಸು ಸಿಗಲಿ ಎಂದು ರಾಜನಾಥ್ ಸಿಂಗ್ ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ. 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನೀರಜ್ ಚಿನ್ನದ ಪದಕ ಗೆದ್ದಿದ್ದರು. 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದರು. ಅವರಿಗೆ ಪರಮ ವಿಶಿಷ್ಟ ಸೇವಾ ಮೆಡಲ್, ಪದ್ಮ ಶ್ರೀ ಹಾಗೂ ವಿಶಿಷ್ಟ ಸೇವಾ ಮೆಡಲ್ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ರಷ್ಯಾ ಪರ ಯುದ್ಧ ಮಾಡಲು ಸಾಧ್ಯವಿಲ್ಲ; ರಷ್ಯಾ ಸೇನೆಯಲ್ಲಿದ್ದ ಹೈದರಾಬಾದ್ ಮೂಲದ ವ್ಯಕ್ತಿ ಸೆಲ್ಫಿ ವಿಡಿಯೋ ವೈರಲ್



ಮಾಸ್ಕೋ: ರಷ್ಯಾ ಉಕ್ರೇನ್ ಯುದ್ಧದಲ್ಲಿ ಭಾರತೀಯರು ಸಾಯುತ್ತಿದ್ದಾರೆ... ರಷ್ಯಾ ಪರ ಯುದ್ಧ ಮಾಡಲು ನಾನು ಸಿದ್ಧನಾಗಿಲ್ಲ ಎಂದು ಭಾರತ ಮೂಲದ ರಷ್ಯಾ ಪರ ಸೈನಿಕ ಮಾಡಿರುವ ಸೆಲ್ಫಿ ವಿಡಿಯೋ ವ್ಯಾಪಕ ವೈರಲ್ ಆಗುತ್ತಿದೆ.

ನಿರ್ಮಾಣ ಕ್ಷೇತ್ರದಲ್ಲಿ ಉದ್ಯೋಗ ಪಡೆಯುವ ಆಶಯದೊಂದಿಗೆ ಮೊಹಮ್ಮದ್ ಅಹ್ಮದ್ ಏಪ್ರಿಲ್‌ನಲ್ಲಿ ತೆಲಂಗಾಣದಿಂದ ರಷ್ಯಾಕ್ಕೆ ಪ್ರಯಾಣ ಬೆಳೆಸಿದ್ದರು. ಆದರೆ, ಬಂದ ಕೆಲವೇ ವಾರಗಳಲ್ಲಿ ಅವರು ರಷ್ಯಾ–ಉಕ್ರೇನ್ ಯುದ್ಧದ ಮಧ್ಯದಲ್ಲಿ ಸಿಕ್ಕಿಹಾಕಿಕೊಂಡರು, ಅವರ ಉದ್ಯೋಗ ಏಜೆಂಟ್‌ನಿಂದ ವಂಚನೆಗೊಳಗಾದ ನಂತರ ರಷ್ಯಾ ಸೇನೆಯಲ್ಲಿ ಹೋರಾಡಲು ಒತ್ತಾಯಿಸಲಾಯಿತು ಎಂದು ಆರೋಪಿಸಲಾಗಿದೆ. ಈಗ ಅವರ ಪತ್ನಿ, ಹೈದರಾಬಾದ್ ನಿವಾಸಿ, ಅಫ್ಸಾ ಬೇಗಂ, ರಷ್ಯಾದಲ್ಲಿ ಸಿಕ್ಕಿಬಿದ್ದ 37 ವರ್ಷದ ಅಹ್ಮದ್ ಅವರನ್ನು ರಕ್ಷಿಸಲು ಸಹಾಯ ಮಾಡುವಂತೆ ವಿದೇಶಾಂಗ ಸಚಿವಾಲಯಕ್ಕೆ ಮನವಿ ಮಾಡಿದ್ದಾರೆ.

ದೀಪಾವಳಿ ಜಾತ್ರೆ ಮುಗಿಸಿ ಮನೆಗೆ ಹೋಗುವಾಗ ರೈಲು ಡಿಕ್ಕಿ: ನಾಲ್ವರ ಸಾವು



ಬೇಗುಸರಾಯ್: ಹಳಿ ದಾಟುತ್ತಿದ್ದಾಗ ರೈಲು ಡಿಕ್ಕಿಯಾಗಿ ತಾಯಿ, ಮಗಳು ಸೇರಿ ನಾಲ್ವರು ಮೃತಪಟ್ಟಿರುವ ಧಾರುಣ ಘಟನೆ ಬಿಹಾರದ ಬೇಗುಸರಾಯ್ ಜಿಲ್ಲೆಯಲ್ಲಿ ಬುಧವಾರ ರಾತ್ರಿ ನಡೆದಿದೆ. ಬೇಗುಸರಾಯ್ ಜಿಲ್ಲೆಯ ಭರೌನಿ–ಕತಿಹಾರ್ ರೈಲು ನಿಲ್ದಾಣಗಳ ಮಧ್ಯೆ ಈ ದುರ್ಘಟನೆ ಸಂಭವಿಸಿದೆ ಎಂದು ಸಾಹೇಬ್‌ಪುರ ಕಮಲ ಪೊಲೀಸ್ ಠಾಣೆಯ ಅಧಿಕಾರಿ ತಿಳಿಸಿದ್ದಾರೆ. ಮೃತರನ್ನು ರಾಹುವಾ ಎಂಬ ಹಳ್ಳಿಯ ರೀಟಾ ದೇವಿ (40) ಮತ್ತು ಅವರ ಮಗಳು ರೋಶನಿ ಕುಮಾರಿ (14) ಹಾಗೂ ಅದೇ ಊರಿನವರಾದ ಆರೋಹಿ (7) ಹಾಗೂ ಧರ್ಮದೇವ್ ಮೆಹತೋ (36) ಎಂದು ಗುರುತಿಸಲಾಗಿದೆ. ಈ ನಾಲ್ವರೂ ದೀಪಾವಳಿ ಪ್ರಯುಕ್ತ ತಮ್ಮ ಗ್ರಾಮದ ಬಳಿ ಆಯೋಜಿಸಿದ್ದ ಜಾತ್ರೆ ಮುಗಿಸಿಕೊಂಡು ರೈಲು ಹಳಿ ದಾಟಿ ವಾಪಸ್ ಮನೆ ಕಡೆಗೆ ಹೋಗುತ್ತಿದ್ದರು. ರೈಲು ಬರುವುದನ್ನು ಸರಿಯಾಗಿ ಗಮನಿಸದೇ ಹೋಗಿದ್ದರಿಂದ ಘಟನೆ ಸಂಭವಿಸಿದೆ. ಮೃತದೇಹಗಳನ್ನು ಗುರುತಿಸಿ ಅವರ ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ಧಾರಾಕಾರ ಮಳೆ

ಒಂದೇ ರಾತ್ರಿಗೆ ಹಾರಂಗಿ ಜಲಾಶಯ ಭರ್ತಿ, ನದಿ ಪಾತ್ರಕ್ಕೆ ನೀರು ಬಿಡುಗಡೆ

ಮಡಿಕೇರಿ/ಕುಶಾಲನಗರ, ಅ.23– ಹಾರಂಗಿ ಜಲಾನಯನ ಪ್ರದೇಶಗಳಲ್ಲಿ ಧಾರಾಕಾರ ಮಳೆ ಸುರಿದ ಪರಿಣಾಮ, ಹಾರಂಗಿ ಜಲಾಶಯ ನಿರ್ಮಾಣವಾದ ಬಳಿಕ ಇದೇ ಮೊದಲ ಬಾರಿಗೆ ಅಕ್ಟೋಬರ್ ತಿಂಗಳಲ್ಲಿ ಜಲಾಶಯ ಭರ್ತಿಯಾಗಿದ್ದು, ನದಿ ಪಾತ್ರಕ್ಕೆ ಹೆಚ್ಚುವರಿ ನೀರು ಹರಿಸಲಾಗಿದೆ.

ಜಿಲ್ಲೆಯಲ್ಲಿ ಭಾರಿ ಮಳೆಯಾಗಿದೆ. ಜಿಲ್ಲೆಯಲ್ಲಿ ದಟ್ಟ ಮೋಡ ಕವಿದ ವಾತಾವರಣವಿದ್ದು, ಮಳೆ ಮುಂದುವರೆದ ಕಾರಣ ಒಂದೇ ರಾತ್ರಿಯಲ್ಲಿ ಜಲಾಶಯ ಭರ್ತಿಯಾಗಿದೆ.

ಹಾರಂಗಿ ಜಲಾಶಯದ ನದಿ ಪ್ರದೇಶಗಳಾದ ಮಡಿಕೇರಿ ನಗರ, ಗಾಳಿಬೀಡು, ವಣಚಲು, ಕಾಲೂರು, ಹಮ್ಮಿಯಾಲ, ಸೂರ್ಲಬ್ಬಿ, ಹಚ್ಚಿನಾಡು, ಮಕ್ಕಂದೂರು, ಮಾದಾಪುರ ವ್ಯಾಪ್ತಿಯಲ್ಲಿ ಧಾರಾಕಾರ ಮಳೆ ಸುರಿದಿದೆ. ಪರಿಣಾಮ ಕೂಟುಹೊಳೆ, ಹಟ್ಟಿಹೊಳೆ, ಕಕ್ಕೆಹೊಳೆ, ಮಾದಾಪುರ ಹೊಳೆಗಳಲ್ಲಿ ನೀರಿನ ಪ್ರಮಾಣ ಗಣನೀಯ ಏರಿಕೆ ಕಂಡಿದ್ದು, ಗುರುವಾರ ಬೆಳಗಿನ 6 ಗಂಟೆಯ ವೇಳೆಗೆ ಹಾರಂಗಿ ಜಲಾಶಯಕ್ಕೆ ಒಟ್ಟು 8220 ಕ್ಯುಸೆಕ್ಸ್ ಪ್ರಮಾಣದಲ್ಲಿ ನೀರಿನ ಒಳಹರಿವು ಕಂಡು ಬಂದಿದೆ.

ನದಿಗೆ 5 ಸಾವಿರ ಕ್ಯುಸೆಕ್: ಜಲಾಶಯದಲ್ಲಿ ಗರಿಷ್ಠ ಪ್ರಮಾಣದ ನೀರಿನ ಸಂಗ್ರಹವಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಸೈರನ್ ಮೊಳಗಿಸಿದ ನಂತರ 4 ಕ್ರೆಸ್ಟ್ ಗೇಟ್‌ಗಳ ಮೂಲಕ ನದಿ ಪಾತ್ರಕ್ಕೆ ಹೆಚ್ಚುವರಿಯಾಗಿ 5 ಸಾವಿರ ಕ್ಯುಸೆಕ್ಸ್ ನೀರನ್ನು ಹರಿಸಲಾಯಿತು. ಆ ಮೂಲಕ ಮಳೆಗಾಲದ ಅವಧಿ ಮುಕ್ತಾಯವಾದ ಬಳಿಕವೂ ಅದರಲ್ಲೂ ಅಕ್ಟೋಬರ್ ತಿಂಗಳಲ್ಲಿ ಹಾರಂಗಿ ಜಲಾಶಯದಿಂದ ನದಿಗೆ ನೀರು ಹರಿದು ಬಿಡುವ ಮೂಲಕ ಹಾರಂಗಿ ಜಲಾಶಯ ಹೊಸ ದಾಖಲೆಯನ್ನು ನಿರ್ಮಿಸಿದೆ. ಸಾಮಾನ್ಯವಾಗಿ ಅಕ್ಟೋಬರ್ ತಿಂಗಳಲ್ಲಿ ಕಾವೇರಿ ತೀರ್ಥೋದ್ಭವ ಜರುಗಿದ ಬಳಿಕ ಮಳೆ ಪ್ರಮಾಣ ಗಣನೀಯವಾಗಿ ಕಡಿಮೆಯಾಗುತ್ತದೆ. ಆದರೆ ಬುಧವಾರ ಸಂಜೆಯ ಮಳೆ ಮುಂಗಾರಿನಲ್ಲಿ ಸುರಿಯುವ ಮಳೆಯನ್ನೂ ಮೀರಿಸಿದೆ. 2859 ಅಡಿ ನೀರಿನ ಸಂಗ್ರಹ ಸಾಮರ್ಥ್ಯವಿರುವ ಜಲಾಶಯದಲ್ಲಿ ಈಗಾಗಲೇ 2858.37 ಅಡಿ ನೀರಿನ ಸಂಗ್ರಹವಿದೆ.

ಮಳೆಯಿಂದ ಜಿಲ್ಲೆಯ ಜನ ಹೈರಾಣ



ಭಾರೀ ಮಳೆಯಿಂದ ಭರ್ತಿಯಾಗಿರುವ ಹಾರಂಗಿ ಜಲಾಶಯದಿಂದ ಹೆಚ್ಚುವರಿ ನೀರನ್ನು ನದಿಗಳಿಗೆ ಹರಿಸಲಾಗುತ್ತಿದೆ.

ಮಳೆಯಿಂದ ಜನರು ಹೈರಾಣ: ಜಿಲ್ಲೆಯಲ್ಲಿ ಸುರಿಯುತ್ತಿರುವ ಅಕಾಲಿಕ ಮತ್ತು ಅತೀವ ಮಳೆಯಿಂದ ಜನರು ಹೈರಾಣಾಗಿದ್ದಾರೆ. ಮಳೆಯಿಂದ ಕಾಫಿ, ಕರಿಮೆಣಸು, ಭತ್ತ ಸೇರಿದಂತೆ ಇತರ ಕೃಷಿ ಫಸಲು ನಷ್ಟವಾಗುತ್ತಿದೆ. ಕುಶಾಲನಗರ ವ್ಯಾಪ್ತಿಯಲ್ಲಿ ಎಡೆಬಿಡದೆ ಸುರಿದ ಮಳೆಯಿಂದ ಚರಂಡಿಗಳು ಉಕ್ಕಿ ಹರಿದು ರಸ್ತೆಗಳು ಜಲಾವೃತಗೊಂಡು ಸಂಚಾರ ಅಸ್ತವ್ಯಸ್ತವಾಗಿತ್ತು. ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಸಿದ ಘಟನೆಯೂ ನಡೆದಿದೆ. ಮಳೆಯ ತೀವ್ರತೆಗೆ ಕುಶಾಲನಗರ ಸಾರಿಗೆ ಬಸ್ ನಿಲ್ದಾಣದ ಆವರಣ ಜಲಾವೃತವಾಗಿದ್ದರೆ ಹೆದ್ದಾರಿ ಬದಿಯ ಅಂಗಡಿ ಮನೆಗಳಿಗೆ ನೀರು ನುಗ್ಗಿದ ಬಗ್ಗೆಯೂ ವರದಿಯಾಗಿದೆ.

ಜಿಲ್ಲೆಯ ಮಳೆ ಮಾಹಿತಿ: ಕಳೆದ 24 ಗಂಟೆ ಅವಧಿಯಲ್ಲಿ ಮಡಿಕೇರಿ ನಗರಕ್ಕೆ ಒಟ್ಟು 2 ಇಂಚು ಹಾಗೂ ಸೋಮವಾರಪೇಟೆ ಪಟ್ಟಣ ವ್ಯಾಪ್ತಿಯಲ್ಲಿ 3.3 ಇಂಚಿಗೂ ಅಧಿಕ ಮಳೆಯಾಗಿದೆ. ನಾಪೋಕ್ಲು 35.6 ಮಿ.ಮೀ, ಸಂಪಾಜೆ 31.5, ಭಾಗಮಂಡಲ 25, ಅಮ್ಮತ್ತಿ 45.5, ಶನಿವಾರಸಂತೆ 65, ಶಾಂತಳ್ಳಿ 68, ಕೊಡ್ಲಿಪೇಟೆ 60, ಪೊನ್ನಂಪೇಟೆ 40, ಹುದಿಕೇರಿ 33 ಶ್ರೀಮಂಗಲ 29, ಬಾಳಲೆ 31.04 ಕುಶಾಲನಗರ 86.6, ಸುಂಟಿಕೊಪ್ಪ 76.2 ಮಿ.ಮೀ ಮಳೆಯಾಗಿದೆ.

ಕುಶಾಲನಗರದಲ್ಲಿ ಧಾರಾಕಾರ ಮಳೆ: ತಗ್ಗು ಪ್ರದೇಶಗಳಿಗೆ ನುಗ್ಗಿದ ನೀರು



ಮಳೆಯಿಂದ ಕುಶಾಲನಗರದಲ್ಲಿ ಗದ್ದೆಗಳು ಜಲಾವೃತಗೊಂಡಿರುವುದು.

ಕುಶಾಲನಗರ : ಕುಶಾಲನಗರ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬುಧವಾರ ಸಂಜೆ ಭಾರೀ ಮಳೆಯಾಗಿದೆ. ಸಂಜೆಯಿಂದ ರಾತ್ರಿವರೆಗೆ ಸುರಿದ ಮಳೆಯಿಂದ ಚರಂಡಿಗಳು ಉಕ್ಕಿ ಹರಿದು ರಸ್ತೆಗಳು ಜಲಾವೃತಗೊಂಡು ಸಂಚಾರ ಅಸ್ತವ್ಯಸ್ತಗೊಂಡಿತು.

ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಸಿದ ಘಟನೆ ನಡೆಯಿತು. ಮಳೆಯ ತೀವ್ರತೆಗೆ ಇಲ್ಲಿನ ಸಾರಿಗೆ ಬಸ್ ನಿಲ್ದಾಣದ ಆವರಣ ಜಲಾವೃತಗೊಂಡಿತ್ತು. ಹೆದ್ದಾರಿ ಬದಿ ಅಂಗಡಿ ಮನೆಗಳಿಗೆ ನೀರು ಆವರಿಸಿಕೊಂಡ ದೃಶ್ಯ ಕಂಡುಬಂತು. ಗಂಧಕೋಟಿಯ 3ನೇ ಹಂತದ ಜನವಸತಿ ಪ್ರದೇಶ ಸೇರಿದಂತೆ ಕಾರು ಚಾಲಕರು ಮಾಲೀಕರ ಬಡಾವಣೆಯ ಸಂಪರ್ಕ ರಸ್ತೆಗಳು ಜಲಾವೃತಗೊಂಡ ಹಿನ್ನೆಲೆಯಲ್ಲಿ ನಿವಾಸಿಗಳು ಹೊರಬರಲಾರದ ಪರಿಸ್ಥಿತಿ ನಿರ್ಮಾಣಗೊಂಡಿತ್ತು.

ಸಮರ್ಪಕ ಚರಂಡಿ ಕೊರತೆ, ಚರಂಡಿಗಳ ನಿರ್ವಹಣೆ ಇಲ್ಲದೆ ತ್ಯಾಜ್ಯ ಚರಂಡಿಯಲ್ಲಿ ಮಡುಗಟ್ಟಿ ನೀರು ಮುಂದೆ ಹರಿಯದ ಕಾರಣ ರಸ್ತೆಗಳ ಮೇಲೆ ನೀರು ಸ್ಥಗಿತಗೊಂಡು ಅವಾಂತರ ಸೃಷ್ಟಿಸಿತು. ಇದೇ ರೀತಿ ಗದ್ದೆಗಳಿಗೂ ನೀರು ನುಗ್ಗಿ ಫಸಲು ನಾಶವಾದ ಬಗ್ಗೆ ವರದಿಗಳು ಬಂದಿವೆ. ಕೂಡುಮಂಗಳೂರು ಗ್ರಾಪಂ ವ್ಯಾಪ್ತಿಯ ಚಿಕ್ಕತ್ತೂರಿನ ಆನೆಕೆರೆ ಎರಡನೇ ಬಾರಿಗೆ ಕೋಡಿ ಬಿದ್ದಿದೆ. ಒಟ್ಟಿನಲ್ಲಿ ಮಳೆಗಾಲ ಮುಗಿದು ಚಳಿಗಾಲ ಸಮೀಪಿಸುತ್ತಿದ್ದರೂ ಮಳೆ ಕಡಿಮೆಯಾಗದೆ ಜನತೆ ಪರಿತಪಿಸುವಂತಾಗಿದೆ.

ಮಳೆಗೆ ಬರೆ ಕುಸಿತ : ಸಮೀಪದ ಕೂಡುಮಂಗಳೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಕೂಡ್ಲೂರು ನವಗ್ರಾಮದಲ್ಲಿ ಅತಿಯಾದ ಮಳೆಗೆ ಬರೆ ಕುಸಿದಿದೆ.

ಕೆಲವು ದಿನಗಳಿಂದ ಸುರಿಯುತ್ತಿರುವ ಮಳೆಗೆ ನವಗ್ರಾಮದ ದೇವಮ್ಮ ಎಂಬುವರ ಮನೆಯ ಬಳಿ ಬರೆ ಕುಸಿದಿದ್ದು ಯಾವುದೇ ಅನಾಹುತ ಸಂಭವಿಸಿಲ್ಲ. ಸ್ಥಳಕ್ಕೆ ಕೂಡುಮಂಗಳೂರು ಗ್ರಾಪಂ ಸದಸ್ಯ ಕೆ.ಬಿ.ಶಂಶುದ್ದೀನ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ರಾಷ್ಟ್ರೀಯ ಮಜ್ದೂರ್ ಕಾಂಗ್ರೆಸ್ ಫೆಡರೇಷನ್‌ಗೆ ಆಯ್ಕೆ



ಸರ್ಕಾರದ ರಾಷ್ಟ್ರೀಯ ಮಜ್ದೂರ್ ಕಾಂಗ್ರೆಸ್ ಫೆಡರೇಷನ್ ರಾಜ್ಯ ಅಧ್ಯಕ್ಷರಾಗಿ ಆಯ್ಕೆಯಾದ ಮೂರ್ನಾಡುವಿನ ಗಣೇಶ್ ನಾಯ್ಡು ಅವರನ್ನು ಅಭಿನಂದಿಸಲಾಯಿತು.

ಚೋಕಿರ ಉತ್ತಯ್ಯ ನಿಧನ



ನಾಪೋಕ್ಲು: ಬೇತು ಗ್ರಾಮದ ನಿವಾಸಿ ಹಾಗೂ ನಿವೃತ್ತ ಸೈನಿಕ ಚೋಕಿರ ಉತ್ತಯ್ಯ(90) ಗುರುವಾರ ನಿಧನರಾದರು.

ಮೃತರ ಅಂತ್ಯಕ್ರಿಯೆ ಇಂದು ಬೇತು ಗ್ರಾಮದಲ್ಲಿರುವ ಚೋಕಿರ ಕುಟುಂಬದ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು. ಮೃತರು ಪುತ್ರ ಪುತ್ರಿ ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಆಗ್ರಹಿಸಿ ಓಡಿಪಿ ಪ್ರತಿಭಟನೆ

ಮಡಿಕೇರಿ,ಅ.23– ರಾಷ್ಟ್ರದ ಉದ್ದಗಲಕ್ಕೂ ನಿರಂತರವಾಗಿ ನಡೆಯುತ್ತಿರುವ ಹೆಣ್ಣುಮಕ್ಕಳು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಕಠಿಣ ಕಾನೂನು ಕ್ರಮ ಕೈಗೊಳ್ಳುವುದರೊಂದಿಗೆ ಅತ್ಯಾಚಾರಿಗಳಿಗೆ ಮರಣ ದಂಡನೆ ವಿಧಿಸುವಂತೆ ಆಗ್ರಹಿಸಿ ಮಹಿಳೋದಯ ಮಹಿಳಾ ಒಕ್ಕೂಟ(ಓಡಿಪಿ) ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿತು.

ಮಹಿಳೋದಯ ಮಹಿಳಾ ಒಕ್ಕೂಟದ ಅಧ್ಯಕ್ಷೆ ತಾರಾ, ವಲಯ ಸಂಯೋಜಕಿ ಜಾಯ್ಸ್ ಮೆನೇಜಸ್ ಅವರುಗಳ ನೇತೃತ್ವದಲ್ಲಿ ಗುರುವಾರ ಬೆಳಗ್ಗೆ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಸಮಾವೇಶಗೊಂಡ ಒಕ್ಕೂಟದ ಪದಾಧಿಕಾರಿಗಳು ಮತ್ತು ಸದಸ್ಯರು ಘೋಷಣೆಗಳ ಸಹಿತ ಪ್ರತಿಭಟನೆ ನಡೆಸಿದರು. ಈ ಸಂದರ್ಭ ಒಕ್ಕೂಟದ ವಲಯ ಸಂಯೋಜಕಿ ಜಾಯ್ಸ್ ಮೆನೇಜಸ್ ಮಾತನಾಡಿ, ಹೆಣ್ಣು ಮಕ್ಕಳು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವಾರು ಕಾನೂನುಗಳನ್ನು ರೂಪಿಸಿದ್ದರೂ, ಇವು ದೌರ್ಜನ್ಯವನ್ನು ಹತ್ತಿಕ್ಕುವಲ್ಲಿ ವಿಫಲವಾಗುತ್ತಿವೆ ಎನ್ನುವ ಭಾವನೆ ಮೂಡುತ್ತಿದೆ. ಈ ಹಿನ್ನೆಲೆಯಲ್ಲಿ ಕಠಿಣ ಕಾನೂನು ಕ್ರಮಗಳನ್ನು ರೂಪಿಸಬೇಕೆಂದು ಒತ್ತಾಯಿಸಿದರು.

ದುರ್ಬಲರ ಪಿಂಚಣಿ ಹೆಚ್ಚಿಸಿ: ಪ್ರಸ್ತುತ ರಾಜ್ಯ ಸರ್ಕಾರವು ವಿಧವಾ ಪಿಂಚಣಿ, ವೃದ್ಧಾಪ್ಯ ಪಿಂಚಣಿ ಮತ್ತು ವಿಶೇಷ ಚೇತನರಿಗೆ ಪಿಂಚಣಿಯಾಗಿ ಮಾಸಿಕ 800 ರೂ.ಗಳಿಂದ 1200 ರೂ.ಗಳನ್ನು ನೀಡುತ್ತಿದ್ದು, ಇದು ದುರ್ಬಲ ವರ್ಗಕ್ಕೆ ಆಶಾಕಿರಣವಾಗಿದೆ. ಹೀಗಿದ್ದೂ ಇತ್ತೀಚಿನ ದಿನಗಳಲ್ಲಿ ನಿತ್ಯೋಪಯೋಗಿ ವಸ್ತುಗಳ ಬೆಲೆ ಗಗನಕ್ಕೇರಿರುವುದರಿಂದ ಈ ಪಿಂಚಣಿಯ ಮೊತ್ತವನ್ನು 3 ಸಾವಿರ ರೂ.ಗಳಿಗೆ ಹೆಚ್ಚಿಸುವ ಮೂಲಕ ದುರ್ಬಲ ವರ್ಗದವರ ಬದುಕಿಗೆ ಚೈತನ್ಯವನ್ನು ನೀಡುವ ಕಾರ್ಯ ಮಾಡಬೇಕೆಂದು ಮನವಿ ಮಾಡಿದರು.

ಜಿಲ್ಲಾಡಳಿತಕ್ಕೆ ಮನವಿ: ಪ್ರತಿಭಟನೆಯ ಬಳಿಕ ಜಿಲ್ಲಾಡಳಿತಕ್ಕೆ ಮನವಿ ಪತ್ರವನ್ನು ಸಲ್ಲಿಸಲಾಯಿತು. ಮನವಿಯಲ್ಲಿ ಪ್ರಮುಖವಾಗಿ ಅತ್ಯಾಚಾರಿಗಳು ಮತ್ತು ಹತ್ಯಾ ಆರೋಪಿಗಳಿಗೆ ಮರಣ ದಂಡನೆ ವಿಧಿಸಬೇಕು. ಮಹಿಳೆಯರ ಮೇಲೆ ದೌರ್ಜನ್ಯ ಎಸಗುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ನ್ಯಾಯಾಲಯಗಳಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಪ್ರಕರಣಗಳ ತ್ವರಿತ ವಿಲೇವಾರಿಗೆ ಕ್ರಮ ಕೈಗೊಳ್ಳುವುದು, ಭ್ರೂಣ ಲಿಂಗ ಪತ್ತೆ ತಡೆಗೆ ಅಗತ್ಯ ಕ್ರಮ ಕೈಗೊಂಡು ಅಪರಾಧಿಗಳನ್ನು ಕಠಿಣ ಶಿಕ್ಷೆಗೆ ಒಳಪಡಿಸಬೇಕು. ಉದ್ಯೋಗ ನಡೆಸುವ ಸ್ಥಳಗಳಲ್ಲಿ ಮಹಿಳೆಯರಿಗೆ ಸುರಕ್ಷತೆಯ ವಾತಾವರಣವನ್ನು ನಿರ್ಮಿಸಬೇಕು. ಹೆಣ್ಣು ಮಕ್ಕಳಿಗೆ ಸಂಬಂಧಿಸಿದ ಎಲ್ಲಾ ವಸತಿ ನಿಲಯಗಳ ಬಳಿ ಸೂಕ್ತ ಭದ್ರತೆ ಒದಗಿಸಬೇಕು. ಅತ್ಯಾಚಾರಿಗಳಿಗೆ ವಿಧಿಸುವ ಶಿಕ್ಷೆಯನ್ನು ಮತ್ತಷ್ಟು ಕಠಿಣಗೊಳಿಸಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಪ್ರತಿಭಟನೆಯಲ್ಲಿ ಲೂಸಿ ಜೇಮ್ಸ್, ವಿಜಯ ನಾರಾಯಣ್, ಮಮತ, ರೀಟಾ, ಧನು ಕುಮಾರ್, ಅಕ್ಷಯ್, ಮೀನಾ ಕುಮಾರಿ ಇದ್ದರು.



ಡಿಸಿ ಕಚೇರಿ ಮುಂದೆ ಮಹಿಳೋದಯ ಮಹಿಳಾ ಒಕ್ಕೂಟದಿಂದ ಪ್ರತಿಭಟನೆ.

ಮಲೆ ಮಹದೇಶ್ವರ ಬೆಟ್ಟದಲ್ಲಿ ಅದ್ಧೂರಿ ದೀಪಾವಳಿ ರಥೋತ್ಸವ

ಲಕ್ಷಾಂತರ ಭಕ್ತರು ಭಾಗಿ, ಮೊಳಗಿದ ಉಘೇ... ಉಘೇ ಮಾದಪ್ಪ

ಚಾಮರಾಜನಗರ/ ಹನೂರು, ಅ.23– ಚಾಮರಾಜನಗರ ಜಿಲ್ಲೆಯ ಪ್ರಮುಖ ಯಾತ್ರಾ ಸ್ಥಳವಾದ ಹನೂರು ತಾಲೂಕಿನ ಶ್ರೀ ಮಲೆ ಮಹದೇಶ್ವರಸ್ವಾಮಿ ಬೆಟ್ಟದಲ್ಲಿ ದೀಪಾವಳಿ ರಥೋತ್ಸವ ಅದ್ಧೂರಿಯಾಗಿ ನೆರವೇರಿತು.

ಬುಧವಾರ ಬೆಳಗ್ಗೆ 9.05ರಿಂದ 9.55 ಗಂಟೆಯ ವರೆಗಿನ ಶುಭ ಲಗ್ನದಲ್ಲಿ ನಡೆದ ರಥೋತ್ಸವಕ್ಕೆ ಮೊದಲು ಮಲೆ ಮಹದೇಶ್ವರ ಬೆಟ್ಟದ ಬೇಡಗಂಪನ ಸಮುದಾಯದ ಅರ್ಚಕರಿಂದ ಪೂಜೆ ಸಲ್ಲಿಸಲಾಯಿತು. ಬಳಿಕ ಬೇಡಗಂಪಣ ಸಮುದಾಯದ ಹೆಣ್ಣು ಮಕ್ಕಳು ರಥಕ್ಕೆ ಬೆಲ್ಲದಾರತಿ ಮಾಡಿದರು.

ನಂತರ ರಥದಲ್ಲಿ ಮಹದೇಶ್ವರ ಸ್ವಾಮಿಯ ಉತ್ಸವ ಮೂರ್ತಿ ಪ್ರತಿಷ್ಠಾಪಿಸಿ ದೇವಾಲಯದ ಸುತ್ತ ಒಂದು ಬಾರಿ ತೇರು ಎಳೆಯಲಾಯಿತು. ದೇವಾಲಯದ ಆವರಣದಲ್ಲಿ ಸೇರಿದ್ದ ಲಕ್ಷಾಂತರ ಭಕ್ತರು 'ಉಘೇ ಮಾದಪ್ಪ' ಎಂಬ ಹರ್ಷೋದ್ಗಾರದೊಂದಿಗೆ ರಥವನ್ನು ಎಳೆದರು.

ರಥೋತ್ಸವವನ್ನು ಕಣ್ತುಂಬಿಕೊಂಡ ಸಾವಿರಾರು ಭಕ್ತರು ತೇರಿಗೆ ಹೂ, ಹಣ್ಣು, ಧಾನ್ಯ, ನಾಣ್ಯ ಎಸೆದು ಹರಕೆ ತೀರಿಸಿದರು. ಸಾಲೂರು ಮಠದ ಶ್ರೀಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಅವರ ನೇತೃತ್ವದಲ್ಲಿ ರಥೋತ್ಸವದ ಧಾರ್ಮಿಕ ವಿಧಿ– ವಿಧಾನಗಳು ನಡೆದವು. ಪ್ರಾಧಿಕಾರದ ಕಾರ್ಯದರ್ಶಿ ಎ.ಈ. ರಘು ಅವರ ನೇತೃತ್ವದಲ್ಲಿ ಸಕಲ ವ್ಯವಸ್ಥೆ ಕೈಗೊಳ್ಳಲಾಗಿತ್ತು. ಕಳೆದ ನಾಲ್ಕೈದು ದಿನಗಳಿಂದ ಕ್ಷೇತ್ರಕ್ಕೆ ರಾಜ್ಯ, ಹೊರ ರಾಜ್ಯದಿಂದ 4 ರಿಂದ 5ಲಕ್ಷ ಮಂದಿ ಭೇಟಿ ನೀಡಿದ್ದಾರೆ.

ಬುಧವಾರ ಬೆಟ್ಟದಲ್ಲಿ ಬೆಳಗ್ಗೆ ಸ್ವಲ್ಪಕಾಲ ಜಿಟಿ ಜಿಟಿ ಮಳೆ ಸುರಿಯಿತು, ಅದನ್ನು ಲೆಕ್ಕಿಸದೆ ದೂರದ ಊರು, ಹೊರ ಜಿಲ್ಲೆ, ಹೊರ ರಾಜ್ಯಗಳಿಂದ ಬಂದಿದ್ದ ಭಕ್ತರು ರಥೋತ್ಸವದಲ್ಲಿ ಉತ್ಸಾಹದಿಂದ ಪಾಲ್ಗೊಂಡರು.

ನಿರಂತರ ದಾಸೋಹ ವ್ಯವಸ್ಥೆ: ಜಾತ್ರೆಗೆ ಬರುವ ಲಕ್ಷಾಂತರ ಮಂದಿ ಭಕ್ತರಿಗೆ ಪ್ರಾಧಿಕಾರವು ನಿರಂತರ ದಾಸೋಹಕ್ಕೆ ಮುಂದಾಗಿದ್ದು ಬೆಳಗ್ಗೆ ತಿಂಡಿ, ಮಧ್ಯಾಹ್ನ, ರಾತ್ರಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಭಕ್ತರಿಗೆ ಅಲ್ಲಲ್ಲಿ ಕುಡಿಯುವ ನೀರು, ಶೌಚಗೃಹದ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ಭಕ್ತರಿಗೆ ಪ್ರಸಾದವನ್ನಾಗಿ ನೀಡುವ ಸಲುವಾಗಿ ಸುಮಾರು ನಾಲ್ಕರಿಂದ ಐದು ಲಕ್ಷ ಲಾಡು ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

ಕಂಗೊಳಿಸಿದ ಮಾದಪ್ಪನ ಸನ್ನಿಧಿ: ದೀಪಾವಳಿ ಜಾತ್ರೆ ಅಂಗವಾಗಿ ದೇವಾಲಯದ ರಾಜಗೋಪುರ, ಮುಖ್ಯದ್ವಾರ ಹಾಗೂ ಇತರೆ ದ್ವಾರಗಳನ್ನು ತಳಿರು ತೋರಣ, ವಿವಿಧ ಬಗೆಯ ಹೂಗಳಿಂದ ಅಲಂಕರಿಸಲಾಗಿತ್ತು. ಅಲ್ಲದೇ ದೇವಾಲಯ ಹಾಗೂ ಸಾಲೂರು ಮಠಕ್ಕೆ ತೆರಳುವ ಮಾರ್ಗವನ್ನು ಹಾಗೂ ಪ್ರಮುಖ ರಸ್ತೆಗಳಲ್ಲಿ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು.

ಪಾದಯಾತ್ರೆ ಸೇರಿದಂತೆ ಬೆಟ್ಟಕ್ಕೆ ಬಂದ ಲಕ್ಷಾಂತರ ಭಕ್ತರು ಮಾದಪ್ಪನಿಗೆ ಉಘೇ ಎಂದು ದೇವಾಲಯದ ಸೌಂದರ್ಯವನ್ನು ಕಣ್ತುಂಬಿಕೊಂಡರು.

ಪೊಲೀಸ್ ಬಂದೋಬಸ್ತ್: ಬೆಟ್ಟಕ್ಕೆ ಹೋಗಲು ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸುವ ಸಲುವಾಗಿ ತಾಳಬೆಟ್ಟದಲ್ಲಿ ಬಸ್ ನಿಲ್ದಾಣ ಮಾಡಲಾಗಿದೆ. ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳ ಸಂಚಾರಕ್ಕೆ ತಡೆಯೊಡ್ಡಲಾಗಿದೆ. ಜಾತ್ರಾ ಮಹೋತ್ಸವದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯಬಾರದು ಎನ್ನುವ ಮುನ್ನೆಚ್ಚರಿಕೆ ಕ್ರಮವಹಿಸಿ ಪೊಲೀಸ್ ಇಲಾಖೆಯಿಂದ ಕೆಎಸ್‌ಆರ್‌ಪಿ ತುಕಡಿ, ಜಿಲ್ಲೆಯ ವಿವಿಧೆಡೆಯಿಂದ ಪೊಲೀಸ್ ಅಧಿಕಾರಿಗಳು ಹಾಗೂ ಹೋಂ ಗಾರ್ಡ್ಸ್‌ಗಳನ್ನು ನಿಯೋಜಿಸಲಾಗಿತ್ತು.



ಅದ್ಧೂರಿಯಾಗಿ ನಡೆದ ದೀಪಾವಳಿ ರಥೋತ್ಸವದಲ್ಲಿ ಭಾಗವಹಿಸಿರುವ ಜನಸ್ತೋಮ.



ಕೊಟ್ಟಿಗೆ ಗೊಬ್ಬರದ ಉಂಡೆಗಳಿಂದ ಹೊಡೆದಾಡಿಕೊಳ್ಳುತ್ತಿರುವ ಗುಮಟಾಪುರ ಗ್ರಾಮಸ್ಥರು.

ಕೊಟ್ಟಿಗೆ ಗೊಬ್ಬರದ ಉಂಡೆಗಳಲ್ಲಿ ಗ್ರಾಮಸ್ಥರ ಹೊಡೆದಾಟ

ಗುಮಟಾಪುರದಲ್ಲಿ ಗೊರೆ ಹಬ್ಬದ ಸಂಭ್ರಮ, ಶೃಂಗಾರಗೊಂಡಿದ್ದ ಗ್ರಾಮ

ಚಾಮರಾಜನಗರ, ಅ.23– ಚಾಮರಾಜನಗರ ಜಿಲ್ಲೆಯ ಗಡಿ ಹಾಗೂ ತಮಿಳುನಾಡಿನ ತಾಳವಾಡಿ ತಾಲೂಕು ವ್ಯಾಪ್ತಿಯ ಕನ್ನಡಿಗರೇ ಬಹು ಸಂಖ್ಯೆಯಲ್ಲಿರುವ ಗುಮಟಾಪುರ ಗ್ರಾಮದಲ್ಲಿ ಗುರುವಾರ ಗೊರೆ ಹಬ್ಬವು ಸಡಗರ, ಸಂಭ್ರಮದೊಂದಿಗೆ ನೆರವೇರಿತು.

ಕೊಟ್ಟಿಗೆ ಗೊಬ್ಬರವನ್ನು ಕಲಸಿಕೊಂಡು ಅದನ್ನು ದೊಡ್ಡ ದೊಡ್ಡ ಗಾತ್ರದಲ್ಲಿ ಉಂಡೆ ಮಾಡಿ ಪರಸ್ಪರ ಹೊಡೆದಾಡಿಕೊಳ್ಳುವುದು ಹಾಗೂ ಮನ ಬಂದಂತೆ ನಿಂದಿಸುವುದು ಈ ಹಬ್ಬದ, ಆಚರಣೆಯ ವಿಶೇಷವಾಗಿದೆ.

ಪ್ರತಿ ವರ್ಷದಂತೆಯೇ ಈ ಬಾರಿಯೂ ಸಂಭ್ರಮದೊಂದಿಗೆ ಹಬ್ಬ ನಡೆಯಿತು. ಗ್ರಾಮದಲ್ಲಿ ದೀಪಾವಳಿ ಹಬ್ಬದ ಬಲಿಪಾಡ್ಯಮಿಯ ಮಾರನೆ ದಿನ ಮಕ್ಕಳು, ಯುವಕರೆಲ್ಲ ಸೇರಿ ಗೊರೆಹಬ್ಬದಲ್ಲಿ ಭಾಗಿಯಾಗುವುದು ಇದರ ವೈಶಿಷ್ಟ್ಯ. ಹೀಗಾಗಿ ಈ ಬಾರಿಯೂ ಬಲಿಪಾಡ್ಯಮಿಯ ಮಾರನೆ ದಿನವಾದ ಗುರುವಾರ ನಡೆದ ಗೊರೆ ಹಬ್ಬದ ಅಂಗವಾಗಿ ಸಗಣಿಯಿಂದ ಹೊಡೆದಾಡಿಕೊಂಡರು.

ಹಬ್ಬದ ಅಂಗವಾಗಿ ಇಡೀ ಗ್ರಾಮ ತಳಿರು, ತೋರಣಗಳಿಂದ ಶೃಂಗಾರಗೊಂಡಿತ್ತು. ಈ ಸಂದರ್ಭದಲ್ಲಿ ಗ್ರಾಮದ ತುಂಬ ಉತ್ಸಾಹ ನೆಲೆಸಿತ್ತು. ಸಾವಿರಾರು ಮಂದಿ ಈ ಆಚರಣೆಗೆ ಸಾಕ್ಷಿಯಾದರು.


ಹಬ್ಬದ ಆಚರಣೆ ಹೇಗೆ?: ಗ್ರಾಮದಲ್ಲಿರುವ ಗೋವುಗಳಿಂದ ಕಲೆ ಹಾಕಿದ ಸಗಣಿಯನ್ನು ತಂದು ದೇವಸ್ಥಾನದ ಬಳಿ ಸುರಿಯಲಾಗಿತ್ತು. ಮಕ್ಕಳು ಬೇರೆ ಮನೆಗಳಿಂದ ಬೇಡಿ ತಂದ ಎಣ್ಣೆಯಿಂದ ಪೂಜೆ ಸಲ್ಲಿಸಲಾಯಿತು. ಬಳಿಕ ಕಾರಪ್ಪ ದೇವರಿಗೆ ಪೂಜೆ ಸಲ್ಲಿಸುವುದು, ನಂತರ ಎರಡು ಕತ್ತೆಗಳಲ್ಲಿ ತಲಾ ಒಬ್ಬೊಬ್ಬರನ್ನು ಕೂರಿಸಿ ಗ್ರಾಮದ ಸುತ್ತ ಮೆರವಣಿಗೆ ಮಾಡುವುದು ವಾಡಿಕೆಯಾಗಿದ್ದು, ಅದರಂತೆ ಆಚರಣೆ ನಡೆಯಿತು.

ಕತ್ತೆ ಮೇಲೆ ಕೂರುವವರಿಗೆ ಕೊಂಡಿಕೆಕಾರ ಎಂದು ಹೆಸರಿಸಿ, ಆತನಿಗೆ ಹುಲ್ಲಿನಲ್ಲಿ ಮೀಸೆ, ಗಡ್ಡವನ್ನು ಕಟ್ಟಿ ಬೀರೇಶ್ವರನ ಗುಡಿವರೆಗೂ ಮೆರವಣಿಗೆಯಲ್ಲಿ ಕರೆ ತರಲಾಯಿತು.

ಈ ಸಂದರ್ಭದಲ್ಲಿ ವ್ಯಕ್ತಿಯೊಬ್ಬ ಅಶ್ಲೀಲ ಪದಗಳಿಂದ ಮನಸೋಇಚ್ಛೆ ನಿಂದಿಸಿದ. ಇದು ಸಹ ಇಲ್ಲಿನ ವಿಶೇಷ. ನಂತರ ಹುಲ್ಲಿನ ಮೀಸೆಯನ್ನು ಸಗಣಿ ರಾಶಿಯಲ್ಲಿ ನೆಟ್ಟು, ಬೀರೇಶ್ವರನಿಗೆ ಪೂಜೆ ಸಲ್ಲಿಸಿ ಸಗಣಿಯಾಟ ಶುರು ಮಾಡಲಾಯಿತು."ಈ ಆಚರಣೆ ಏಕೆ? ಗುಮಟಾಪುರ ತಮಿಳುನಾಡಿಗೆ ಸೇರಿದ್ದರೂ ಚಾಮರಾಜನಗರಕ್ಕೆ ಸಮೀಪದಲ್ಲಿದೆ. ಅಲ್ಲಿರುವ ಬಹುತೇಕ ಮಂದಿ ಕನ್ನಡಿಗರು. ಈ ಗ್ರಾಮದಲ್ಲಿ ಶತಮಾನಗಳ ಹಿಂದೆ ಗ್ರಾಮದ ಗೌಡನ ಮನೆಗೆ ಬೇರೆ ಗ್ರಾಮದ ವ್ಯಕ್ತಿಯೊಬ್ಬ ಕೆಲಸಕ್ಕೆ ಬರುತ್ತಾನೆ. ಕೆಲವು ದಿನಗಳಲ್ಲೇ ಆತ ಮೃತಪಡುತ್ತಾನೆ. ಅವನ ಅಂತ್ಯಕ್ರಿಯೆ ನಂತರ ಆತನ ಜೋಳಿಗೆಯನ್ನು ತಿಪ್ಪೆಗೆ ಎಸೆಯಲಾಗುತ್ತದೆ.

ಗೌಡನ ಎತ್ತಿನಗಾಡಿಯ ಚಕ್ರ ಆ ಜೋಳಿಗೆ ಮೇಲೆ ಹರಿಯುತ್ತದೆ. ತಕ್ಷಣ ಪಕ್ಕದಲ್ಲಿಯೇ ಇದ್ದ ಶಿವಲಿಂಗದಿಂದ ರಕ್ತ ಬರುತ್ತದೆ ಅಂದು ರಾತ್ರಿ ದೇವರು ಗೌಡನ ಕನಸಿನಲ್ಲಿ ಬಂದು ಈ ದೋಷ ಪರಿಹಾರಕ್ಕಾಗಿ ಗುಡಿ ಕಟ್ಟಿಸಬೇಕು. ದೀಪಾವಳಿ ಹಬ್ಬದ ಮರು ದಿನ ಸಗಣಿ ಹಬ್ಬ ಆಚರಿಸಬೇಕು ಎಂದು ಗೌಡನಿಗೆ ಹೇಳಿತಂತೆ. ನಂತರದ ವರ್ಷದಿಂದ ಈ ಆಚರಣೆ ಶುರುವಾಯಿತು ಎಂಬುದು ಈ ಗ್ರಾಮದಲ್ಲಿ ನಡೆಯುತ್ತಿರುವ ಹಬ್ಬದ ಪ್ರತೀತಿ.

ಕೌಶಿಕ ರಾಮ್ ನಿಧನ



ಗುಂಡ್ಲುಪೇಟೆ: ತಾಲೂಕಿನ ತೊಂಡವಾನಿ ನಿವಾಸಿ ಕೌಶಿಕ ರಾಮ್(78) ಗುರುವಾರ ಬೆಂಗಳೂರಿನಲ್ಲಿ ನಿಧನರಾಗಿದ್ದಾರೆ. ದಿವಂಗತರು ಪತ್ನಿ, ಮೂವರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ದಿವಂಗತರ ಅಂತ್ಯಕ್ರಿಯೆ ನಾಳೆ(ಶುಕ್ರವಾರ) ಮಧ್ಯಾಹ್ನ 2 ಗಂಟೆಗೆ ಬೆಂಗಳೂರು ಚಾಮರಾಜಪೇಟೆಯ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪೂರ್ವಭಾವಿ ಸಭೆ

ಚಾಮರಾಜನಗರ, ಅ.23– ಜಿಲ್ಲಾ ಮಟ್ಟದ ಕನಕದಾಸ ಜಯಂತಿ ಆಚರಣೆ ಸಂಬಂಧ ಪೂರ್ವಭಾವಿ ಸಭೆಯನ್ನು ಅ.28ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಸಮಾಜದ ಅಧ್ಯಕ್ಷರು ಹಾಗೂ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ವಿವಿಧ ಸಮುದಾಯದ ಮುಖಂಡರು ಸಭೆಗೆ ಹಾಜರಾಗಿ ಕನಕದಾಸ ಜಯಂತಿ ಆಚರಣೆ ಕುರಿತು ಸಲಹೆ ನೀಡುವಂತೆ ಕೋರಲಾಗಿದೆ.

ಇಂದು ಚಾಮರಾಜನಗರ ನಗರಸಭೆ ವಿಶೇಷ ಸಭೆ

ಚಾಮರಾಜನಗರ, ಅ.23– ಚಾಮರಾಜನಗರ ನಗರಸಭೆಯ ವಿಶೇಷ ಸಭೆಯನ್ನು ನಗರಸಭಾ ಅಧ್ಯಕ್ಷ ಸುರೇಶ್ ಅವರ ಅಧ್ಯಕ್ಷತೆಯಲ್ಲಿ ಅ.24ರಂದು ಬೆಳಿಗ್ಗೆ 11 ಗಂಟೆಗೆ ನಗರಸಭೆ ಕಚೇರಿ ಸಭಾಂಗಣದಲ್ಲಿ ಏರ್ಪಡಿಲಾಗಿದೆ ಎಂದು ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುರುಬ ಸಮಾಜ ಎಸ್ಟಿಗೆ ಸೇರಿಸುವಂತೆ ಮೌನ ಪ್ರತಿಭಟನೆ

ಕೊಳ್ಳೇಗಾಲ, ಅ.23– ಕುರುಬ ಸಮುದಾಯವನ್ನು ಎಸ್.ಟಿ ವರ್ಗಕ್ಕೆ ಸೇರಿಸುವ ಮೂಲಕ ಅಗತ್ಯ ಸೌಲಭ್ಯ ಒದಗಿಸಬೇಕು ಎಂದು ಆಗ್ರಹಿಸಿ ಸಿದ್ದಯ್ಯನಪುರ ಶ್ರೀಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸೇವಾ ಸಮಿತಿ ವತಿಯಿಂದ ಗುರುವಾರ ಮೌನ ಪ್ರತಿಭಟನೆ ನಡೆಸಿ ತಾಲೂಕು ದಂಡಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಮೊದಲಿಗೆ ಪಟ್ಟಣದ ಡಾ.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಬಳಿಕ ಮೆರವಣಿಗೆ ಮೂಲಕ ತೆರಳಿದ ಪದಾಧಿಕಾರಿಗಳು ತಾಲೂಕು ಕಚೇರಿ ತಲುಪಿ ಗ್ರೇಡ್ 2 ತಹಶಿಲ್ದಾರ್ ಕುಮಾರ್ ಅವರಿಗೆ ತಮ್ಮ ಮನವಿ ಪತ್ರ ಸಲ್ಲಿಸಿದರು. ಸಮಿತಿ ಅಧ್ಯಕ್ಷ ಶ್ರೀನಿವಾಸ್, ಉಪಾಧ್ಯಕ್ಷ ಬಸವರಾಜು, ಸದಸ್ಯ ಲಿಂಗರಾಜು, ಬಸವರಾಜು, ನಾಗೇಂದ್ರ, ಕಾರ್ಯದರ್ಶಿ ಮನೋಜ್, ಖಜಾಂಜಿ ಕಾರ್ತಿಕ್(ಪುಟ್ಟು), ಶಾಂತರಾಜು, ನಗರಸಭೆ ನಾಮನಿರ್ದೇಶಿತ ಸದಸ್ಯ ಶಿವಮಲ್ಲು, ಮುಖಂಡ ಪೋಸ್ಟ್ ರಾಜಣ್ಣ, ಯಜಮಾನರು ಇದ್ದರು.





ಹಾಡುಗಳಲ್ಲಿ 'ಧೈರ್ಯಂ ಧರ್ಮಂ ದೇಶಂ'

ಇತ್ತೀಚಿನ ದಿನಗಳಲ್ಲಿ ಚಿತ್ರರಂಗ ಎಲ್ಲರನ್ನೂ ಕೈಬೀಸಿ ಕರೆಯುತ್ತಿದೆ, ಬಿಲ್ಡರ್, ಡಾಕ್ಟರ್, ಎಂಜಿನಿಯರ್, ಇದೀಗ ಸಗಟು ತರಕಾರಿ ವ್ಯಾಪಾರಿಯೂ ಮಾಯಾ ಲೋಕದೆಡೆಗೆ ಆಕರ್ಷಿತರಾಗಿದ್ದಾರೆ. ಸೋಷಿಯಲ್ ಕಂಟೆಂಟ್ ಇಟ್ಟುಕೊಂಡು ತರಕಾರಿ ವ್ಯಾಪಾರಿ ಕೆ.ಬಿ.ಮಂಜುನಾಥ್ 'ಧೈರ್ಯಂ ಧರ್ಮಂ ದೇಶಂ' ಎಂಬ ಚಿತ್ರವನ್ನು ನಿರ್ದೇಶಿಸಿದ್ದಾರೆ. ಈ ಚಿತ್ರದ ಹೆಸರು ಡಿಡಿಡಿ. ಇತ್ತೀಚೆಗೆ ಈ ಚಿತ್ರದ ಟ್ರೇಲರ್ ಮತ್ತು ಆಡಿಯೋ ಬಿಡುಗಡೆ ಕಾರ್ಯಕ್ರಮ ನಡೆಯಿತು. ಕೆ.ಬಿ.ಮಂಜುನಾಥ್ ನಿರ್ದೇಶನದ ಜತೆಗೆ ನಿರ್ಮಾಣದ ಜವಾಬ್ದಾರಿಯನ್ನೂ ಸಹ ಹೊತ್ತಿದ್ದಾರೆ. ಅರುಣ್, ಗಗನ ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ.

ಚಿತ್ರದ ಕುರಿತು ಮಾತನಾಡಿದ ಮಂಜುನಾಥ್, ಈ ಹಿಂದೆ 2 ಕಿರುಚಿತ್ರ ಮಾಡಿದ್ದೆ. ಅದೇ ಅನಭವದ ಮೇಲೆ ಡಿಡಿಡಿ ಚಿತ್ರಕ್ಕೆ ಕಥೆ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದೇನೆ, ಚಿತ್ರದ 5 ಹಾಡುಗಳಲ್ಲಿ ಮಾನವೀಯತೆ, ಪ್ರೀತಿ, ಸಂಬಂಧಗಳ ಬೆಲೆ ಇಂತಹ ಅನೇಕ ವಿಷಯಗಳನ್ನು ಹೇಳಿದ್ದೇವೆ. ಸಾಮಾನ್ಯ ಪ್ರಜೆಯಾದವನು ಧೈರ್ಯ ಮಾಡಬೇಕು. ಅಧಿಕಾರಿಗಳು ಧರ್ಮವನ್ನು ಕಾಪಾಡಬೇಕು. ಯೋಧನಾದವನು ನಮ್ಮ ದೇಶವನ್ನು ಕಾಯಬೇಕು. ಇವು ಸಮಾಜದ ಮೂರು ಮುಖ್ಯ ಅಂಗಗಳಾಗಿವೆ ಎಂಬುದನ್ನು ಧೈರ್ಯಂ ಧರ್ಮಂ ದೇಶಂ ಚಿತ್ರದ ಮೂಲಕ ಹೇಳ ಹೊರಟಿದ್ದೇನೆ. ನಾವು ಸಮಾಜವನ್ನು ಹೇಗೆ ನೋಡಿಕೊಳ್ಳಬೇಕು. ಅವಘಡಗಳು ನಡೆದಾಗ ಅದನ್ನು ಯಾವ ರೀತಿ ಎದುರಿಸಬೇಕು ಎಂಬುದನ್ನು ಚಿತ್ರದಲ್ಲಿ ಹೇಳಿದ್ದೇವೆ, ಚಿತ್ರಕ್ಕೆ ಬೆಂಗಳೂರು, ಮಂಗಳೂರು ಹಾಗೂ ಕೊಳ್ಳೇಗಾಲದ ಗಡಿಭಾಗದಲ್ಲಿ ಚಿತ್ರೀಕರಣ ನಡೆಸಲಾಗಿದೆ ಎಂದು ಹೇಳಿದರು.

ಚಿತ್ರದ ನಾಯಕ ಅರುಣ್ ವೆಂಕಟರಾಜು ಮಾತನಾಡಿ, ಮರಣಂ ನಂತರ ಅಭಿನಯಿಸುತ್ತಿರುವ ಚಿತ್ರವಿದು. ಹಳ್ಳಿ ಹುಡುಗ, ಕೌಟುಂಬಿಕ ಸಮಸ್ಯೆಗಳ ಕಾರಣ ಸಿಟಿಗೆ ಬರುತ್ತಾನೆ. ಅಲ್ಲಿ ಏನೇನಾಯ್ತು ಅನ್ನೋದೇ ಚಿತ್ರಕಥೆ ಎಂದರು. ಶಿವಮೊಗ್ಗದ ಗಗನ ಮಲ್ನಾಡ್ ಚಿತ್ರದ ನಾಯಕಿಯಾಗಿ ಕಾಣಿಸಿಕೊಂಡಿದ್ದು, ನಾನು ಕೂಡ ಹಳ್ಳಿ ಹುಡುಗಿಯಾಗಿ ನಟಿಸಿದ್ದೇನೆ ಎಂದರು. ಇನ್ಸ್‌ಪೆಕ್ಟರ್ ಪಾತ್ರದಲ್ಲಿ ರಘು ಶಿವಮೊಗ್ಗ, ಉಳಿದಂತೆ ಚಾರ್ಲ್ಸ್ ಟೋನಿ, ಸುರೇಶ್‌ಬಾಬು, ಡಿವಿ. ನಾಗರಾಜು, ರೋಹಿಣಿ ಮುಂತಾದವರು ಅಭಿನಯಿಸಿದ್ದಾರೆ.

ಈ ವಾರ ಯಾರಿಗೂ ಹೇಳ್ಬೇಡಿ



ದಶಕಗಳ ಹಿಂದೆ ತೆರೆಕಂಡಿದ್ದ ಯಾರಿಗೂ ಹೇಳ್ಬೇಡಿ ಶೀರ್ಷಿಕೆಯಡಿ ಮತ್ತೊಂದು ಚಿತ್ರ ನಿರ್ಮಾಣವಾಗಿದ್ದು, ಇಂದಿನಿಂದ ರಾಜ್ಯಾದ್ಯಂತ ತೆರೆ ಕಾಣಲಿದೆ. ಇತ್ತೀಚೆಗೆ ಈ ಚಿತ್ರದ ಟ್ರೈಲರನ್ನು ಕಿಚ್ಚ ಸುದೀಪ್ ಬಿಡುಗಡೆಗೊಳಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಕಿರುತೆರೆ ನಟ ಚೇತನ್ ವಿಕ್ಕಿ, ಚೈತ್ರಾ ಆಚಾರ್ ಪ್ರಮುಖ ಪಾತ್ರಗಳಲ್ಲಿದ್ದು, ಅಪ್ಪಣ್ಣ ರಾಮದಾಸ್(ಕಾಮಿಡಿ ಕಿಲಾಡಿಗಳು), ಅಶ್ವಿನಿ ಪೊಲೆಪಲ್ಲಿ ಉಳಿದ ಪಾತ್ರವರ್ಗದಲ್ಲಿದ್ದಾರೆ.

ನಟ ಚೇತನ್ ಮಾತನಾಡಿ, ಇದೊಂದು ಔಟ್ ಅಂಡ್ ಔಟ್ ಕಾಮಿಡಿ ಎಂಟರ್‌ಟೈನರ್ ಚಿತ್ರ ಥಿಯೇಟರ್‌ಗೆ ಬಂದ ಪ್ರೇಕ್ಷಕ 2 ಗಂಟೆ ಕಾಲ ಮನಸ್ಸನ್ನು ಹಗುರ ಮಾಡಿಕೊಂಡು ಹೋಗುತ್ತಾನೆ. ನಾಯಕ ಒಂದು ಸುಳ್ಳನ್ನು ಮುಚ್ಚಿ ಹಾಕಲು ಹೋಗಿ ಕಥೆಯ ಮೇಲೆ ಕಥೆ, ಹೆಣೆದುಕೊಂಡು ಹೋಗ್ತಾನೆ ಏನೇನೆಲ್ಲ ಕಥೆ ಕಟ್ಟುತ್ತಾನೆ ಎಂಬುದನ್ನು ಕಾಮಿಡಿಯಾಗಿ ಹೇಳಿಕೊಂಡು ಹೋಗಿದ್ದೇವೆ. ಚಿತ್ರದಲ್ಲಿ ನಾನೊಬ್ಬ ವಿಡಿಯೋ ಜಾಕಿಯಾಗಿ ಕಾಣಿಸಿಕೊಂಡಿದ್ದೇನೆ. ಹುಡುಗಿಯನ್ನು ಲವ್‌ಮಾಡಿ, ನಂತರ ಆಕೆಯನ್ನು ಮದುವೆಯಾಗುವ ಸಂದರ್ಭದಲ್ಲಿ ಒಂದು ಸುಳ್ಳು ಹೇಳುತ್ತೇನೆ. ನಂತರ ಆ ಸುಳ್ಳನ್ನು ಮುಚ್ಚಿಡಲು ಹೋದಾಗ ಏನೇನೆಲ್ಲ ಆಗುತ್ತದೆ ಎನ್ನುವುದೇ ಚಿತ್ರದ ಮುಖ್ಯ ಕಥಾಹಂದರ. ಅಪ್ಪಣ್ಣ ನನ್ನ ಸ್ನೇಹಿತನಾಗಿ ಕಾಣಿಸಿಕೊಂಡಿದ್ದಾರೆ ಎಂದು ಮಾಹಿತಿ ಹಂಚಿಕೊಂಡರು. ನಂತರ ಅಪ್ಪಣ್ಣ ಮಾತನಾಡಿ, ಈ ಚಿತ್ರದಲ್ಲಿ ನಾವಿಬ್ಬರೂ ಸ್ನೇಹಿತರಾಗಿ ನಟಿಸಿದ್ದೇವೆ. ಕನ್ನಡಕ್ಕೆ ಈ ತರಹದ ಕಂಟೆಂಟ್ ಹೊಸದು. ಹೊಸ ಥಾಟ್ ಇಟ್ಟುಕೊಂಡು ಮಾಡಿರುವ ಚಿತ್ರವಿದು ಎಂದು ಹೇಳಿದರು. ನಿರ್ಮಾಪಕರಲ್ಲೊಬ್ಬರಾದ ಹರೀಶ್ ಮಾತನಾಡಿ, ಇದು ನಮ್ಮ ಸಂಸ್ಥೆಯ ಪ್ರಥಮ ಚಿತ್ರ, ಸಿನಿಮಾ ತುಂಬಾ ಚೆನ್ನಾಗಿ ಮೂಡಿಬಂದಿದೆ ಎಂದು ಹೇಳಿದರು.

ಶಶಾಂಕ್ ಶೇಷಗಿರಿ ಹಾಗೂ ಉದಿತ್ ಹರಿತಾಸ್ ಅವರ ಸಂಗೀತ ನಿರ್ದೇಶನದ 3 ಹಾಡುಗಳು ಚಿತ್ರದಲ್ಲಿವೆ. ಸುನಿಲ್ ಪ್ರೊಡಕ್ಷನ್ಸ್ ಅಡಿ ಸುನಿಲ್ ಕುಮಾರ್ ಹಾಗೂ ಹರೀಶ್ ಅಮ್ಮಿನೇನಿ ಈ ಚಿತ್ರವನ್ನು ನಿರ್ಮಿಸಿದ್ದಾರೆ, ಡೇವಿಡ್ ಆನಂದ ರಾಜ್ ಛಾಯಾಗ್ರಾಹಕರಾಗಿದ್ದು ಶರತ್ ಲೋಹಿತಾಶ್ವ, ಚೈತ್ರಾರಾವ್ ಉಳಿದ ಪಾತ್ರವರ್ಗದಲ್ಲಿದ್ದಾರೆ.

ಪಿಆರ್‌ಓ ಸುಧೀಂದ್ರ ವೆಂಕಟೇಶ್ ನಿರ್ಮಾಣದ 'ಫಸ್ಟ್ ಸ್ಯಾಲರಿ' ಫಸ್ಟ್‌ಲುಕ್

ಚಲನಚಿತ್ರ ನಿರ್ಮಾಪಕರು ಮತ್ತು ಪತ್ರಕರ್ತರ ಸಂಪರ್ಕ ಕೊಂಡಿಯಾಗಿ ಕಳೆದ 5 ದಶಕಗಳಿಂದ ಕೆಲಸ ಮಾಡುತ್ತಿರುವ ಶ್ರೀ ರಾಘವೇಂದ್ರ ಚಿತ್ರವಾಣಿ ಸಂಸ್ಥೆಯ ಹಿರಿಯ ಸಿನಿಮಾ ಪ್ರಚಾರಕರ್ತ ಸುಧೀಂದ್ರ ವೆಂಕಟೇಶ್ ಈಗ ಹೊಸ ಸಾಹಸಕ್ಕೆ ಕೈಹಾಕಿದ್ದಾರೆ. ತಮ್ಮ ಪುತ್ರ ಪವನ್‌ವೆಂಕಟೇಶ್ ಆಕ್ಷನ್ ಕಟ್ ಹೇಳಿರುವ ಫಸ್ಟ್ ಸ್ಯಾಲರಿ ಕಿರುಚಿತ್ರಕ್ಕೆ ಬಂಡವಾಳ ಹಾಕುವ ಮೂಲಕ ನಿರ್ಮಾಪಕರಾಗಿದ್ದಾರೆ. ದೀಪಾವಳಿ ಹಬ್ಬದ ಸಂದರ್ಭದಲ್ಲಿ 'ಫಸ್ಟ್ ಸ್ಯಾಲರಿ' ಕಿರುಚಿತ್ರದ ಪೋಸ್ಟರ್ ಬಿಡುಗಡೆಯಾಗಿದೆ. ಕರೋನ ಸಮಯದಲ್ಲಿ ಕರಾಳ ರೋಗನಾಶ ಸೇರಿದಂತೆ ಅನೇಕ ಕಿರುಚಿತ್ರಗಳನ್ನು ನಿರ್ದೇಶಿಸಿ, ಅನುಭವ ಹೊಂದಿದ್ದ ಪವನ್ ವೆಂಕಟೇಶ್, ಈಗ ಫಸ್ಟ್ ಸ್ಯಾಲರಿ ಚಿತ್ರ ನಿರ್ದೇಶಿಸುತ್ತಿದ್ದಾರೆ.

ಹಿರಿಯ ಕಲಾವಿದರಾದ ಹರಿಣಿ ಶ್ರೀಕಾಂತ್, ವಿಜಯ್ ಶಿವಕುಮಾರ್, ಯತಿರಾಜ್, ತ್ರಿಶೂಲ್, ಸ್ನೇಹಶ್ರೀ ಮತ್ತು ರಕ್ಷಿತ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿರುವ ಫಸ್ಟ್ ಸ್ಯಾಲರಿ ಶ್ರೀರಾಘವೇಂದ್ರ ಚಿತ್ರವಾಣಿ ಚಾನೆಲ್ ಮೂಲಕ ಸದ್ಯದಲ್ಲೇ ಬಿಡುಗಡೆಯಾಗಲಿದೆ.

ಈಹಿಂದೆ ಕರೋನಾ ಕರಾಳನಾಶ ಎಂಬ ಕಿರುಚಿತ್ರ ನಿರ್ದೇಶಿಸಿದ್ದೆ. ಇದರ ಜೊತೆ ಸಿನಿಮಾ ಪ್ರಚಾರಕರ್ತ ಡಿ.ವಿ.ಸುಧೀಂದ್ರ ಅವರ ಸಿನಿಪಯಣದ ಸಾಕ್ಷ್ಯಚಿತ್ರ ಹಾಗೂ ಆನಿಮೇಷನ್‌ನಲ್ಲಿ ರಾಮ ಜನ್ಮಭೂಮಿ ಕಿರುಚಿತ್ರ ನಿರ್ದೇಶಿಸಿದ್ದೆ. ಇದೊಂದು ಕಿರುಚಿತ್ರವಾದರೂ ಕಮರ್ಷಿಯಲ್ ಅಂಶಗಳನ್ನೂ ಒಳಗೊಂಡಿದೆ. ತಾಯಿಯ ಸೆಂಟಿಮೆಂಟ್ ಕಥಾಹಂದರ ಇರುವ ಈ ಕಿರುಚಿತ್ರವನ್ನು 5 ದಿನಗಳವರೆಗೆ ಚಿತ್ರೀಕರಿಸಲಾಗಿದ್ದು, ಇದರಲ್ಲಿ ಒಂದು ಹಾಡೂ ಇದ್ದು, ಈ ಕಿರುಚಿತ್ರದ ಅವಧಿ 24 ನಿಮಿಷ. ರಿಚರ್ಡ್ ಡ್ಯಾನಿಯಲ್ ಛಾಯಾಗ್ರಹಣದ ಜೊತೆಗೆ ಸಂಕಲನ ಮಾಡಿದ್ದು, ವಿಜಯ್ ಹರಿತ್ಸ ಸಂಗೀತ ನೀಡಿದ್ದಾರೆ. ಡಿ.ಎಸ್.ಸುನೀಲ್ ಸುಧೀಂದ್ರ ಮತ್ತು ಡಿ.ಜಿ.ವಾಸುದೇವ್ ಪತ್ರಿಕಾ ಸಂಪರ್ಕವಿದ್ದು, ಡಿಜಿಟಲ್ ಮಾರ್ಕೆಟಿಂಗ್‌ನಲ್ಲಿ ಚಂದನ ಪ್ರಸನ್ನ ಕಾರ್ಯನಿರ್ವಹಿಸಿದ್ದಾರೆ ಎಂದು ನಿರ್ದೇಶಕ ಪವನ್‌ವೆಂಕಟೇಶ್ ಮಾಹಿತಿ ನೀಡಿದ್ದಾರೆ.



ಸಿನಿಪದಬಂಧ-599



ಉಮ್ಮತ್ತೂರು ಇಂದುಶೇಖರ್
ಮೊ.9880820462

1	2				3				4	
5							6			
7			8							
					9					
	10	11								
							12		13	
14				15						
16						17				

ಹೆಸರು ______

ವಿಳಾಸ ______

______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. ಕಿಚ್ಚ ಸುದೀಪ್ ದೊಡ್ಡರಸು 4
3. ಅಂಬಿ ನಿರ್ಮಿಸಿದ ನೂತನ ರಾಷ್ಟ್ರ 5
5. ಶ್ರೀನಾಥ್ – ಮಂಜುಳಾ ಕಂಡ ಸ್ವಪ್ನ ನಿಜವಾಗಿದೆ 6
6. 'ನಾಗ'ನ ಬಿಸಿಲ ನಾಡು 3
7. ದೇವರಾಜ್ – ಸಿತಾರ ಅಭಿನಯಕ್ಕೆ ವಿ. ಸೋಮಶೇಖರ್ ನಿರ್ದೇಶಕ 5
9. 'ದುಂಡು ಮಲ್ಲಿಗೆ ಮಾತಾಡೆಯ ಕೆಂಡ ಸಂಪಿಗೆ ನೀನಾದೆಯ....', ಗೀತೆಯ ಚಿತ್ರ 5
10. ವೈಕುಂಠದ ದ್ವಾರಪಾಲಕರು ತೆರೆಯ ಮೇಲೂ ಕಾಣಿಸಿಕೊಂಡರು 5
12. ರವಿಚಂದ್ರನ್ ಒಬ್ಬ ನೀತಿವಂತ ವಕೀಲನಾಗಲು ಎಂ. ಎಸ್. ರಮೇಶ್ ನಿರ್ದೇಶನವಿದೆ 4
16. ಕಲ್ಯಾಣ್ ಕುಮಾರ್ – ಜಯಲಲಿತ ಅಭಿನಯದ ಚಿತ್ರವಿದು 5
17. ಕಾಡು ಸಿದ್ದಮ್ಮನ ಕಥೆ ಆಧರಿಸಿರುವ ರಾಜಕುಮಾರ್ ಅಭಿನಯದ ಚಿತ್ರ 5

ಮೇಲಿನಿಂದ ಕೆಳಕ್ಕೆ

2. ಡಾ. ರಾಜ್ ಅಭಿನಯದಲ್ಲಿ ಸರ್ಪ ತಲೆ ಎತ್ತಿದೆ 5
3. ಹೊಸ ಪುಷ್ಪಕ್ಕೆ ಹೀಗೊಂದು ಹೆಸರು 4
4. ಹುಟ್ಟಿದ ಮನೆಯಲ್ಲಿ ಶ್ರುತಿ ಎಳೆದ ರಥ 6
6. ವಿಷ್ಣುವರ್ಧನ್ – ಮಂಜುಳಾಗೆ ತಾನಾಗಿಯೇ ಅದೃಷ್ಟ ಖುಲಾಯಿಸಿದೆ 8
8. ಭೈರವನ ಸ್ತ್ರೀ ರೂಪ 3
9. 'ತಾರಾ'ಳ ಕಣ್ಣು ಮೃದು 3
11. ಪಾಶ ಹಿಡಿದವನ ಜೊತೆ ಆತನ ಸೇವಕನೂ ಇದ್ದಾನೆ 5
13. ವಿಷ್ಣುವರ್ಧನ್, ರೂಪಿಣಿ, ಭವ್ಯ ಅಭಿನಯದ ಚಿತ್ರ 4
14. ಹಣಬಲವೋ _ _ ಬಲವೋ 2
15. ಕೃಷ್ಣ ನೀ ಬೇಗನೆ ಬಾರೋ ಎಂದು ಕರೆದಾಕೆ 2

ಸಿನಿ ಪದಬಂಧ 598ರ ಉತ್ತರ

ದೀ	ಪಾ	ವ	ಳಿ		ಆ	ನೆ	ಪ	ಟಾ	ಕಿ	
	ವ				ಗಂ				ಲಾ	
ಮ	ನ	ಮಿ	ಡಿ	ಯಿ	ತು		ಮ	ಹ	ಡಿ	
	ಗಂ				ಕ		ರೆ		ಅ	
ಗಂ	ಗಾ	ಯ	ಮು	ನಾ			ಯ		ಳಿ	
			ಸು		ಆ	ರ	ದ	ಗಾ	ಯ	
	ರಾ	ಜ	ಕು	ಮಾ	ರ		ದೀ			
		ನ್ಮ			ತಿ		ಪಾ	ರಿ	ವಾ	ಳ
ಸ್ನೇ		ರ		ಗ			ವ		ಯು	
ಹ	ರಿ	ಹ	ರ	ನ್		ಗಾ	ಳಿ	ಗೋ	ಪು	ರ
		ಸ್ಯ							ತ್ರ	

ವಿಜೇತರು: ಚೈತ್ರಾ.ಜಿ.ಸಿ., ನಂ.38, ಗರುಡಾಚಾರ್ ಲೇಔಟ್, 2ನೇ ಕ್ರಾಸ್, ವಿಜಯನಗರ 3ನೇ ಹಂತ, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

4.30-6.00 ಮುಹೂರ್ತ ನಾಲ್ವರು ಕಾಣಿಸುತ್ತಿಲ್ಲ!



4.30 – 6.00 ಮುಹೂರ್ತ ನಾಲ್ವರು ಕಾಣಿಸುತ್ತಿಲ್ಲ ಇಂಥದ್ದೊಂದು ವಿಭಿನ್ನ ಶೀರ್ಷಿಕೆಯ ಚಿತ್ರವೊಂದು ಇತ್ತೀಚೆಗೆ ಸೆಟ್ಟೇರಿದೆ. ಧರ್ಮಶ್ರೀ ಮಂಜುನಾಥ್(ರಥಾವರ) ಹಾಗೂ ಯೋಗರಾಜ್ ನಿರ್ಮಿಸುತ್ತಿರುವ ಈ ಚಿತ್ರಕ್ಕೆ ಪ್ರಾವ್ಯೆ ಸುರೇಶ್ ಹಾಗೂ ಶಿವರಾಜ್ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಮಂಜುನಾಥ್‌ರ ಪುತ್ರ ಎಂ.ಎನ್.ಸುಚಿತ್, ಸಾತ್ವಿಕ ನಾಯಕ, ನಾಯಕಿ ಪಾತ್ರ ನಿರ್ವಹಿಸುತ್ತಿದ್ದಾರೆ. ಅನಿಲ್ ಹಾಗೂ ಧನ್ಯ ಮತ್ತೊಂದು ಜೋಡಿಯಾಗಿದ್ದಾರೆ.

ಮುಹೂರ್ತದ ನಂತರ ನಿರ್ಮಾಪಕ ಡಿ.ಯೋಗರಾಜ್ ಮಾತನಾಡುತ್ತಾ, ನಮ್ಮ ನೀಲಕಂಠ ಫಿಲಂಸ್ ಅಡಿ ನಿರ್ಮಾಣವಾಗುತ್ತಿರುವ ಐದನೇ ಚಿತ್ರವಿದು. ನಮ್ಮ ಜತೆ ಧರ್ಮಶ್ರೀ ಎಂಟರ್‌ಪ್ರೈಸಸ್‌ನ ಮಂಜುನಾಥ್ ಅವರೂ ಕೈಜೋಡಿಸಿದ್ದಾರೆ "4.30 – 6.00 ಮುಹೂರ್ತ ನಾಲ್ವರು ಕಾಣಿಸುತ್ತಿಲ್ಲ" ಸಂಬಂಧಗಳ ಮೌಲ್ಯಗಳನ್ನು ತಿಳಿಸುವ ಕಥೆ. 90ರ ದಶಕದಲ್ಲಿ ಮದುವೆ ಅಂದ್ರೇನೇ ಒಂದು ಸಂಭ್ರಮವಿತ್ತು ಬಂಧುಗಳು, ಸ್ನೇಹಿತರ ಮನೆ ಮನೆಗೂ ಹೋಗಿ ಪತ್ರಿಕೆ ಕೊಟ್ಟು ಮದುವೆಗೆ ಆಹ್ವಾನಿಸುತ್ತಿದ್ದರು. ಈಗ ಎಲ್ಲಾ ಮೊಬೈಲ್‌ನಲ್ಲೇ ಆಗಿಹೋಗುತ್ತಿದೆ. ಅಂದಿನ ಸಂಬಂಧಗಳು, ಬಾಂಧವ್ಯ ಹೇಗಿತ್ತು ಎಂದು ನಮ್ಮ ಚಿತ್ರದಲ್ಲಿ ತೋರಿಸುವ ಪ್ರಯತ್ನ ಮಾಡುತ್ತಿದ್ದೇವೆ. ಬೆಂಗಳೂರಿನಲ್ಲೇ ಹೆಚ್ಚಿನ ಭಾಗದ ಚಿತ್ರೀಕರಣ ನಡೆಯಲಿದ್ದು, ಹಾಡು ಗಳನ್ನು ಚಿಕ್ಕಮಗಳೂರು, ಮಂಗಳೂರು ಸುತ್ತ ಮುತ್ತ ನಡೆಸಲಿದ್ದೇವೆ ಎಂದು ಹೇಳಿದರು.

ಮತ್ತೊಬ್ಬ ನಿರ್ಮಾಪಕ ಧರ್ಮಶ್ರೀ ಮಂಜುನಾಥ್ ಮಾತನಾಡುತ್ತಾ, ನನ್ನ ಮಗನಿಗಾಗಿ ನಾನೇ ಒಂದು ಸಿನಿಮಾ ಮಾಡುವುದು ಕಷ್ಟ ಇರಲಿಲ್ಲ. ಆದರೆ, ಮೊದಲು ಆತನೊಬ್ಬ ಉತ್ತಮ ಕಲಾವಿದ ಅಂತ ಕರೆಸಿಕೊಳ್ಳಬೇಕೆಂಬುದು ನನ್ನಾಸೆಯಾಗಿತ್ತು. ಈಗಾಗಲೇ ಕೆಲ ಚಿತ್ರಗಳಲ್ಲಿ ಅಭಿನಯಿಸಿ, ನಟನೆಗೆ ಬೇಕಾದ ಎಲ್ಲಾ ಸಿದ್ದತೆಗಳನ್ನು ಮಾಡಿಕೊಂಡಿದ್ದಾನೆ. ಈ ಚಿತ್ರದ ಮೂಲಕ ನಾಯಕನಾಗಿ ಕಾಣಿಸಿಕೊಳ್ಳುತ್ತಿದ್ದಾನೆ ಎಂದರು.

ನಾಯಕ ಎಂ.ಎನ್.ಸುಚಿತ್ ಮಾತನಾಡುತ್ತಾ, ಇದೇ ಮೊದಲ ಬಾರಿಗೆ ನಾಯಕನಾಗಿ ತೆರೆಮೇಲೆ ಕಾಣಿಸಿಕೊಳ್ಳುತ್ತಿದ್ದೇನೆ. ನನ್ನ ಆಸೆಗೆ ನನ್ನ ತಂದೆ ಆಸರೆಯಾಗಿ ನಿಂತಿದ್ದಾರೆ ಎಂದರು. ನಿರ್ದೇಶಕರಾದ ಪ್ರಾವ್ಯೆ ಸುರೇಶ್, ಶಿವರಾಜ್, ಕಲಾವಿದರಾದ ಅನಿಲ್ ಧನ್ಯ, ರಮೇಶ್ ರೈ, ರೇಖಾದಾಸ್, ವಸ್ತ್ರವಿನ್ಯಾಸಕಿ ಸುಶೀಲ ಯೋಗರಾಜ್ ಚಿತ್ರದ ಕುರಿತಂತೆ ಮಾತನಾಡಿದರು.

ಬಡ ರೈತ ಕುಟುಂಬದ ಕಥೆ ವಲವಾರ

ಮಲೆನಾಡಿನ ಗ್ರಾಮೀಣ ಪರಿಸರದ ಹಿನ್ನೆಲೆಯಲ್ಲಿ ನಡೆಯುವ ಬಡ ರೈತಕುಟುಂಬ ಹಾಗೂ ಮಕ್ಕಳ ಕಥೆಯನ್ನು ಹೇಳುವ ಚಿತ್ರ ವಲವಾರ ಬಿಡುಗಡೆಗೆ ಸಿದ್ದವಾಗಿದೆ. ಸುತನ್‌ಗೌಡ ಅವರ ನಿರ್ದೇಶನದ ಈ ಚಿತ್ರಕ್ಕೆ ಗಿರಿಧರ್ ಜೆ. ಹಾಗೂ ಅನಿರುದ್ಧ ಗೌತಮ್ ಅವರು ಬಂಡವಾಳ ಹೂಡಿದ್ದಾರೆ. ಈ ಚಿತ್ರಕ್ಕೆ ಸಕಲೇಶಪುರದ ಸುತ್ತಮುತ್ತ ಚಿತ್ರೀಕರಿಸಲಾಗಿದ್ದು, ಒಂದು ಹಸು ಕೂಡ ಚಿತ್ರದಲ್ಲಿ ಪ್ರಮುಖ ಪಾತ್ರವಾಗಿರಲಿದೆ. ಸದ್ಯ ವಲವಾರ ಚಿತ್ರದ ಟ್ರೈಲರ್ ಬಿಡುಗಡೆಯಾಗಿದ್ದು ಗಮನ ಸೆಳೆಯುತ್ತಿದೆ.

ಈ ಹಿಂದೆ ಪುನೀತ್ ರಾಜಕುಮಾರ್ ಅವರು ಈ ಕಥೆಯನ್ನು ಕೇಳಿ ಮೆಚ್ಚಿಕೊಂಡಿದ್ದರಲ್ಲದೆ, ತಮ್ಮ ಸಂಸ್ಥೆಯ ಮೂಲಕ ಚಿತ್ರ ನಿರ್ಮಾಣಕ್ಕೂ ಸಹ ಮುಂದಾಗಿದ್ದರು. ಆದರೆ ಪುನೀತ್ ನಿಧನರಾದ ಕಾರಣ ಅದು ಸಾಧ್ಯವಾಗಲಿಲ್ಲ. ಆ ಬಗ್ಗೆ ಬೇಸರವಿದೆ ಎಂದು ನಿರ್ದೇಶಕ ಸುತನ್‌ಗೌಡ ಅವರು ಹೇಳಿದ್ದಾರೆ. ಈಗಾಗಲೇ ಸೆನ್ಸಾರ್ ಮಂಡಳಿಯಿಂದ 'ಯು' ಪ್ರಮಾಣಪತ್ರ ಪಡೆದಿರುವ ವಲವಾರು ಚಿತ್ರವು ನವೆಂಬರ್‌ನಲ್ಲಿ ರಾಜ್ಯಾದ್ಯಂತ ಬಿಡುಗಡೆಯಾಗಲಿದೆ.

ಇದೊಂದು ಕನ್ನಡದ ಮಣ್ಣಿನ ಸೊಗಡಿನ ಚಿತ್ರವಾಗಿದ್ದು, ಸಕಲೇಶಪುರದ ಹಿನ್ನೆಲೆಯಲ್ಲಿ ಈ ಚಿತ್ರದ ಕಥಾನಕ ಸಾಗುತ್ತದೆ.



ವಲವಾರ ಮಕ್ಕಳ ಹಾಗೂ ಹಸುವೊಂದರ ಸುತ್ತ ಸಾಗುವ ಚಿತ್ರವಾಗಿದ್ದು, ಪಶ್ಚಿಮ ಘಟ್ಟಗಳ ಸುಂದರ ಪರಿಸರದಲ್ಲಿ ಚಿತ್ರದ ಕಥೆ ತೆರೆದುಕೊಳ್ಳುತ್ತದೆ. ಮಕ್ಕಳ ಬಾಲ್ಯ ಮತ್ತು ಜೀವನದ ಮೌಲ್ಯಗಳನ್ನು ತೆರೆದಿಡುತ್ತಾ ಸಾಗುವ ಚಿತ್ರದಲ್ಲಿ ಗ್ರಾಮೀಣ ಕರ್ನಾಟಕದ ಸೌಂದರ್ಯವನ್ನು ಕಾಣಬಹುದಾಗಿದೆ ಎಂದು ಚಿತ್ರತಂಡ ಹೇಳಿದೆ. ಮಾಯಾಬಜಾರ್, ಐರಾವತ, ರಾಟೆ, ಜ್ಯೂನಿಯರ್ ಚಿತ್ರಗಳ ನಿರ್ದೇಶನ ವಿಭಾಗದಲ್ಲಿ ಕೆಲಸಮಾಡಿರುವ ಸುತನ್‌ಗೌಡ ವಲವಾರ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ.

ಸೇವಾ ಕಾರ್ಯದಲ್ಲಿ ರಾಜೇಂದ್ರ ಶ್ರೀಗಳು ಜಗತ್ತಿಗೇ ಕೀರ್ತಿಶೇಷರು

ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯ

ನಂಜನಗೂಡು, ಅ.23– ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರು ಧಾರ್ಮಿಕ ಪರಂಪರೆ ಮತ್ತು ಆಧುನಿಕ ಜಗತ್ತಿನ ಸಮನ್ವತೆಯ ಸೇತುವೆಯಾಗಿ ಮಠದ ಸೇವಾ ಕಾರ್ಯವನ್ನು ಆಧುನಿಕ ಜಗತ್ತಿಗೆ ವಿಸ್ತರಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಸುತ್ತೂರು ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ನಗರದ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ವಿವಿಧ ಸಂಘ ಸಂಸ್ಥೆಗಳು ಹಾಗೂ ನಂಜನಗೂಡಿನ ನಾಗರಿಕರ ವತಿಯಿಂದ ಏರ್ಪಡಿಸಿದ್ದ ಡಾ.ಶ್ರೀಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಶತೋತ್ತರ ದಶಮಾನೋತ್ಸವ 110ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತ ಆಧ್ಯಾತ್ಮಿಕ, ಧಾರ್ಮಿಕವಾಗಿ ಪರಂಪರೆಯ ಇತಿಹಾಸವನ್ನು ಗರ್ಭಾಂತರಿಸಿಕೊಂಡಿರುವ ಕಾರಣ ಜಗತ್ತಿನ ಮುಂದುವರಿದ ದೇಶಗಳು ಕೂಡ ಭಾರತ ದೇಶದತ್ತ ತಿರುಗಿ ನೋಡುವಂತಾಗಿದೆ. ಇಲ್ಲಿನ ಸಾವಿರಾರು ಸಂತರು, ಋಷಿಮುನಿಗಳು ಆಧ್ಯಾತ್ಮಿಕ, ಧಾರ್ಮಿಕ, ಸಾಹಿತ್ಯ ಮತ್ತು ಸಂಸ್ಕೃತಿ ಸೇರಿದಂತೆ ವಿವಿಧ ರಂಗಗಳಲ್ಲಿ ತಪಶಕ್ತಿಯನ್ನು ಧಾರೆ ಎರೆದು ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ನಾಡಿನ ಅನೇಕ ಮಠಮಾನ್ಯಗಳು ಜನರಿಗೆ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ಶೈಕ್ಷಣಿಕ, ಆರೋಗ್ಯ ಕ್ಷೇತ್ರದಲ್ಲಿ ತಮ್ಮ ಸೇವೆ ವಿಸ್ತರಿಸಿರುವ ಕಾರಣ ದೇಶದಲ್ಲಿ ಸಾಕ್ಷರತೆಯ ಪ್ರಮಾಣ ಹೆಚ್ಚಾಗಿ ಜನರು ತಮ್ಮ ಸ್ವಂತ ಕಾಲ ಮೇಲೆ ನಿಂತು ಜೀವನ ಸಾಗಿಸುವ ಶಕ್ತಿ ಬಂದಿದೆ. ಯಾವುದೇ ಮಠದ ಪರಂಪರೆಯು ಧಾರ್ಮಿಕ ಕ್ಷೇತ್ರ ಅನುಸರಿಸಿ ಆಯಾ ಕಾಲಕ್ಕೆ ಅನುಸಾರವಾಗಿ ಸಾಮಾಜಿಕ ಮತ್ತು ಧಾರ್ಮಿಕ ಆರೋಗ್ಯ ಕ್ಷೇತ್ರದಲ್ಲಿ ಜನತೆಗೆ ಅಗತ್ಯವಾದ ಸೇವೆಯನ್ನು ಒದಗಿಸುವುದು ಪ್ರಮುಖವಾಗುತ್ತದೆ. ಅಂತೆಯೇ ಡಾ.ಶ್ರೀಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರು ಧಾರ್ಮಿಕ ಪರಂಪರೆ ಮತ್ತು ಸಮನ್ವತೆಯ ಸೇತುವೆಯಾಗಿ ಮಠದ ಸೇವಾ ಕಾರ್ಯವನ್ನು ಆಧುನಿಕ ಜಗತ್ತಿಗೆ ವಿಸ್ತರಿಸಿ, ಪ್ರಸಾದ ನಿಲಯಗಳನ್ನು ತೆರೆದು ಕಷ್ಟದ ದಿನಗಳಲ್ಲೂ ಸಹ ಪ್ರಸಾದ ನಿಲಯಗಳನ್ನು ಮುನ್ನಡೆಸಿ ಅನ್ನ,


> “ಡಾ.ಶ್ರೀಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರು 12ನೇ ಶತಮಾನದ ಬಸವಣ್ಣನವರ ಮೂಲ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಅನ್ನ, ಅಕ್ಷರ, ಆರೋಗ್ಯ ದಾಸೋಹದ ಮೂಲಕ ಜನರಿಗೆ ನಿಸ್ವಾರ್ಥ ಸೇವೆ ಒದಗಿಸುವ ಮೂಲಕ ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿದ್ದಾರೆ. ಅದರಂತೆಯೇ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಸುತ್ತೂರು ಮಠದ ಸೇವಾ ಕಾರ್ಯವನ್ನು ರಾಜ್ಯ ಮತ್ತು ವಿದೇಶಗಳಲ್ಲಿ ವಿಸ್ತರಿಸಿ ಸೇವೆ ಸಲ್ಲಿಸುತ್ತಾ ಬಸವಣ್ಣನವರ ಮೂಲ ತತ್ವ ಸಿದ್ಧಾಂತಗಳನ್ನು ಜೀವಂತವಾಗಿ ಮುನ್ನಡೆಸುತ್ತಿದ್ದಾರೆ. –ಶಾಸಕ, ದರ್ಶನ್.

ಅಕ್ಷರ, ಆರೋಗ್ಯ ದಾಸೋಹ ಕ್ಷೇತ್ರಗಳಲ್ಲಿ ಮಠದ ಸೇವಾ ಕಾರ್ಯವನ್ನು ಜಗತ್ ವಿಖ್ಯಾತಿಗೊಳಿಸಿದ್ದಾರೆ. ಅಂತಹ ಶ್ರೀಗಳ ಸಂಸ್ಮರಣೀಯ ಕಾರ್ಯವನ್ನು ನಂಜನಗೂಡಿನ ನಾಗರಿಕರು ನಡೆಸುತ್ತಿರುವುದು ಶ್ಲಾಘನೀಯ ಎಂದರು.


ಮಾಜಿ ಶಾಸಕ ಬಿ.ಹರ್ಷವರ್ಧನ್ ಮಾತನಾಡಿ, ಡಾ. ಶ್ರೀಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ದೈವಿಕ ಶಕ್ತಿಯ ಪ್ರೇರಣೆಯಿಂದಾಗಿ ತಮ್ಮ 12ನೇ ವಯಸ್ಸಿನಲ್ಲಿಯೇ ಮಠದ ಅಧಿಕಾರ ವಹಿಸಿಕೊಂಡು ಕಡು ಬಡವರು, ಜನಸಾಮಾನ್ಯರಿಗೆ ಸೇವೆ ಮಾಡುವ ಮನೋಭಾವ ಹಾಗೂ ಅವರಲ್ಲಿದ್ದ ಮಾತೃ ಹೃದಯದ ಕಾರಣದಿಂದಾಗಿ ಅನ್ನ, ಅಕ್ಷರ ಮತ್ತು ಆರೋಗ್ಯ ದಾಸೋಹದ ಮೂಲಕ ಇಡೀ ರಾಜ್ಯದಲ್ಲಿ ಕ್ರಾಂತಿ ಮಾಡಿದ್ದಾರೆ. ಜೊತೆಗೆ ಸಮಾಜದಲ್ಲಿರುವ ಅಸ್ಪೃಶ್ಯತೆ ದೂರ ಮಾಡಲು ಅಸ್ಪೃಶ್ಯರ ಜೊತೆಗೆ ಸಹಪಂಕ್ತಿ ಭೋಜನ ನಡೆಸಿ ಜನರಲ್ಲಿ ಜಾಗೃತಿ ಮೂಡಿಸಿ ಮೇಲು ಕೀಳು ಭಾವನೆಯನ್ನು ದೂರ ಮಾಡಲು ಶ್ರಮಿಸಿದವರು. ಈಗಿನ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಸಹಕಾರದಿಂದಾಗಿ ನಂಜನಗೂಡಿನಲ್ಲಿ ಕಳೆದ 45 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ನಗು ಏತ ನೀರಾವರಿ ಯೋಜನೆ ಜಾರಿಗೊಳಿಸಲು ಸಾಧ್ಯವಾಯಿತು ಎಂದರು.

ಸಮಾರಂಭದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳು ಮತ್ತು ಸಾಧಕ ರೈತರನ್ನು ಸನ್ಮಾನಿಸಿ ಗೌರವಿಸಲಾಯಿತು. ಇದಕ್ಕೂ ಮುನ್ನ ಶ್ರೀಕಂಠೇಶ್ವರ ದೇವಾಲಯದ ಆವರಣದಿಂದ ಡಾ.ಶ್ರೀಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ ಪುತ್ಥಳಿಯನ್ನು ಬೆಳ್ಳಿರಥದಲ್ಲಿ ವಿವಿಧ ಜಾನಪದ ಕಲಾತಂಡಗಳೊಂದಿಗೆ ಅದ್ದೂರಿಯಾಗಿ ಮೆರವಣಿಗೆ ಮಾಡಲಾಯಿತು. ಮೆರವಣಿಗೆಯು ಆರ್‌ಪಿ ರಸ್ತೆ ಮೂಲಕ ಸಾಗಿ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಅಂತ್ಯಗೊಂಡಿತು.

ಸಮಾರಂಭದಲ್ಲಿ ದೇವನೂರು ಮಠದ ಶ್ರೀಮಹಾಂತ ಸ್ವಾಮೀಜಿ, ಇಮ್ಮಡಿ ಸಿದ್ಧಲಿಂಗ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸಿ.ಸೋಮಶೇಖರ ನುಡಿನಮನ ಸಲ್ಲಿಸಿದರು. ಮಾಜಿ ಶಾಸಕ ಕೇಶವಮೂರ್ತಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಎಸ್.ಎಂ.ಕೆಂಪಣ್ಣ, ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮಾಜಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ, ಜಿಪಂ ಮಾಜಿ ಸದಸ್ಯ ಮಂಗಳಾ ಸೋಮಶೇಖರ್, ಮುಖಂಡರಾದ ಯು.ಎನ್.ಪದ್ಮನಾಭರಾವ್, ಕೃಷ್ಣಪ್ಪ, ಬಿ.ಎಸ್.ಮಹದೇವಪ್ಪ ಎಂ.ಮಾದಪ್ಪ ಕುಳ್ಳಯ್ಯ, ಹೆಚ್.ಬಿ.ರೇವಣ್ಣ, ಮಹೇಶ್, ಗುರುಸ್ವಾಮಿ, ಪ್ರಾಂಶುಪಾಲ ಹೊನ್ನೇಗೌಡ, ಪ್ರಾಧ್ಯಾಪಕ ಪ್ರಭುಸ್ವಾಮಿ ಇತರರಿದ್ದರು.


ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಭಾವಚಿತ್ರಕ್ಕೆ ಶ್ರೀಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಪುಷ್ಪಾರ್ಚನೆ ಮಾಡಿದರು.

ವಾಲಿಬಾಲ್ ಪಂದ್ಯಾವಳಿಗೆ ಮಾಜಿ ಶಾಸಕರಿಂದ ಚಾಲನೆ


ಪಂದ್ಯಾವಳಿಯನ್ನು ಮಾಜಿ ಶಾಸಕ ಮಂಜುನಾಥ್ ಉದ್ಘಾಟಿಸಿದರು.

ಹುಣಸೂರು, ಅ.23– ದೀಪಾವಳಿ ಹಬ್ಬದ ಪ್ರಯುಕ್ತ ತಾಲೂಕಿನ ಧರ್ಮಾಪುರದ ವಾಲ್ಮೀಕಿ ಯುವಕರ ಸಂಘದಿಂದ ಆಯೋಜಿಸಿದ್ದ ತಾಲೂಕು ಮಟ್ಟದ ವಾಲ್ಮೀಕಿ ಕ್ರೀಡಾ ಕಪ್– ವಾಲಿಬಾಲ್ ಲೀಗ್ ಪಂದ್ಯಾವಳಿಗೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು ಕಾಲೇಜು ದಿನಗಳಿಂದಲೂ ಕ್ರೀಡಾಕೂಟ ನಡೆಸುವವರಿಗೆ ಸಹಕಾರ ನೀಡುತ್ತಿದ್ದೇನೆ. ನಾನು ಶಾಸಕನಾಗಿದ್ದಾಗ ನೂರಾರು ರಾಜ್ಯ ಮಟ್ಟದ ವಾಲಿಬಾಲ್ ಪಂದ್ಯಾವಳಿಗಳನ್ನು ಆಯೋಜಿಸಿ ಪ್ರೋತ್ಸಾಹಿಸಿದ್ದೇನೆ. ಮುಂದೆಯೂ ಸಹಕರಿಸುತ್ತೇನೆ ಎಂದರು.

ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನಗಳಿಸಿದ ಬನ್ನಿಕುಪ್ಪೆ ಚೇತು ಫ್ರೆಂಡ್ಸ್ 20 ಸಾವಿರ, ದ್ವಿತೀಯ ಸ್ಥಾನ ಧರ್ಮಾಪುರದ ಬಾವ ಬ್ರದರ್ಸ್ 15 ಸಾವಿರ, ತೃತೀಯ ಸ್ಥಾನ ಗೌರಿಪುರ ಪೈಕರ್ 10 ಸಾವಿರ, ನಾಲ್ಕನೇ ಸ್ಥಾನ ಪಡೆದ ರಾಮೇನಹಳ್ಳಿಯ ಫೆಂಟಾ ಸ್ಟಿಕ್ ಫ್ರೆಂಡ್ಸ್ ತಂಡಕ್ಕೆ 5 ಸಾವಿರ ಹಾಗೂ ಟ್ರೋಫಿಯನ್ನು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ವಿತರಿಸಿದರು.

ಈ ವೇಳೆ ಗ್ರಾಪಂ ಅಧ್ಯಕ್ಷ ವಿ.ಮಹದೇವ್, ದೇವರಾಜ್, ಡಿ.ಕೆ.ಕುನ್ನೇಗೌಡ, ತಾಪಂ ಮಾಜಿ ಸದಸ್ಯ ಅಜ್ಗರ್ ಪಾಷ, ವಾಲ್ಮೀಕಿ ಸಂಘದ ಅಧ್ಯಕ್ಷ ನಾರಾಯಣ ನಾಯಕ, ಕೃಷ್ಣನಾಯಕ, ವಾಲ್ಮೀಕಿ ಸ್ವಸಹಾಯ ಸಂಘದ ಅಧ್ಯಕ್ಷ ಶಿವನಾಯಕ, ಮುಖಂಡರಾದ ಚಂದ್ರನಾಯಕ, ಸಂಘಟನಾ ಸಮಿತಿಯ ಮಾಧು, ಶಿವು, ಸೋಮು, ಕೃಷ್ಣ, ಪಿ.ಟಿ.ಮಹದೇವ್ ಸೇರಿದಂತೆ ಇತರರಿದ್ದರು.

ಬೆಟ್ಟದಪುರದಲ್ಲಿ ಅದ್ದೂರಿ ದೀಪಾವಳಿ ದೀವಟಿಗೆ ಉತ್ಸವ

ಬೆಟ್ಟದಪುರ, ಅ.23– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದಲ್ಲಿ ದೀಪಾವಳಿ ದೀವಟಿಗೆ ಉತ್ಸವ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಮಂಗಳವಾರ ರಾತ್ರಿ 8 ಗಂಟೆಗೆ ಭಕ್ತರು ಸಿಡಿಲು ಮಲ್ಲಿಕಾರ್ಜುನಸ್ವಾಮಿ, ಬೆಳ್ಳಿ ಬಸಪ್ಪನನೊಂದಿಗೆ ಬೆಟ್ಟಕ್ಕೆ ಹತ್ತಿ ರಾತ್ರಿ ಇಡೀ ಪೂಜೆ ಸಲ್ಲಿಸಿದರು. ಬುಧವಾರ ಮುಂಜಾನೆ 6 ಗಂಟೆಗೆ ಬೆಟ್ಟದಿಂದ ದೇವರನ್ನು ತಂದು ಗ್ರಾಮದ ಮಲ್ಲಿಕಾರ್ಜುನಸ್ವಾಮಿ ದೇವಾಲಯದಲ್ಲಿ ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಿದರು.

ಬಳಿಕ ದೇವರನ್ನು ಭಕ್ತರು ದೀವಟಿಗೆ ಸೇವೆಗಳೊಂದಿಗೆ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಬೆಟ್ಟದ ಸುತ್ತ ಇರುವ ಹಳ್ಳಿಗಳಾದ ಬೆಟ್ಟದಪುರ, ಹರದೂರು, ಬೆಟ್ಟದ ತುಂಗ, ಕುಡಕೂರು, ಕುಡುಕೂರು ಕೊಪ್ಪಲು, ಬಾರಸೆ ಕೂರ್ಗಲ್ಲು, ಭುವನಹಳ್ಳಿ, ಜೋಗನಹಳ್ಳಿ, ಕೂಣಸೂರು ಗ್ರಾಮಗಳಲ್ಲಿ ಹಸಿರು ಚಪ್ಪರದಡಿ ಅಲಂಕೃತ ಮಂಟಪದಡಿ ಪೂಜೆ ನಡೆಸಿದರು. ಈ ವೇಳೆ ಸಾವಿರಾರು ದೀವಟಿಗೆ ಹಿಡಿದ ಭಕ್ತರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಸುಮಾರು 2 ಲಕ್ಷಕ್ಕೂ ಹೆಚ್ಚು ಮಂದಿ ಬೆಟ್ಟ ಹತ್ತಿ ಮಲ್ಲಿಕಾರ್ಜುನಸ್ವಾಮಿಗೆ ಪೂಜೆ ಸಲ್ಲಿಸಿ ಇಷ್ಟಾರ್ಥ ಸಿದ್ದಿಗಾಗಿ ಪ್ರಾರ್ಥಿಸಿದರು.

ಬೆಟ್ಟದಪುರದ ವೀರಶೈವ ಲಿಂಗಾಯತ ಸಮಾಜ ಹಾಗೂ ಗ್ರಾಮಸ್ಥರ ಸಹಕಾರದೊಂದಿಗೆ ಬೆಟ್ಟದಪುರದ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ ನೇತೃತ್ವದಲ್ಲಿ ಭಕ್ತರಿಗೆ ಅನ್ನದಾನ ಏರ್ಪಡಿಸಲಾಯಿತು.

ದೇವರ ಉತ್ಸವದ ನೇತೃತ್ವವನ್ನು ಪ್ರಧಾನ ಅರ್ಚಕ ಸತೀಶ್ ಕಶ್ಯಪ್ ವಹಿಸಿದ್ದರು. ಅಲ್ಲದೇ ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು.


ಬೆಟ್ಟದಪುರದಲ್ಲಿ ದೀಪಾವಳಿ ದೀವಟಿಗೆ ಉತ್ಸವ ನಡೆಯಿತು.

ಈ ವೇಳೆ ಬೆಟ್ಟದಪುರ ವೀರಶೈವ ಲಿಂಗಾಯತ ಸಮಾಜದ ಗೌರವಾಧ್ಯಕ್ಷ ನಾಗಣ್ಣ, ಗೌರವ ಸಲಹೆಗಾರ ತೋಟಪ್ಪಶೆಟ್ಟಿ, ಶಿವಕುಮಾರಸ್ವಾಮಿ, ಅಧ್ಯಕ್ಷ ಶಿವದೇವ್, ಉಪಾಧ್ಯಕ್ಷ ರುದ್ರೇಶ್, ಪ್ರಧಾನ ಕಾರ್ಯದರ್ಶಿ ಶಿವು, ಖಜಾಂಚಿ ಬಿ.ಸಿ.ರಾಜೇಂದ್ರ, ಕಾರ್ಯದರ್ಶಿ ಮಹದೇವಪ್ಪ, ನಿರ್ದೇಶಕರಾದ ರಾಜು, ಶಿಕ್ಷಕ ಮಹದೇವಪ್ಪ, ಮಂಜುನಾಥ್, ಎಸ್.ಮಲ್ಲೇಶ್, ಶಿವಮೂರ್ತಿ ಅರ್ಚಕರಾದ ಸುಬ್ಬಣ್ಣ, ರಜನಿಕಾಂತ್, ನಂಜುಂಡ, ಸ್ವಾಮಿ, ನಟರಾಜ್, ಈರುಳ್ಳಿ ಮಲ್ಲೇಶ್, ನಂದಕುಮಾರ್, ನಿವೃತ್ತ ನೌಕರ ಉಮಾಶಂಕರ್ ಸೇರಿದಂತೆ ಇತರರಿದ್ದರು.

ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷರಿಗೆ ಶ್ರದ್ಧಾಂಜಲಿ


ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಕಾರ್ಗಳ್ಳಿ ಶಿವಸ್ವಾಮಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ತಿ.ನರಸೀಪುರ, ಅ.23– ಇತ್ತೀಚೆಗೆ ನಿಧನರಾದ ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಕಾರ್ಗಳ್ಳಿ ಶಿವಸ್ವಾಮಿ ಅವರಿಗೆ ತಿ.ನರಸೀಪುರ ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಪಟ್ಟಣದ ಪಿಎಲ್‌ಡಿ ಬ್ಯಾಂಕ್ ಸಭಾಂಗಣದಲ್ಲಿ ಕಾರ್ಗಳ್ಳಿ ಶಿವಸ್ವಾಮಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ, ಶಿವಸ್ವಾಮಿ ಅವರು ಸರಳ ಸಜ್ಜನಿಕೆ ವ್ಯಕ್ತಿಯಾಗಿದ್ದು, ಅವರು ಅಧ್ಯಕ್ಷರಾಗಿದ್ದಾಗ ರೈತರಿಗೆ ಬೆಳೆ ಸಾಲ ಸೇರಿದಂತೆ ಮತ್ತಿತರ ಶಾಶ್ವತವಾಗಿ ಉಳಿಯುವ ಕೆಲಸ ಮಾಡಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಇನ್ನು ಹೆಚ್ಚಿನ ಅಭಿವೃದ್ಧಿ ಮಾಡಲು ಮುಂದಾಗುತ್ತೇವೆ ಎಂದರು.

ಪೀಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ಮಾತನಾಡಿ, ಹಿಂದೆ ಇದ್ದ ಬ್ಯಾಂಕ್ ಸೌಲಭ್ಯಗಳ ಪೈಕಿ ಯಾವ ವರ್ಗಕ್ಕೆ ಏನೇನು ಕೊಡಬೇಕು ಎಂಬುದನ್ನು ಮೊದಲೇ ಶಿವಸ್ವಾಮಿ ಅವರು ಪಟ್ಟಿ ತಯಾರಿಸುತ್ತಿದ್ದರು ಎಂದು ಸ್ಮರಿಸಿದರು.

ಉಪಾಧ್ಯಕ್ಷ ಎನ್.ಎನ್.ಮಹದೇವಸ್ವಾಮಿ, ವ್ಯವಸ್ಥಾಪಕ ಮಹೇಶ್, ನಿರ್ದೇಶಕರಾದ ಎನ್.ಅನಿಲ್ ಕುಮಾರ್, ಎನ್.ನಿಂಗಪ್ಪ, ಮಹೇಶ್, ಟಿ.ಎಸ್.ಪ್ರಸನ್ನ, ಎಂ.ನಾಗರತ್ನ, ರಾಜಮ್ಮಣಿ ನಾಗೇಶ್, ನಾಮ ನಿರ್ದೇಶಕ ಶಿವಕುಮಾರ್, ಸಿಬ್ಬಂದಿ ಪ್ರಭುಸ್ವಾಮಿ, ನಾಗರತ್ನಬಾಯಿ, ತನುಜಾ, ಶಂಕರ್ ಇದ್ದರು.

ಸಮಾಜ ಸೇವಕ ಎಸ್.ಶ್ರೀಕಾಂತ್‌ಗೆ ಸನ್ಮಾನ


ಮೈಸೂರು ತಾಲೂಕಿನ ದಾರಿಪುರದ ಗುರುಕರೂರು ಸ್ವಾಮಿ ದೇವಾಲಯದಲ್ಲಿ ದೀಪಾವಳಿ ಹಬ್ಬದ ಪ್ರಯುಕ್ತ ದೇವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಈ ವೇಳೆ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು.



ಅಧಿಕಾರ ಸ್ವೀಕಾರ

ಮೈಸೂರು ತಾಲೂಕಿನ ಡಿ.ಸಾಲುಂಡಿ ಗ್ರಾಮದ ಡಾ. ಹೆಚ್.ಬೀರಪ್ಪ ಅವರನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಶೈಕ್ಷಣಿಕ ಮಂಡಳಿ ಸದಸ್ಯರಾಗಿ ರಾಜ್ಯ ಸರ್ಕಾರ ನಾಮ ನಿರ್ದೇಶನಗೊಳಿಸಿದ್ದು, ಅವರು ಇಂದು ಕುಲಪತಿ ಪ್ರೊ. ರಮೇಶ್ ಅವರನ್ನು ಅಭಿನಂದಿಸಿದರು.

ವಿಜೃಂಭಣೆಯ ಶ್ರೀಸಿದ್ದೇಶ್ವರಸ್ವಾಮಿ ರಥೋತ್ಸವ


ಸಿದ್ದೇಶ್ವರಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ನಂಜನಗೂಡು, ಅ.23– ತಾಲೂಕಿನ ಕಾರ್ಯ ಗ್ರಾಮದ ಶ್ರೀಸಿದ್ದೇಶ್ವರಸ್ವಾಮಿ ಬೆಟ್ಟದಲ್ಲಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ಸಿದ್ದೇಶ್ವರಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಮುಂಜಾನೆಯಿಂದಲೇ ದೇವಾಲಯದಲ್ಲಿ ಸಿದ್ದೇಶ್ವರ ಸ್ವಾಮಿಗೆ ವಿಶೇಷ ಪೂಜೆ ನೆರವೇರಿಸಿ, ಮಹಾಮಂಗಳಾರತಿ ಮಾಡಿ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು. ಈ ವೇಳೆ ರಾಜ್ಯದ ನಾನಾ ಮೂಲೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಅಲ್ಲದೇ ಭಕ್ತರ ಸಂಖ್ಯೆ ಹೆಚ್ಚಾಗಿದ್ದರಿಂದ ನೂಕು ನುಗ್ಗಲು ಉಂಟಾಯಿತು.

ಇದೇ ವೇಳೆ ಕಾರ್ಯ ಗ್ರಾಮದಲ್ಲಿ ಸಿದ್ದೇಶ್ವರ ಸ್ವಾಮಿ ಉತ್ಸವ ಮೂರ್ತಿಯನ್ನು ಅಲಂಕರಿಸಿದ್ದ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ, ವಿವಿಧ ಹೂ, ಹೊಂಬಾಳೆ, ಚಾಮರ, ಬಣ್ಣ ಬಣ್ಣದ ಬಟ್ಟೆಗಳಿಂದ ಸಿಂಗರಿಸಿದ್ದ ರಥೋತ್ಸವಕ್ಕೆ ವಾಟಾಳು ಮಠದ ಶ್ರೀಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಚಾಲನೆ ನೀಡಿದರು. ಭಕ್ತರು ದೇವರಿಗೆ ಜೈಕಾರ ಹಾಕುತ್ತಾ ರಥವನ್ನು ಬೆಟ್ಟದ ತಪ್ಪಲಿಗೆ ಎಳೆದು ತಂದರು. ನಂತರ ರಥದಿಂದ ಪಲ್ಲಕ್ಕಿ ಬೇರ್ಪಡಿಸಿ ಭಕ್ತರು ಉತ್ಸವಮೂರ್ತಿ ಸಮೇತ ಪಲ್ಲಕ್ಕಿ ಹೊತ್ತುಕೊಂಡು ಬೆಟ್ಟ ಏರಿದರು.

ಬೆಟ್ಟದ ಮೇಲೆ ಹಾಗೂ ತಪ್ಪಲಿನ ಆಯಕಟ್ಟಿನ ಸ್ಥಳಗಳಲ್ಲಿ ಜಾತ್ರೆಗೆ ಆಗಮಿಸಿದ ಭಕ್ತರಿಗೆ ಸೇವಾರ್ಥದಾರರು ಪ್ರಸಾದ ವಿನಿಯೋಗ ಮಾಡಿದರು. ಜಾತ್ರಾ ಮಹೋತ್ಸವಕ್ಕೆ ಬೆಂಗಳೂರು, ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಅವಾಚ್ಯ ಶಬ್ದಗಳಿಂದ ನಾಯಕ ಸಮುದಾಯ ನಿಂದನೆ ಖಂಡಿಸಿ

ಮಾಜಿ ಸಂಸದ ರಮೇಶ್ ಕತ್ತಿ ವಿರುದ್ಧ ಪ್ರತಿಭಟನೆ

ನಂಜನಗೂಡು, ಅ.23– ಅವಾಚ್ಯ ಶಬ್ದಗಳಿಂದ ನಾಯಕ ಸಮುದಾಯವನ್ನು ನಿಂದಿಸಿರುವ ಮಾಜಿ ಸಂಸದ ರಮೇಶ್ ಕತ್ತಿ ಅವರನ್ನು ಬಂಧಿಸಿ, ಶಿಕ್ಷೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿ ತಾಲೂಕು ನಾಯಕರ ಸಂಘದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಬಳಿ ಜಮಾಯಿಸಿದ ನಾಯಕ ಸಮುದಾಯದ ಮುಖಂಡರು ಮತ್ತು ಕಾರ್ಯಕರ್ತರು ರಮೇಶ್ ಕತ್ತಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು ಮಾತನಾಡಿ, ವಾಲ್ಮೀಕಿ ಜನಾಂಗ ರಾಜ್ಯದಲ್ಲಿ 50 ಲಕ್ಷಗಳಿಗಿಂತ ಹೆಚ್ಚಾಗಿದ್ದು, ಜನಸಂಖ್ಯೆಯಲ್ಲಿ 4ನೇ ಸ್ಥಾನದಲ್ಲಿದೆ. ನಮ್ಮ ಜನಾಂಗವನ್ನು ಬೇಡ, ನಾಯಕ, ವಾಲ್ಮೀಕಿ ಎಂದು ಕರೆಯಲಾಗುತ್ತದೆ. ಡಿಸಿಸಿ ಬ್ಯಾಂಕ್ ಚುನಾವಣೆ ವೇಳೆ ಸಾರ್ವಜನಿಕವಾಗಿ ಮಾಜಿ ಸಂಸದ ರಮೇಶ್ ಕತ್ತಿ ನಾಯಕ ಸಮುದಾಯವನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿರುವುದು ಖಂಡನೀಯ. ಅವರು ಸಾರ್ವಜನಿಕ ಜೀವನದಲ್ಲಿ ಇದ್ದರೂ ಸಹ ಅವಿವೇಕಿಗಳಂತೆ ಮಾತನಾಡಿದ್ದಲ್ಲದೆ, ರಾಜ್ಯಾದ್ಯಂತ ಅವರ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ಸಂಬಂಧ ಮಾಧ್ಯಮ ಹೇಳಿಕೆಯಲ್ಲಿ ಅವರಿಗೆ ಸಮಾಜದ ಬಲವಿದ್ದರೆ ನಮಗೆ ಸಮಾಜದ ಬಲವಿಲ್ಲವೇ ಎಂದು ಹೇಳಿಕೆ ನೀಡುವ ಮೂಲಕ ಶಾಂತಿ ಕದಡಲು ಯತ್ನಿಸಿದ್ದಲ್ಲದೆ ನಾನು ಜಾತಿ ನಿಂದನೆ ಮಾಡಿದರೂ ಸಹ ಜಯಿಸಿಕೊಳ್ಳುತ್ತೇನೆ ಎಂಬ ಭಾವನೆಯಿಂದ ಮಾತನಾಡಿರುವುದರಿಂದ ರಾಜ್ಯ ಸರ್ಕಾರ ಮತ್ತು ಗೃಹ ಸಚಿವರು ಈ ಕೂಡಲೇ ಅವರ ವಿರುದ್ಧ ಜಾತಿ ನಿಂದನೆ ದೂರು ದಾಖಲಿಸಿ ಅವರನ್ನು ಕಠಿಣ ಶಿಕ್ಷೆಗೆ ಒಳಪಡಿಸಬೇಕು. ಇಲ್ಲವಾದಲ್ಲಿ ಪ್ರತಿಭಟನೆ ತೀವ್ರಗೊಳಿಸಲಾಗುವುದು ಎಂದರು.

ತಾಲೂಕು ನಾಯಕ ಸಂಘದ ಅಧ್ಯಕ್ಷ ನಾಗರಾಜು ಮಾತನಾಡಿ, ನಾಯಕ ಸಮುದಾಯವನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಸಮುದಾಯಕ್ಕೆ ನೋವುಂಟು ಮಾಡಿರುವ ರಮೇಶ್ ಕತ್ತಿ ಅವರನ್ನು ಗಡಿಪಾರು ಶಿಕ್ಷೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದರು.

ಈ ಸಂಬಂಧ ನಂಜನಗೂಡು ಡಿವೈಎಸ್ಪಿ ಕಚೇರಿಯಲ್ಲಿ ರಮೇಶ್ ಕತ್ತಿ ವಿರುದ್ಧ ಜಾತಿ ನಿಂದನೆ ದೂರು ದಾಖಲಿಸಿ, ತಹಸೀಲ್ದಾರ್‌ಗೆ ಮನವಿ ಸಲ್ಲಿಸಲಾಯಿತು.

ನಗರ್ಲೆ ಗ್ರಾಪಂ ಮಾಜಿ ಅಧ್ಯಕ್ಷ ಪ್ರಮೋದ್, ದೊರೆಸ್ವಾಮಿ ನಾಯಕ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠ ನಾಯಕ, ಶಿವಕುಮಾರ್, ಶಿವನಂಜ ನಾಯಕ, ಹೊಣಕಾರ ನಾಯಕ, ನಾಗೇಂದ್ರ, ತಗಡೂರು ನಾಯಕ, ರಮೇಶ್, ಅರುಣ, ಆನಂದ್, ರಂಗಸ್ವಾಮಿ, ನಾರಾಯಣ, ಲಕ್ಷ್ಮಣ, ಸಿದ್ದರಾಜು ಸೇರಿದಂತೆ ಇತರರಿದ್ದರು.


ಮಾಜಿ ಸಂಸದ ರಮೇಶ್ ಕತ್ತಿ ಬಂಧನಕ್ಕೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

ಸಾಮೂಹಿಕ ಗೋ ಹತ್ಯೆ ತಡೆದ ದ್ವೇಷಕ್ಕೆ

ಕೆಲವರಿಂದ ನನ್ನ ಮೇಲೆ ಹಲ್ಲೆ, ಮಾನಭಂಗಕ್ಕೆ ಯತ್ನ

ಸಾಮಾಜಿಕ ಕಾರ್ಯಕರ್ತೆ ಜ್ಯೋತಿ ಆರೋಪ



ತಿ.ನರಸೀಪುರ, ಅ.23– ಸಾಮೂಹಿಕ ಗೋ ಹತ್ಯೆ ತಡೆದ ದ್ವೇಷಕ್ಕೆ ತಾಲೂಕಿನ ಕೊಳತ್ತೂರು ಗ್ರಾಪಂ ಆವರಣದಲ್ಲಿ ಅ.18 ರಂದು ಗ್ರಾಮಸಭೆ ನಡೆಯುತ್ತಿದ್ದ ವೇಳೆ ಗ್ರಾಮದ ಕೆಲವು ಮುಖಂಡರು, ಪಿಡಿಓ ಮತ್ತು ಸದಸ್ಯರ ಎದುರು ನನ್ನ ಮೇಲೆ ದೈಹಿಕ ಹಲ್ಲೆ ನಡೆಸಿ, ಮಾನಭಂಗಕ್ಕೆ ಯತ್ನಿಸಿದ ಸಂಬಂಧ ತಲಕಾಡು ಪೊಲೀಸ್ ಠಾಣೆಗೆ ದೂರು ನೀಡಿದ್ದೇನೆ ಎಂದು ಸಾಮಾಜಿಕ ಕಾರ್ಯಕರ್ತೆ ಜ್ಯೋತಿ ತಿಳಿಸಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮದವಳೇ ಆದ ನಾನೂ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಅಭಿವೃದ್ಧಿ ಕಾಮಗಾರಿ ಮಾಡಿಸಿದ್ದರಿಂದ ಆ ಸಂಬಂಧ ಮಾಹಿತಿ ಪಡೆಯಲು ಸಭೆಯಲ್ಲಿ ಪ್ರಶ್ನೆ ಕೇಳುವಾಗ ಮಹಿಳೆಯೊಬ್ಬರು ನನ್ನೊಂದಿಗೆ ಹಣಕಾಸಿನ ವಿಚಾರಕ್ಕೆ ಖ್ಯಾತೆ ತೆಗೆದರು. ಆ ವೇಳೆ ಮಹದೇವಸ್ವಾಮಿ ಹಾಗೂ ಸೋಮಣ್ಣ ಎಂಬುವರು ನನ್ನ ಮೇಲೆ ಹಲ್ಲೆ ನಡೆಸಿ, ಸೀರೆ ಸೆರಗು ಎಳೆದು ಅತ್ಯಾಚಾರಕ್ಕೆ ಯತ್ನಿಸಿದ್ದಾರೆ. ಈ ಬಗ್ಗೆ ತಲಕಾಡು ಠಾಣೆಗೆ ದೂರು ನೀಡಿದರೂ ಇದುವರೆಗೂ ಆರೋಪಿಗಳ ಮೇಲೆ ಇನ್ಸ್‌ಪೆಕ್ಟರ್ ಆನಂದ ಕುಮಾರ್ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ದೌರ್ಜನ್ಯ ನಡೆಸಿದವರ ಜೊತೆ ಶಾಮೀಲಾಗಿದ್ದಾರೆ ಎಂದು ದೂರಿದರು.

ತಲಕಾಡು ಠಾಣೆಗೆ ತೆರಳಿ ಹಲ್ಲೆ ಮತ್ತು ಮಾನಭಂಗ ಯತ್ನ ಸಂಬಂಧ ದೂರು ನೀಡಿದರೆ ಕರ್ತವ್ಯ ನಿರತ ಪೊಲೀಸರು ಇನ್ಸ್‌ಪೆಕ್ಟರ್ ಬರುವವರೆಗೆ ದೂರು ಸ್ವೀಕರಿಸಲ್ಲ ಎಂದು ಸತಾಯಿಸಿ, ಕಾಯುವಂತೆ ಮಾಡಿದರು. ತಡರಾತ್ರಿ ತಡವಾಗಿ ಆಗಮಿಸಿದ ಇನ್ಸ್‌ಪೆಕ್ಟರ್ ಆನಂದ್ ಕುಮಾರ್ ಅವರು ನನ್ನ ದೂರನ್ನು ಗಂಭೀರವಾಗಿ ಪರಿಗಣಿಸದೆ ಉಡಾಫೆಯಿಂದ ವರ್ತಿಸಿದರು. ಗ್ರಾಪಂ ಆವರಣದಲ್ಲಿನ ಗ್ರಾಮಸಭೆ ಸಂಘರ್ಷದ ವೇಳೆ ಹಣ ಮತ್ತು ದಾಖಲೆಗಳಿದ್ದ ವ್ಯಾನಿಟಿ ಬ್ಯಾಗ್ ಹಾಗೂ ನಮ್ಮ ಮನೆಯವರ ಬೈಕ್ ಕಳುವಾಗಿದೆ ಎಂದು ದೂರಿದರೂ ಕಿವಿಗೆ ಹಾಕಿಕೊಳ್ಳಲಿಲ್ಲ. ಈ ಎಲ್ಲಾ ಘಟನಾವಳಿಗಳು ಗ್ರಾಪಂ ಸಿಸಿ ಟಿವಿ ಕ್ಯಾಮರಾಗಳಲ್ಲಿ ದಾಖಲಾಗಿದೆ ಹಾಗಾಗಿ ಹಿರಿಯ ಪೊಲೀಸ್ ಅಧಿಕಾರಿಗಳು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ನನ್ನ ಮೇಲೆ ದೌರ್ಜನ್ಯ ನಡೆಸಿರುವ ಆರೋಪಿಗಳ ವಿರುದ್ಧ ಕಾನೂನು ಕ್ರಮ ಜರುಗಿಸ ಬೇಕು. ರಾತ್ರಿ ಹೊತ್ತಲ್ಲಿ ದೂರು ಸ್ವೀಕರಿಸಿ, ರಕ್ಷಣೆ ನೀಡಲು ಮುಂದಾಗದ ಇನ್ಸ್‌ಪೆಕ್ಟರ್ ಆನಂದ್ ಕುಮಾರ್ ವಿರುದ್ಧವೂ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ಸುಂದರ್‌ರಾಜ್, ಮುಖಂಡ ರಮೇಶ್ ಕೊಳತ್ತೂರು ಇದ್ದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಿನಲ್ಲಿ


ಕನ್ನಡ ಸಾಹಿತ್ಯ ಭವನಕ್ಕೆ ನಿವೇಶನ, ಅನುದಾನ ಮಂಜೂರು

ಕನ್ನಡ ರಾಜ್ಯೋತ್ಸವ ಪೂರ್ವಭಾವಿ ಸಭೆಯಲ್ಲಿ ಶಾಸಕ ಡಿ.ರವಿಶಂಕರ್ ಭರವಸೆ

ಕೆ.ಆರ್.ನಗರ, ಅ.23– ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರಿನಲ್ಲಿ ಪಟ್ಟಣದಲ್ಲಿ ಕನ್ನಡ ಸಾಹಿತ್ಯ ಭವನ ನಿರ್ಮಾಣಕ್ಕೆ ನಿವೇಶನ ಕೊಡಿಸುವ ಜೊತೆಗೆ ಅನುದಾನ ನೀಡುವುದಾಗಿ ಶಾಸಕ ಡಿ.ರವಿಶಂಕರ್ ಭರವಸೆ ನೀಡಿದರು.

ಪಟ್ಟಣದ ತಾಲೂಕು ಆಡಳಿತಸೌಧದ ಕೃಷ್ಣರಾಜೇಂದ್ರ ಸಭಾಂಗಣದಲ್ಲಿ ತಾಲೂಕು ನಾಡಹಬ್ಬಗಳ ಆಚರಣಾ ಸಮಿತಿಯಿಂದ ನಡೆದ ಕನ್ನಡ ರಾಜ್ಯೋತ್ಸವ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಎಲ್ಲಾ ಇಲಾಖೆಯವರು ಆಕರ್ಷಕ ಸ್ತಬ್ಧ ಚಿತ್ರಗಳನ್ನು ನಿರ್ಮಿಸಬೇಕೆಂದು ತಿಳಿಸಿದ ಅವರು, 3 ದಿನಕ್ಕೂ ಮುನ್ನಾ ನನಗೆ ಈ ಸಂಬಂಧ ವರದಿ ನೀಡಬೇಕೆಂದು ಸೂಚಿಸಿದರು.

ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದ ಹಿಂದುಳಿದ ವರ್ಗಗಳ ನಾಯಕ ದಿ.ಡಿ.ದೇವರಾಜ ಅರಸು ಮತ್ತು ಕನ್ನಡ ಸಾಹಿತ್ಯ ಪರಿಷತ್ ಆರಂಭಿಸಿದ ಕೆ.ಆರ್.ನಗರದ ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಲಾಗುವುದು ಎಂದರು.


ಕನ್ನಡ ರಾಜ್ಯೋತ್ಸವ ಪೂರ್ವಭಾವಿ ಸಭೆಯಲ್ಲಿ ಶಾಸಕ ಡಿ.ರವಿಶಂಕರ್ ಮಾತನಾಡಿದರು.

ನ.1ರಂದು ಬೆಳಗ್ಗೆ 9 ಗಂಟೆಗೆ ಪಟ್ಟಣದ ಕೃಷ್ಣರಾಜೇಂದ್ರ ಸರ್ಕಾರಿ ಬಾಲಕರ ಪದವಿಪೂರ್ವ ಕಾಲೇಜಿನ ಆವರಣದಿಂದ ತಾಯಿ ಭುವನೇಶ್ವರಿ ಪ್ರತಿಮೆ ಮೆರವಣಿಗೆ ಆರಂಭವಾಗಲಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದರು.

ಸರ್ಕಾರಿ ಕಚೇರಿಗಳಿಗೆ ಕಡ್ಡಾಯವಾಗಿ ವಿದ್ಯುತ್ ದೀಪಾಲಂಕಾರ ಮಾಡಿ ಜೊತೆಗೆ ಹಸಿರು ತೋರಣ ಕಟ್ಟಿಸಿ ರಾಜ್ಯೋತ್ಸವದ ಮೆರುಗು ಹೆಚ್ಚಿಸಬೇಕು. ಪಟ್ಟಣದ ಎಲ್ಲಾ ಸರ್ಕಾರಿ ಕಚೇರಿ ಸೇರಿದಂತೆ ಅನೇಕ ಸಂಘ ಸಂಸ್ಥೆಗಳಲ್ಲಿ ಕನ್ನಡ ಬಾವುಟ ಹಾರಲಿ ಎಂದು ತಹಸೀಲ್ದಾರ್‌ಗಳಿಗೆ ತಾಕೀತು ಮಾಡಿದರು.

ತಾಲೂಕು ಕಸಾಪ ಅಧ್ಯಕ್ಷ ಡಿಂಡಿಮ ಶಂಕರ್ ಮಾತನಾಡಿ, ಕನ್ನಡದಲ್ಲಿ 125 ಅಂಕ ಪಡೆದ ವಿದ್ಯಾರ್ಥಿಗಳನ್ನು ಗೌರವಿಸಿ ಎಂದ ಅವರು ಪ್ರಗತಿಪರ ಚಿಂತನೆಗಳ ಬಗ್ಗೆ ಸಂದೇಶ ಸಾರುವ ಸ್ತಬ್ಧ ಚಿತ್ರಗಳು ಹೆಚ್ಚಾಗಬೇಕಿದೆ. ಜೊತೆಗೆ ಕನ್ನಡ ನಾಡಿನ ಸಂಸ್ಕೃತಿ, ನುಡಿ, ಸಂಪ್ರದಾಯಗಳ ಬಗ್ಗೆ ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನಲ್ಲಿ ಪ್ರಚಾರವಾಗಲಿ ಎಂದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕಟ್ಟಿದ ಕೃಷ್ಣರಾಜನಗರ ಪಟ್ಟಣದಲ್ಲಿ ಕಸಾಪ ವತಿಯಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರಿನಲ್ಲಿ ಭವನ ನಿರ್ಮಾಣಕ್ಕೆ ನಿವೇಶನ ಮಂಜೂರು ಮಾಡಿಸಿ ಕೊಡಿ ಎಂದು ಶಾಸಕರಲ್ಲಿ ಅಭಿಪ್ರಾಯ ಮಂಡಿಸಿದರು.

ಈ ವೇಳೆ ತಹಸೀಲ್ದಾರ್‌ಗಳಾದ ಜೆ.ಸುರೇಂದ್ರ ಮೂರ್ತಿ, ರುಕಿಯಾ ಬೇಗಂ, ತಾಪಂ ಇಓ ಕುಲದೀಪ್, ಎ.ರವಿ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮಹೇಶ್, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಸ್.ಮಹದೇವ್, ರಾಜ್ಯ ರೈತ ಪರ್ವ ಸಂಘದ ಗೌರವಾಧ್ಯಕ್ಷ ಜೆ.ಎಂ.ಕುಮಾರ್, ತಾಲೂಕು ಜನಪದ ಅಧ್ಯಕ್ಷ ತಿಮ್ಮಶೆಟ್ಟಿ, ತಾಲೂಕು ಚಾಲಕರ ಮತ್ತು ಮಾಲೀಕರ ಸಂಘದ ಅಧ್ಯಕ್ಷ ಸುರೇಶ್, ಸಾಲಿಗ್ರಾಮ ತಾಲೂಕು ಬಿಜೆಪಿ ಅಧ್ಯಕ್ಷ ಸಾ.ರಾ.ತಿಲಕ್, ಬಿಇಓ ಆರ್.ಕೃಷ್ಣಪ್ಪ, ಕಾರ್ಮಿಕ ನಿರೀಕ್ಷಕ ಗೋವಿಂದರಾಜು, ಕೃಷಿ ಸಹಾಯಕ ನಿರ್ದೇಶಕ ಕೆ.ಜಿ.ಮಲ್ಲಿಕಾರ್ಜುನ್, ಸಮಾಜ ಕಲ್ಯಾಣ ಇಲಾಖೆ ಹಿರಿಯ ನಿರ್ದೇಶಕ ಶಂಕರ್ ಮೂರ್ತಿ, ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕಿ ಟಿ.ಎಸ್.ಭಾರತಿ, ಲೋಕೋಪಯೋಗಿ ಇಲಾಖೆಯ ಎಇಇ ಸುಮಿತ, ಚೆಸ್ಕಾಂ ಎಇಇಗಳಾದ ಅರ್ಕೇಶ್ ಮೂರ್ತಿ, ಮಧುಸೂದನ್, ಭೂಮಾಪನ ಇಲಾಖೆಯ ನಿರ್ದೇಶಕ ಶ್ರೀಕಂಠಸ್ವಾಮಿ, ಜಿಪಂ ಜೆಇ ರವಿಕುಮಾರ್, ವಲಯ ಅರಣ್ಯಾಧಿಕಾರಿ ಹರಿಪ್ರಸಾದ್, ಅಗ್ನಿಶಾಮಕ ಅಧಿಕಾರಿ ಲಕ್ಷ್ಮೀಕಾಂತ್, ಪುರಸಭೆ ಹಿರಿಯ ಆರೋಗ್ಯ ನಿರೀಕ್ಷಕ ರಾಜೇಂದ್ರ ಸೇರಿದಂತೆ ಇತರರಿದ್ದರು.

ಮೈಸೂರು ಮಿತ್ರ

ಕುಂಬಾರಕೊಪ್ಪಲು ಮಹದೇಶ್ವರ ಜಾತ್ರೆಯ ಸಂಭ್ರಮ

ಧಾರ್ಮಿಕ ಉತ್ಸವದೊಂದಿಗೆ ಸಾಹಸ ಕ್ರೀಡೆ ಕುಸ್ತಿ ರೋಚಕತೆ



ಕುಂಬಾರಕೊಪ್ಪಲಿನ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಗುರುವಾರ ಭಕ್ತರು ಪೂಜಾ ಕೈಂಕರ್ಯ ನೆರವೇರಿಸಿದರು.



ಕುಂಬಾರಕೊಪ್ಪಲು ಮಲೆ ಮಹದೇಶ್ವರ ಜಾತ್ರಾ ಮಹೋತ್ಸವದ ಕುಸ್ತಿ ಪಂದ್ಯಾವಳಿಗೆ ಶಾಸಕ ಕೆ.ಹರೀಶ್‌ಗೌಡ ಚಾಲನೆ ನೀಡಿದರು.

ಮೈಸೂರು, ಅ.23(ವಿವಿಹೆಚ್)– ಪ್ರತಿ ವರ್ಷದಂತೆ ಈ ಬಾರಿಯೂ ಕುಂಬಾರ ಕೊಪ್ಪಲು ಗ್ರಾಮದಲ್ಲಿ ಶ್ರೀ ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಸಡಗರ, ಸಂಭ್ರಮ ಹಾಗೂ ಅದ್ಧೂರಿಯಿಂದ ಜರುಗಿತು. ಆ ಮೂಲಕ ಮೂರು ದಿನಗಳ ಕಾಲ ನಡೆದ ಈ ಜಾತ್ರೆಯಲ್ಲಿ ಭಕ್ತರು ಪರಂಪರೆ ಮತ್ತು ಭಾವೈಕ್ಯತೆಯೊಂದಿಗೆ ಭಕ್ತಿಯ ಪರಾಕಾಷ್ಠೆ ಮೆರೆದರು.

ಹಾಲರವಿ, ಬಾಯಿಬೀಗ, ಕೊಂಡೋತ್ಸವ, ಕಬಡ್ಡಿ, ಕುಸ್ತಿ, ಮೆರವಣಿಗೆ ಹೀಗೆ ಹಲವಾರು ಧಾರ್ಮಿಕ ಕಾರ್ಯಕ್ರಮಗಳ ಮೂಲಕ ಮಹದೇಶ್ವರ ಸ್ವಾಮಿ ಜಾತ್ರೆ ಯಶಸ್ವಿಯಾಗಿ ನಡೆಯಿತು. ಮಂಗಳ ವಾದ್ಯ, ತಮಟೆ ಹಾಗೂ ಇನ್ನಿತರೆ ವಾದ್ಯಗಳು ದೇವರ ಉತ್ಸವದಲ್ಲಿ ಮೊಳಗಿದವು.

ಕುಂಬಾರಕೊಪ್ಪಲಿನಲ್ಲಿ ಅ.22ರ ಬುಧವಾರ ರಾತ್ರಿ 7ಕ್ಕೆ ತಿಪ್ಪಾಜಿ ಕೊಳದಲ್ಲಿ ಮಹದೇಶ್ವರ ಸ್ವಾಮಿ ಮಜ್ಜನ ನೆರವೇರಿತು. ಅಲ್ಲಿಂದ ಮಹದೇಶ್ವರ ಸ್ವಾಮಿ ಉತ್ಸವ ಮೂರ್ತಿ ಹೊರಟಿತು. ಈ ವೇಳೆ ಭಕ್ತರು ಹಾಲರವಿ ಮತ್ತು ಬಾಯಿ ಬೀಗದ ಹರಕೆ ನೆರವೇರಿಸಿದರು. ಉತ್ಸವವು ಊರಿನ ಪ್ರಮುಖ ಬೀದಿಗಳ ಮುಖಾಂತರ ಶ್ರೀ ಮಹದೇಶ್ವರ ಸ್ವಾಮಿ ದೇವಸ್ಥಾನಕ್ಕೆ ಆಗಮಿಸಿತು. ಅ.23ರ ಗುರುವಾರ ಬೆಳಗಿನ ಜಾವ 2 ಗಂಟೆಗೆ ಶ್ರೀ ಮಹದೇಶ್ವರ ಸ್ವಾಮಿಯ ಹುಲಿ ವಾಹನೋತ್ಸವವು ದೇವಸ್ಥಾನದಿಂದ ಹೊರಟು ಊರಿನ ಪ್ರಮುಖ ಬೀದಿಗಳ ಮೂಲಕ ಹಾದು ಅಂದು ಮಧ್ಯಾಹ್ನ 1 ಗಂಟೆಗೆ ದೇವಸ್ಥಾನದ ಆವರಣ ತಲುಪಿತು.

ದೇವಾಲಯದ ಆವರಣದಲ್ಲಿ ಮಧ್ಯಾಹ್ನ 1.15 ಗಂಟೆಗೆ ಕೊಂಡೋತ್ಸವ ಯಶಸ್ವಿಯಾಗಿ ನೆರವೇರಿತು. ನೂರಾರು ಭಕ್ತರು ಕೊಂಡದ ಮೇಲೆ ನಡೆಯುವ ಮೂಲಕ ಭಕ್ತಿಯ ಪರಾಕಾಷ್ಠೆ ತಲುಪಿದರು.

ಮಧ್ಯಾಹ್ನ 1 ಗಂಟೆಗೆ ಮಹದೇಶ್ವರ ಸಮುದಾಯ ಭವನದಲ್ಲಿ ಸಾರ್ವಜನಿಕರಿಗೆ ಅನ್ನಸಂತರ್ಪಣೆಯನ್ನು ಏರ್ಪಡಿಸಲಾಗಿತ್ತು. ಸುಮಾರು 20 ಸಾವಿರಕ್ಕೂ ಹೆಚ್ಚು ಮಂದಿ ಪ್ರಸಾದ ಸೇವಿಸಿದರು. ಮಧ್ಯಾಹ್ನ 4 ಗಂಟೆಯವರೆಗೂ ಅನ್ನಸಂತರ್ಪಣೆ ಕಾರ್ಯ ಜರುಗಿತ್ತು. ನೂರಾರು ಜನರು ಹುಲಿವಾಹನದ ಮೂರ್ತಿಯನ್ನು ಹೊತ್ತು ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿದ್ದುದು ಎಲ್ಲರ ಗಮನ ಸೆಳೆಯಿತು.

ಶಾಸಕರಾದ ಕೆ.ಹರೀಶ್ ಗೌಡ, ಜಿ.ಡಿ. ಹರೀಶ್ ಗೌಡ ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಪೈ.ಶ್ರೀನಿವಾಸ, ರಾಮ್ ಪ್ರಸಾದ್, ಪೈ.ಶರತ್, ಪೈ. ಹೊಸಹಳ್ಳಿ ಶಿವು, ಅನಿಲ್, ಭೈರಪ್ಪ, ಮಂಜುನಾಥ್, ಪ್ರಸನ್ನ, ವೆಂಕಟೇಶ್, ಪೂ. ಸಿಂಗ್ರಿ ಶ್ರೀನಿವಾಸ್, ಚೇತನ್, ಕೇಬಲ್ ನಾಗಣ್ಣ, ಟೆಂಟ್ ರವಿ, ರವಿ ಮಾಮ ಸೇರಿದಂತೆ ಗ್ರಾಮಸ್ಥರು ಪಾಲ್ಗೊಂಡಿದ್ದರು.

ಕುಸ್ತಿಪಟುಗಳ ಕಮಾಲ್: ಅಖಾಡಕ್ಕಿಳಿದ ಕುಸ್ತಿ ಪಟುಗಳು ಪರಸ್ಪರ ತೊಡೆ ತಟ್ಟುತ್ತಾ, ಪಟ್ಟಿಗೆ ಪ್ರತಿಪಟ್ಟು ಹಾಕಿದರು. ಪರಸ್ಪರ ಮದಗಜಗಳಂತೆ ಕಾದಾಡುವ ಮೂಲಕ ನೆರೆದಿದ್ದ ಜನ ಸಮೂಹವನ್ನು ಆಕರ್ಷಿಸುವಲ್ಲಿ ಯಶಸ್ವಿಯಾದರು.

ಶ್ರೀ ಮಹದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀ ಮಹದೇಶ್ವರ ಕುಸ್ತಿ ಸೇವಾ ಸಂಘದ ವತಿಯಿಂದ ಕುಂಬಾರಕೊಪ್ಪಲಿನ ಹಳ್ಳಿಕಟ್ಟೆ(ಕೆಂಪೇಗೌಡ ಕ್ರೀಡಾಂಗಣ) ನಡೆದ ಕುಸ್ತಿ ಪಂದ್ಯಾವಳಿಯಲ್ಲಿ ಕಂಡುಬಂದ ದೃಶ್ಯಗಳಿವು.

8ರಿಂದ 16 ವರ್ಷದೊಳಗಿನ ಬಾಲ ಪೈಲ್ವಾನರಿಂದ ಹಿಡಿದು 40ರ ಹರೆಯದ ಪೈಲ್ವಾನರವರೆಗೆ ಮಟ್ಟಿಯಲ್ಲಿ ಕಾದಾಡುವ ಮೂಲಕ ತೋಳ್ಬಲ ಪ್ರದರ್ಶಿಸಿದರು.

ಕುಸ್ತಿ ಪ್ರಿಯರು ತಮ್ಮ ನೆಚ್ಚಿನ ಪೈಲ್ವಾನರಿಗೆ ದೂರದಿಂದಲೇ ಸಲಹೆಗಳನ್ನು ನೀಡುತ್ತಾ ಚಿತ್ ಮಾಡು ಎಂದು ಹುರಿದುಂಬಿಸಿದರು. ಪಂದ್ಯಾವಳಿಯಲ್ಲಿ ಮೈಸೂರಿನ ನಜರಬಾದ್ ಪೈಲ್ವಾನ್ ಚೇತನ್ ಗೌಡ ಮತ್ತು ಬೆಂಗಳೂರು ಪೈಲ್ವಾನ್ ಸೂಫಿಯಾನ್ ನಡುವೆ ಸುಮಾರು ಒಂದು ಗಂಟೆಗಳ ಕಾದಾಟ ನಡೆಯಿತು. ಆದರೆ, ಈ ಪಂದ್ಯ ಡ್ರಾನಲ್ಲಿ ಅಂತ್ಯಗೊಂಡಿತು.

ಚಾಮರಾಜ ಕ್ಷೇತ್ರದ ಶಾಸಕ ಹರೀಶ್ ಗೌಡ ಕುಸ್ತಿ ಪಂದ್ಯಾವಳಿಗೆ ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿದರು. ಹುಣಸೂರು ಕ್ಷೇತ್ರದ ಶಾಸಕ ಜಿ.ಟಿ.ಹರೀಶ್ ಗೌಡ ಕುಸ್ತಿ ಪಂದ್ಯಾವಳಿಯಲ್ಲಿ ಗೆದ್ದ ಪೈಲ್ವಾನರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ನಗರಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್, ಮಲೆ ಮಹದೇಶ್ವರ ಸಂಘದ ಸಹ ಕಾರ್ಯದರ್ಶಿ ಭೈರಪ್ಪ, ಅನಿಲ್ ಕುಮಾರ್, ರಾಮ್ ಪ್ರಸಾದ್, ಪ್ರಸನ್ನ ಡಿ.ಸಿ.ಶ್ರೀನಿವಾಸ್, ಹೊಸಹಳ್ಳಿ ಶಿವಣ್ಣ, ಮಲ್ಲುಸ್ವಾಮಿ, ಮಂಜಣ್ಣ, ಪ್ರಹ್ಲಾದ್ ರಾವ್, ಕೆಎಸ್ ಆರ್‌ಟಿಸಿ ಕೃಷ್ಣ, ಶಿವಕುಮಾರ್, ಕಿರಣ್, ರವೀಶ್ ಹಾಗೂ ಮುಖಂಡರು ಹಾಜರಿದ್ದರು.

ಎರಡನೇ ಏಕದಿನ ಪಂದ್ಯದಲ್ಲೂ ಸೋತು ಸರಣಿ ಕೈಚೆಲ್ಲಿದ ಭಾರತ: ಆಸೀಸ್‌ಗೆ 2–0 ಮುನ್ನಡೆ



ಅಡಿಲೇಡ್ ಅ.23(ವಿವಿಹೆಚ್)– ಆಡಂ ಜಂಪಾ ಹಾಗೂ ಜೇವಿಯರ್ ಬಾರ್ಟ್ಲೆಟ್ ಅವರ ಮಾರಕ ದಾಳಿಗೆ ನಲುಗಿದ ಭಾರತ ಎರಡನೇ ಏಕದಿನ ಪಂದ್ಯದಲ್ಲಿಯೂ 2 ವಿಕೆಟ್‌ಗಳಿಂದ ಸೋಲನ್ನನುಭವಿಸಿತು. ಆ ಮೂಲಕ 3 ಏಕದಿನ ಪಂದ್ಯಗಳ ಸರಣಿಯಲ್ಲಿ 2–0 ಅಂತರದಿಂದ ಸೋಲು ಕಾಣುವ ಮೂಲಕ ಸರಣಿ ಕೈಚೆಲ್ಲಿತು.

ಇಲ್ಲಿನ ಓವಲ್ ಮೈದಾನದಲ್ಲಿ ನಡೆದ ಎರಡನೇ ಪಂದ್ಯದಲ್ಲಿ ಭಾರತ 50 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 264ರನ್‌ಗಳ ಸಾಧಾರಣ ಗುರಿ ಕಲೆಹಾಕಿತು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಇಳಿದ ಭಾರತಕ್ಕೆ ಆರಂಭಿಕ ಆಘಾತ ಎದುರಾಯಿತು. ನಾಯಕ ಶುಬ್‌ಮನ್ ಗಿಲ್ 9(9) ರನ್ ಗಳಿಸಿ ಬಾರ್ಟ್ಲೆಟ್ ವಿಕೆಟ್ ಒಪ್ಪಿಸಿ ಹೊರನಡೆದರು. ಬಳಿಕ ಬಂದ ವಿರಾಟ್ ಕೊಹ್ಲಿ ಇದೇ ಓವರ್‌ನಲ್ಲಿ 4 ಎಸೆತಗಳನ್ನು ಎದುರಿಸಿ ಡಕ್‌ಔಟ್ ಆಗುವ ಮೂಲಕ ಮತ್ತೊಮ್ಮೆ ನಿರಾಸೆ ಮೂಡಿಸಿದರು.

ಮತ್ತೊಂದೆಡೆ ತಂಡದಲ್ಲಿ ತಮ್ಮ ಸ್ಥಾನ ಉಳಿಸಿಕೊಳ್ಳುವ ಒತ್ತಡದಲ್ಲಿರುವ ರೋಹಿತ್ ಶರ್ಮಾ ಈ ಪಂದ್ಯದಲ್ಲಿ ಲಯ ಕಂಡುಕೊಂಡರು. ಅವರು 97ಎಸೆತಗಳಲ್ಲಿ 7 ಬೌಂಡರಿ, 2 ಸಿಕ್ಸರ್ ಸಹಿತ 73 ರನ್ ಗಳಿಸಿ ಔಟಾದರು. ಇವರಿಗೆ ಸಾಥ್ ನೀಡಿದ ಶ್ರೇಯಸ್ ಅಯ್ಯರ್ 77 ಎಸೆತ ಎದುರಿಸಿ 7 ಬೌಂಡರಿ ಸಹಿತ 61 ರನ್ ಚಚ್ಚಿದರು. ಉಳಿದಂತೆ ಅಕ್ಷರ್ ಪಟೇಲ್ 44(41), ಕೆ.ಎಲ್.ರಾಹುಲ್ 11(15), ವಾಷಿಂಗ್‌ಟನ್ ಸುಂದರ್ 12(14), ನಿತೀಶ್ ಕುಮಾರ್ ರೆಡ್ಡಿ 8(10), ಅರ್ಶ್‌ದೀಪ್ ಸಿಂಗ್ 13(14) ರನ್ ಗಳಿಸಿದರು.

ಕೊನೆಯಲ್ಲಿ ಅಬ್ಬರಿಸಿದ ಹರ್ಷಿತ್ ರಾಣಾ 18 ಎಸೆತಗಳಲ್ಲಿ 24 ರನ್ ಕಲೆಹಾಕಿ ಗಮನ ಸೆಳೆದರು.

ಆಸೀಸ್ ಪರ ಆಡಂ ಜಂಪಾ ಪ್ರಮುಖ 4 ವಿಕೆಟ್ ಕಬಳಿಸಿ ಮಿಂಚಿದರು. ಜೇವಿಯರ್ ಬಾರ್ಟ್ಲೆಟ್ 3, ಮಿಚೆಲ್ ಸ್ಟಾರ್ಕ್ 2 ವಿಕೆಟ್ ಕಿತ್ತರು.

ಈ ಮೊತ್ತ ಬೆನ್ನತ್ತಿದ ಆಸೀಸ್ ತಂಡಕ್ಕೆ ಮ್ಯಾಥ್ಯೂ ಶಾರ್ಟ್ ಮತ್ತು ಕೂಪರ್ ಕೊನೊಲಿ ಆಸರೆಯಾದರು. ಶಾರ್ಟ್ 78 ಎಸೆತಗಳಲ್ಲಿ 4 ಬೌಂಡರಿ 2 ಸಿಕ್ಸರ್ ಸಹಿತ 74 ರನ್ ಪೇರಿಸಿದರು. ಇತ್ತ ಕೊನೊಲಿ ಅಜೇಯರಾಗಿ ಉಳಿದು 53 ಎಸೆತಗಳಿಂದ 61 ರನ್ ಬಾರಿಸಿ ತಂಡದ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದರು. ಮ್ಯಾಟ್ ರೆನ್ಷಾ 30(30), ಮಿಚೆಲ್ ಓವೆನ್ 36(23) ಮತ್ತು ಟ್ರಾವಿಸ್ ಹೆಡ್ 28(40) ರನ್ ಬಾರಿಸಿ ತಂಡದ ಗೆಲುವಿಗೆ ಸಹಕರಿಸಿದರು.

ಟೀಂ ಇಂಡಿಯಾ ಪರ ಅರ್ಶ್‌ದೀಪ್ ಸಿಂಗ್, ವಾಷಿಂಗ್‌ಟನ್ ಸುಂದರ್ ಹಾಗೂ ಹರ್ಷಿತ್ ರಾಣಾ ತಲಾ ಎರಡು ವಿಕೆಟ್, ಮೊಹಮ್ಮದ್ ಸಿರಾಜ್ ಮತ್ತು ಅಕ್ಷರ್ ಪಟೇಲ್ ಒಂದೊಂದು ವಿಕೆಟ್ ಕಬಳಿಸಿದರು.

ಉತ್ತಮ ಬೌಲಿಂಗ್ ದಾಳಿ ಮಾಡಿ ಆಸೀಸ್ ಗೆಲುವಿಗೆ ಸಹಕರಿಸಿದ ಆಡಂ ಜಂಪಾ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಅ.26ರಂದು 'ಮೈಸೂರು ಡರ್ಬಿ (ಗ್ರೇಡ್ 1)–2025' ರೇಸ್

● ಡರ್ಬಿಯ ಸುವರ್ಣ ಮಹೋತ್ಸವ ಆವೃತ್ತಿಯ ಸಂಭ್ರಮ ● 1.13 ಕೋಟಿ ರೂ. ಒಟ್ಟು ಬಹುಮಾನ ● 7 ಕುದುರೆ ಭಾಗಿ



ಸಾಂದರ್ಭಿಕ ಚಿತ್ರ

ಮೈಸೂರು, ಅ.23(ಪಿಎಂ)– ಮೈಸೂರು ರೇಸ್ ಕ್ಲಬ್‌ನ ಮೈಸೂರಿನ ಪ್ರತಿಷ್ಠಿತ ರೇಸ್ 'ಮೈಸೂರು ಡರ್ಬಿ (ಗ್ರೇಡ್ 1)–2025' ಅ.26ರಂದು ಸಂಜೆ 4ಕ್ಕೆ ಮೈಸೂರು ರೇಸ್‌ಕೋರ್ಸ್‌ನಲ್ಲಿ ನಡೆಯಲಿದೆ. ಇದು ಮೈಸೂರು ಡರ್ಬಿ (ಗ್ರೇಡ್ 1)ಯ 50ನೇ ಆವೃತ್ತಿಯಾಗಿದೆ.

1.13 ಕೋಟಿ ರೂ. ಒಟ್ಟು ಬಹುಮಾನ ಮೊತ್ತ: 2025ರ ಮೈಸೂರು ಡರ್ಬಿ ಆವೃತ್ತಿಯಲ್ಲಿ ಬಹುಮಾನ ಮೊತ್ತವು 1.13 ಕೋಟಿ ದಾಖಲೆ ಮೊತ್ತವನ್ನು ಒಳಗೊಂಡಿದೆ. ಇದರಲ್ಲಿ 50 ಲಕ್ಷ ರೂ.ಗಳನ್ನು ಎಂಆರ್‌ಸಿ ನೀಡಲಿದೆ. ವಿಜೇತರು (ಮಾಲೀಕರು, ತರಬೇತುದಾರರು ಹಾಗೂ ಜಾಕಿ) 64.55 ಲಕ್ಷ ರೂ. ಪಡೆಯಲಿದ್ದು, ಎರಡನೇ ಸ್ಥಾನದಿಂದ 6ನೇ ಸ್ಥಾನ ಪಡೆದವರಿಗೆ ನಗದು ಬಹುಮಾನ ವಿತರಣೆಯೊಂದಿಗೆ 5.66 ಲಕ್ಷ ರೂ. ಬ್ರೀಡರ್ ಬೋನಸ್ ನೀಡಲಾಗುತ್ತದೆ.

ಈ ರೇಸ್‌ನ ವಿಜೇತರಿಗೆ 64,55,550 ರೂ. (ಮಾಲೀಕರಿಗೆ 53,25,580 ರೂ., ತರಬೇತುದಾರರಿಗೆ 6,45,252 ರೂ. ಹಾಗೂ ಜಾಕಿಗೆ 4,84,145 ರೂ.) ಬಹುಮಾನ ದೊರೆಯಲಿದೆ. ಅಂತೆಯೇ ದ್ವಿತೀಯ ಸ್ಥಾನಕ್ಕೆ ಒಟ್ಟು 21,51,750 ರೂ., ತೃತೀಯ ಸ್ಥಾನಕ್ಕೆ ಒಟ್ಟು 10,75,875 ರೂ., ನಾಲ್ಕನೇ ಸ್ಥಾನಕ್ಕೆ ಒಟ್ಟು 5,37,935 ರೂ., ಐದನೇ ಸ್ಥಾನಕ್ಕೆ ಒಟ್ಟು 3,22,760 ರೂ., 6ನೇ ಸ್ಥಾನಕ್ಕೆ ಒಟ್ಟು 2,15,180 ರೂ. ನಗದು ಬಹುಮಾನ ಲಭಿಸಲಿದೆ (ವಿಜೇತರ ಬಹುಮಾನಕ್ಕೆ ಉಲ್ಲೇಖಿಸಿರುವಂತೆ ಬಹುಮಾನದ ನಗದು ಮಾಲೀಕರು, ತರಬೇತುದಾರರು ಹಾಗೂ ಜಾಕಿಗೆ ಹಂಚಿಕೆಯಾಗಲಿದೆ). ವಿಜೇತರ ಬ್ರೀಡರ್ 5,66,250 ರೂ. ನಗದು ಬಹುಮಾನ ಗಳಿಸಲಿದ್ದು, ಇದೂ ಸೇರಿದಂತೆ ಒಟ್ಟು 1,13,25,000 ರೂ. ಒಟ್ಟು ಬಹುಮಾನದ ಮೊತ್ತವಾಗಿದೆ.

7 ಕುದುರೆ ಭಾಗಿ: ಬೆಂಗಳೂರು ಮತ್ತು ಮುಂಬೈನ ಪ್ರತಿಷ್ಠಿತ ಅಶ್ವಶಾಲೆಗಳ 7 ಕುದುರೆಗಳು ಪ್ರಸಕ್ತ ಸಾಲಿನ ಡರ್ಬಿಯಲ್ಲಿ ಪಾಲ್ಗೊಳ್ಳಲಿವೆ. ಅವುಗಳೆಂದರೆ, ಮಹ್ಲರ್ (ತರಬೇತುದಾರ–ಎಸ್.ಎಸ್.ಅಟ್ಟೊಲ್ಲಾಹಿ), ಮ್ಯಾಟಿಸ್ಸೆ (ಪಿ.ಶ್ರಾಫ್), ರೆಡ್ ಬಿಷಪ್ (ಪಿ.ಶ್ರಾಫ್), ಅನ್‌ಫರ್ಗೇಟಬಲ್ ಸ್ಟಾರ್ (ರಾಜೇಶ್ ನರೇಡು), ಮಾನ (ಡೇರಿಯಸ್ ಆರ್.ಬೈರಾಮ್ಜಿ), ಮೂನ್ ಸ್ಟಾರ್ (ಜಿ.ಅರವಿಂದ್) ಮತ್ತು ಮಿರಾಕಲ್ ಸ್ಟಾರ್ (ಜೇಮ್ಸ್ ಮೆಕ್‌ಕೌನ್).

ಮೈಸೂರು ಡರ್ಬಿ ದಿನದ ವೇಳಾಪಟ್ಟಿ: ಅ.26ರಂದು ಮಧ್ಯಾಹ್ನ 1 ಗಂಟೆಗೆ ರೇಸ್‌ಗಳು ಆರಂಭವಾಗಲಿವೆ. ಸಂಜೆ 4 ಗಂಟೆಗೆ ಮೈಸೂರು ಡರ್ಬಿ ಆರಂಭದೊಂದಿಗೆ ರೇಸ್ ಮುಕ್ತಾಯಗೊಳ್ಳಲಿದೆ. ಇತರ ರೇಸ್‌ಗಳ ವಿವರ, ರಾಯಲ್ ಕಲ್ಕತ್ತಾ ಟರ್ಫ್ ಕ್ಲಬ್ ಟ್ರೋಫಿ (ಡಿವಿಷನ್ I ಮತ್ತು II), ರಾಯಲ್ ವೆಸ್ಟರ್ನ್ ಇಂಡಿಯಾ ಟರ್ಫ್ ಕ್ಲಬ್ ಲಿಮಿಟೆಡ್ ಟ್ರೋಫಿ, ಮದ್ರಾಸ್ ರೇಸ್ ಕ್ಲಬ್ ಟ್ರೋಫಿ (I ಮತ್ತು II), ಬೆಂಗಳೂರು ಟರ್ಫ್ ಕ್ಲಬ್ ಟ್ರೋಫಿ, ಹೈದರಾಬಾದ್ ರೇಸ್ ಕ್ಲಬ್ ಟ್ರೋಫಿ, ದೆಹಲಿ ರೇಸ್ ಕ್ಲಬ್ ಟ್ರೋಫಿ.

> ಮೈಸೂರು ಡರ್ಬಿ (ಗ್ರೇಡ್ 1) ನಮ್ಮ ರೇಸಿಂಗ್ ಪರಂಪರೆಯ ಹೆಮ್ಮೆ. ಇದರಲ್ಲಿ ಶ್ರೇಷ್ಠತೆ, ಸೊಬಗು ಹಾಗೂ ಅಶ್ವಶಕ್ತಿಯ ಸಮ್ಮಿಲನವಿದೆ. ಈ ರೇಸ್‌ಗೆ ನಾವು ಸ್ಪರ್ಧಿಗಳು ಮತ್ತು ಅಭಿಮಾನಿಗಳನ್ನು ಸಮಾನವಾಗಿ ಸ್ವಾಗತಿಸುತ್ತಿದ್ದೇವೆ.
> –ಜಿ.ವೆಂಕಟೇಶ್, ಅಧ್ಯಕ್ಷರು ಹಾಗೂ ಹಿರಿಯ ಸ್ಟೀವರ್ಡ್, ಎಂಆರ್‌ಸಿ.

ಕೌಶಲ್ಯಗಳ ಉಚಿತ ಸ್ಪರ್ಧೆಯಲ್ಲಿ ಡರ್ಬಿಯ ಅಗ್ರ ನಾಲ್ಕು ಅಂತಿಮ ಸ್ಪರ್ಧಿಗಳನ್ನು ನಿಖರವಾದ ಕ್ರಮದಲ್ಲಿ ಊಹಿಸಲು ರೇಸಿಂಗ್ ಪೋಷಕರಿಗೆ ಆಹ್ವಾನ ಕಲ್ಪಿಸಲಾಗುತ್ತದೆ. ಇದಕ್ಕೆ ಮಾರುತಿ ಆಲ್ಟೊ ಕಾರು, ಹೀರೋ ಮೊಬೈಕ್ಸ್, ಐದು ಎಲೆಗೆಂಟ್ ಕೈಗಡಿಯಾರಗಳು ಬಹುಮಾನಗಳಾಗಿ ದೊರೆಯಲಿವೆ. ಸ್ಪರ್ಧೆಯ ನಮೂನೆಗಳು ಮತ್ತು ನಿಯಮಗಳ ವಿವರಗಳು ಪ್ರವೇಶ ದ್ವಾರದಲ್ಲಿ ಹಾಗೂ ಟೋಟಲೈಸೇಟರ್ ಕಚೇರಿಯಲ್ಲಿ ಲಭ್ಯವಿರಲಿವೆ. ಅಲ್ಲದೆ, 3,37,212 ರೂ. ಅನ್ನು ಜಾಕ್‌ಪಾಟ್ ಪೂಲ್‌ಗೆ ಸೇರಿಸಲಾಗುವುದು ಎಂದು ಎಂಆರ್‌ಸಿ ಪ್ರಕಟಣೆ ತಿಳಿಸಿದೆ

ಮೈಸೂರಲ್ಲಿ ಮಳೆಯ ನಡುವೆಯೂ ದೀಪಾವಳಿಯ ಭಕ್ತಿ–ಸಂಭ್ರಮಾಚರಣೆ



ದೀಪಾವಳಿ ಅಂಗವಾಗಿ ಅರಮನೆಯ ಸವಾರಿ ತೊಟ್ಟಿಯಲ್ಲಿ ಗೋ ಪೂಜೆ ನೆರವೇರಿಸಲಾಯಿತು.



ಇಸ್ಕಾನ್ ಸಂಸ್ಥೆಯಲ್ಲಿ ಶ್ರೀಕೃಷ್ಣನ ವಿಗ್ರಹದ ಮುಂದೆ ವಿವಿಧ ಬಗೆಯ ತಿನಿಸನ್ನು ನೈವೇದ್ಯಕ್ಕೆ ಇಟ್ಟಿರುವುದು.

ಮೈಸೂರು, ಅ.23(ಎಂಟಿವೈ)– ಮೈಸೂರಲ್ಲಿ ಮಳೆಯ ನಡುವೆಯೂ ಬುಧವಾರ ಬೆಳಕಿನ ಹಬ್ಬ ದೀಪಾವಳಿಯನ್ನು ಸಡಗರ–ಸಂಭ್ರಮದಿಂದ ಆಚರಿಸಲಾಯಿತು.

ದೀಪಾವಳಿಯ ಸಂಭ್ರಮದಲ್ಲಿದ್ದ ಜನರಿಗೆ ವರುಣ ದೇವ ತಣ್ಣೀರು ಎರಚಿದರೂ ಮೈಸೂರಿನ ವಿವಿಧೆಡೆ ಇರುವ ಮಲೆಮಹದೇಶ್ವರ ಸ್ವಾಮಿಯ ದೇವಾಲಯ ಸೇರಿದಂತೆ ವಿವಿಧ ದೇವಾಲಯಗಳಲ್ಲಿ ಸಾಂಪ್ರದಾಯಿಕ ಪೂಜಾ ಕೈಂಕರ್ಯಗಳು ಜರುಗಿದವು. ಬಲಿಪಾಡ್ಯಮಿ ದಿನವಾದ ಬುಧವಾರ ಬೆಳಗ್ಗೆ ಕೆಲ ಸಮಯ ಬಿಡುವು ನೀಡಿದ್ದ ಮಳೆರಾಯ ಮಧ್ಯಾಹ್ನದ ನಂತರ ಚುರುಕುಗೊಂಡಿತು. ಅದರಲ್ಲೂ ಸಂಜೆ ಬಳಿಕ ಬಿಟ್ಟು ಬಿಡದೆ ಸುರಿದ ಮಳೆ ಪಟಾಕಿ ಹೊಡೆಯಲು ಸಜ್ಜಾಗಿದ್ದವರ ಉತ್ಸಾಹ ಕುಗ್ಗಿಸಿತು. ಆದರೂ ದೇವಾಲಯಗಳಲ್ಲಿ ಸಾಂಪ್ರದಾಯಿಕ ಪೂಜಾ ಕಾರ್ಯಗಳು ನೆರವೇರಿದವು.

ಕೊಂಡೋತ್ಸವ: ದೀಪಾವಳಿ ಅಂಗವಾಗಿ ಮಹದೇಶ್ವರ ದೇವಾಲಯಗಳಲ್ಲಿ ಹಾಲರವಿ ಉತ್ಸವ, ಕೊಂಡೋತ್ಸವ ಜರುಗಿದವು. ಮಳೆ ನಡುವೆಯೂ ಭಕ್ತರು ದೇವಾಲಯಕ್ಕೆ ಬಂದು ದೀಪಾವಳಿ ಹಬ್ಬದ ವಿಶೇಷ ಪೂಜೆ ಸಲ್ಲಿಸಿದರು. ಮೈಸೂರಿನ ವಿವಿಧೆಡೆ ಸೇರಿದಂತೆ ಗ್ರಾಮೀಣ ಪ್ರದೇಶದ ಹಲವೆಡೆ ದೀಪಾವಳಿ ಅಂಗವಾಗಿ ಕೊಂಡೋತ್ಸವ ನೆರವೇರಿತು. ಮಳೆ ನಡುವೆಯೂ ಸೌದೆ ರಾಶಿಗೆ ಬೆಂಕಿಯಿಟ್ಟು ಕೆಂಡ ತಯಾರಿಸಿದ ನಂತರ ಕೊಂಡದ ಕುಳಿಗೆ ತಟ್ಟೆ, ಹರಕೆ ಹೊತ್ತವರೂ ಸೇರಿದಂತೆ ದೇವರ ಗುಡ್ಡರು ಕೊಂಡ ಹಾಯುವ ಮೂಲಕ ಭಕ್ತಿ ಪ್ರದರ್ಶಿಸಿದರು.

ಭಕ್ತರ ದಂಡು: ಮೈಸೂರಿನ ಕುಂಬಾರ ಕೊಪ್ಪಲು, ಪಡುವಾರಹಳ್ಳಿ, ಕೆ.ಟಿ.ಸ್ಟ್ರೀಟ್, ನಜ್ಜರ್‌ಬಾದ್, ಹಳ್ಳದಕೇರಿ, ಸುಣ್ಣದ ಕೇರಿ, ಮೂಡಲಹುಂಡಿ, ಬಡಗಲಹುಂಡಿ, ಸಿದ್ದಲಿಂಗಪುರ ಸೇರಿದಂತೆ ವಿವಿಧೆಡೆಯಿರುವ ಮಲೆ ಮಹದೇಶ್ವರ ದೇವಾಲಯಗಳಲ್ಲಿ ಭಕ್ತರ ದಂಡು ಹೆಚ್ಚಾಗಿತ್ತು. ಬೆಳಗ್ಗಿನಿಂದಲೇ ಭಕ್ತರು ಮಹದೇಶ್ವರರ ದೇವಾಲಯಗಳಿಗೆ ಆಗಮಿಸಿ ಪೂಜೆ ಸಲ್ಲಿಸಿದರು.

ಅರಮನೆ ಹಾಗೂ ಇಸ್ಕಾನ್‌ನಲ್ಲಿ ಕಾಮಧೇನು ಪೂಜೆ: ದೀಪಾವಳಿ ಹಿನ್ನೆಲೆಯಲ್ಲಿ ಮೈಸೂರು ಅರಮನೆಯಲ್ಲಿ ಕಾಮಧೇನು ಪೂಜೆ ನೆರವೇರಿಸಲಾಯಿತು. ಅರಮನೆಯ ಸವಾರಿ ತೊಟ್ಟಿಯಲ್ಲಿ ಒಂದು ಜೋಡಿ ಗೋವನ್ನು ಕರೆಸಿ, ಶಾಸ್ತ್ರೋಕ್ತವಾಗಿ ಪೂಜೆ ನೆರವೇರಿಸಲಾಯಿತು. ಅರಮನೆಯ ಪುರೋಹಿತರು ಬುಧವಾರ ಬೆಳಗ್ಗೆ 10.30ರಲ್ಲಿ ಜೋಡಿ ಗೋವಿಗೆ ಪೂಜೆ ಸಲ್ಲಿಸಿದರು.

ಜಯನಗರದಲ್ಲಿರುವ ಇಸ್ಕಾನ್ ದೇವಾಲಯದಲ್ಲಿ ಗೋ ಪೂಜೆ ನೆರವೇರಿಸಲಾಯಿತು. ಗೋವುಗಳಿಗೆ ವಿವಿಧ ಹಣ್ಣು ಹಾಗೂ ತಿನಿಸು ಸಮರ್ಪಿಸಿ ಪೂಜೆ ಸಲ್ಲಿಸಲಾಯಿತು. ಬಳಿಕ ಶ್ರೀಕೃಷ್ಣನ ವಿಗ್ರಹದ ಮುಂದೆ ನೂರಾರು ಬಗೆಯ ತಿನಿಸನ್ನು ಇಟ್ಟು ನೈವೇಧ್ಯ ಮಾಡಿ ಪೂಜಿಸಲಾಯಿತು. ಈ ಸಂದರ್ಭದಲ್ಲಿ ನೂರಾರು ಮಂದಿ ಇಸ್ಕಾನ್ ಭಕ್ತರು ಪಾಲ್ಗೊಂಡು ದರ್ಶನ ಪಡೆದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಡ್ಯೂಡ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ತಮ್ಮ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ಬೈಸನ್ (ತ)	4 ಪ್ರದರ್ಶನಗಳು
ಸಂಗಂ	
ಗ್ರೀನ್ (ಕ) + ಗಿಲ್‌ಮಾಲ್ (ಕ)	2+2 ಪ್ರದರ್ಶನಗಳು
ಲಿಡೋ	
ತಮ್ಮ (ಹಿಂ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಬಿಳಿಚುಕ್ಕಿ ಹಳ್ಳಿಹಕ್ಕಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	**ಕಾಂತಾರ ಚಾಪ್ಟರ್ 1(ಕ):** ಮ.1.00ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, **ಡ್ಯೂಡ್ (ತ):** ಬೆ.10.10ಕ್ಕೆ, ಸಂ.4.20ಕ್ಕೆ
ಸ್ಕ್ರೀನ್ 2	**ಬೈಸನ್ (ತ):** ಬೆ.10.00ಕ್ಕೆ, ಸಂಜೆ 4.15ಕ್ಕೆ, **ಡೀಸೆಲ್ (ತ):** ಮ.1.20ಕ್ಕೆ, **ತೆಲುಸು ಕದ (ತೆ):** ರಾ.7.35ಕ್ಕೆ. **ದಿ ಪೆಟ್ ಡಿಟೆಕ್ಟಿವ್ (ಇ):** ರಾ.10.20ಕ್ಕೆ
ಸ್ಕ್ರೀನ್ 3	**ಡ್ಯೂಡ್ (ತ):** ರಾ.7.20ಕ್ಕೆ, ರಾ. 10.15ಕ್ಕೆ, **ಕಾಂತಾರ ಚಾಪ್ಟರ್ 1(ಕ):** ಸಂ. 4.00ಕ್ಕೆ, **ಪ್ರೇಮಿಗಳ ಗಮನಕ್ಕೆ (ಕ):** ಬೆ.10.25ಕ್ಕೆ, **ಟೈಮ್ ಪಾಸ್ (ಕ):** ಮ.1.15ಕ್ಕೆ
ಸ್ಕ್ರೀನ್ 4	**ಕಾಂತಾರ ಚಾಪ್ಟರ್ 1(ಕ):** ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.

ನೆಕ್ಸಸ್ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 8.05ಕ್ಕೆ, 9.05ಕ್ಕೆ, 10.25ಕ್ಕೆ, 11.15ಕ್ಕೆ, ಮ: 12.15ಕ್ಕೆ, 2.40ಕ್ಕೆ, 3.40ಕ್ಕೆ, ಸಂಜೆ 6.05ಕ್ಕೆ, 6.55ಕ್ಕೆ, ರಾತ್ರಿ: 7.05ಕ್ಕೆ, 9.30ಕ್ಕೆ, 9.45ಕ್ಕೆ, 10ಕ್ಕೆ, 10.30ಕ್ಕೆ.
ಕಾಂತಾರ ಚಾಪ್ಟರ್ 1(ಹಿ): ಬೆ: 9.10ಕ್ಕೆ, ಮ.3.10ಕ್ಕೆ.
ಡ್ಯೂಡ್ (ತ): ಬೆ: 10ಕ್ಕೆ, ಸಂ: 4ಕ್ಕೆ, ರಾ: 10.20ಕ್ಕೆ
ಟೈಮ್ ಪಾಸ್ (ಕ): ಬೆ: 11.15ಕ್ಕೆ
ತೆಲುಸು ಕಾದಾ (ತೆ): ಮ: 12.20ಕ್ಕೆ, ರಾತ್ರಿ 7.20ಕ್ಕೆ
ಬೈಸನ್ ಕಾಳಮಂದಾನ್ (ತ): ಬೆ: ಮ: 12.40ಕ್ಕೆ, ಸಂಜೆ 6.35ಕ್ಕೆ
ಡೀಸೆಲ್ (ತ): ಮ: 1.40ಕ್ಕೆ
ಮಹಾಯೋಧ ರಾಮ (ಹಿ): ಮ: 1.50ಕ್ಕೆ
ಕೆ–ರ್‍ಯಾಂಪ್ (ತೆ): ಸಂ: 4.15ಕ್ಕೆ, ರಾ: 10.10ಕ್ಕೆ
ಮಿತ್ರ ಮಂಡಳಿ (ತೆ): ಸಂ: 4.40ಕ್ಕೆ
ಗುಡ್ ಫಾರ್ಚ್ಯೂನ್ (ಇ): ಸಂ: 7.30ಕ್ಕೆ

ಗರುಡ ಮಾಲ್

ಕಾಂತಾರ ಚಾಪ್ಟರ್ 1(ಕ) : ಬೆ: 8.20ಕ್ಕೆ, 9.05ಕ್ಕೆ, 9.40ಕ್ಕೆ, 11.30ಕ್ಕೆ, ಮ: 12.15ಕ್ಕೆ, 2.55ಕ್ಕೆ, 3.40ಕ್ಕೆ, ಸಂ: 6.20ಕ್ಕೆ, 7.05ಕ್ಕೆ, ರಾ: 9.45ಕ್ಕೆ, 10.30ಕ್ಕೆ
ಪ್ರೇಮಿಗಳ ಗಮನಕ್ಕೆ (ಕ): ಬೆ: 11.05ಕ್ಕೆ
ಡ್ಯೂಡ್ (ತ): ಮ: 12.50ಕ್ಕೆ, ರಾ: 7.10ಕ್ಕೆ
ಟೈಮ್ ಪಾಸ್ (ಕ): ಮ: 1.50ಕ್ಕೆ
ಬೈಸನ್ ಕಾಳಮಂದಾನ್ (ತ): ಮ: 3.40ಕ್ಕೆ, ರಾ.10.05ಕ್ಕೆ
ತೆಲುಸು ಕಾದಾ (ತೆ): ಮ: 4.30ಕ್ಕೆ
ಕೆ–ರ್‍ಯಾಂಪ್ (ತೆ): ರಾ: 7.20ಕ್ಕೆ
ಮಿತ್ರ ಮಂಡಳಿ (ತೆ): ರಾ: 10.15ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕನ್ನಡ ಚಿತ್ರರಂಗ ಇನ್ನು ಸಮೃದ್ಧವಾಗಿ ಬೆಳೆಯಬೇಕು

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆಶಯ



ಕಾರ್ಯಕ್ರಮದಲ್ಲಿ ರಾಜೇಂದ್ರ ಸಿಂಗ್ ಬಾಬು ಕುರಿತ ಪುಸ್ತಕ ಬಿಡುಗಡೆ ಮಾಡಲಾಯಿತು.

ಬೆಂಗಳೂರು, ಅ.23(ಕೆಎಂಶಿ)–ಕನ್ನಡ ಚಿತ್ರರಂಗ ಸಮೃದ್ಧವಾಗಿ ಬೆಳೆಯಬೇಕಾದರೆ ನಾಯಕ ನಟರು ಹೆಚ್ಚು ಸಿನಿಮಾಗಳನ್ನು ಮಾಡಬೇಕು ಹಾಗೂ ಹೆಚ್ಚು ನಾಯಕ ನಟರು ಚಿತ್ರ ರಂಗಕ್ಕೆ ಬರಬೇಕು ಎಂದು ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ಹೇಳಿದರು.

ಕನ್ನಡ ಚಿತ್ರರಂಗಕ್ಕೆ ಭವ್ಯ ಇತಿಹಾಸವಿದೆ. ಗಟ್ಟಿ ಅಡಿಪಾಯವಿದೆ. ಡಾ.ರಾಜ್‌ಕುಮಾರ್, ಡಾ.ವಿಷ್ಣುವರ್ಧನ್ ಹಾಗೂ ಅಂಬರೀಶ್ ಕನ್ನಡ ಚಿತ್ರರಂಗವನ್ನು ದೊಡ್ಡ ಮಟ್ಟಕ್ಕೆ ಬೆಳೆಸಿದ್ದಾರೆ. ಇದು ಇನ್ನಷ್ಟು ಭದ್ರವಾಗಬೇಕಾದರೆ ಹೆಚ್ಚೆಚ್ಚು ಸಿನಿಮಾಗಳು ಬರಬೇಕು. ಆ ಶ್ರೇಷ್ಠ ನಟರ ಪರಂಪರೆ ಮುಂದುವರೆಸಿಕೊಂಡು ಹೋಗಬೇಕು ಎಂದರು.

ಕನ್ನಡ ಚಿತ್ರರಂಗದ ಹಿರಿಯ ನಿರ್ದೇಶಕ ಎಸ್.ವಿ.ರಾಜೇಂದ್ರ ಸಿಂಗ್ ಬಾಬು ನಿರ್ದೇಶಕರಾಗಿ 50 ವರ್ಷ ಪೂರೈಸಿದ ಸಂದರ್ಭದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ಮಾತೃಭಾಷೆ ಸಿನಿಮಾಗಳು ಕಡಿಮೆ ಪ್ರಮಾಣದಲ್ಲಿ ಬರುತ್ತಿದ್ದು, ಡಬ್ಬಿಂಗ್ ಸಿನಿಮಾಗಳನ್ನು ಜನ ನೋಡುತ್ತಿದ್ದಾರೆ. ನಮ್ಮಲ್ಲಿ ಉತ್ತಮ ನಿರ್ದೇಶಕರು, ಉತ್ತಮ ಕಥೆಗಳು ಲಭ್ಯ ಇರುವುದರಿಂದ ನಮ್ಮ ಚಿತ್ರಗಳು ದೊಡ್ಡ ಸಂಖ್ಯೆಯಲ್ಲಿ ಬರಲಿ ಎನ್ನುವುದು ನನ್ನ ಆಶಯ ಎಂದರು.

ಕನ್ನಡ ಚಿತ್ರರಂಗ ಎತ್ತರದ ಸಾಧನೆಗಳನ್ನು ಮಾಡುತ್ತಿದೆ. ಉತ್ತಮ ಸಿನಿಮಾಗಳು ಬರುತ್ತಿವೆ. ಭಾರತೀಯ ಚಿತ್ರರಂಗ ನಮ್ಮನ್ನು ಬೆರಗಿನಿಂದ ನೋಡುತ್ತಿದೆ. ಆದರೂ, ಕನ್ನಡ ಚಿತ್ರಗಳು ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಯಶಸ್ಸು ಸಾಧಿಸ ಬೇಕು. ನಿರ್ಮಾಪಕರು ಉತ್ತಮ ಚಿತ್ರಗಳನ್ನು ನಿರ್ಮಿಸಲು ಅವಕಾಶ ಆಗಬೇಕು. ಹಿರಿಯ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ನಿರ್ದೇಶಕರಾಗಿ, ನಿರ್ಮಾಪಕರಾಗಿ ಐದು ದಶಕಗಳ ಕಾಲ ನಿಲ್ಲುವುದು ಸುಲಭದ ಮಾತಲ್ಲ. ತಮ್ಮ ಇಡೀ ಕುಟುಂಬವನ್ನೇ ಚಿತ್ರರಂಗಕ್ಕೆ ಸಮರ್ಪಣೆ ಮಾಡಿಕೊಂಡ ಕುಟುಂಬ ಅವರದು. ನಾನು ಚಿತ್ರ ಪ್ರದರ್ಶಕನಾಗಿ, ಹಂಚಿಕೆದಾರನಾಗಿ ಹಾಗೂ ನಿರ್ಮಾಪಕನಾಗಿ ಕೆಲಸ ಮಾಡಿದ್ದೇನೆ. ರಾಜೇಂದ್ರ ಸಿಂಗ್ ಬಾಬು ಚಿತ್ರಗಳನ್ನೂ ನಾನು ಹಂಚಿಕೆ ಮಾಡಿ ಪ್ರದರ್ಶಿಸಿದ್ದೇನೆ ಎಂದರು.

ಶಬರಿಮಲೆ ಅಯ್ಯಪ್ಪನ ದರ್ಶನ ಪಡೆದ ರಾಷ್ಟ್ರಪತಿ ದ್ರೌಪದಿ ಮುರ್ಮು

ಪತ್ತನಂತಿಟ್ಟ, ಅ.23– ಇಲ್ಲಿನ ಶಬರಿಮಲೆಯಲ್ಲಿರುವ ಅಯ್ಯಪ್ಪ ದೇಗುಲದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಬುಧವಾರ ಪ್ರಾರ್ಥನೆ ಮಾಡಿದರು.

ಆ ಮೂಲಕ ದೇಶದ ಮಹಿಳಾ ಮುಖ್ಯಸ್ಥರೊಬ್ಬರು ಇದೇ ಮೊದಲ ಬಾರಿಗೆ ಈ ದೇಗುಲದಲ್ಲಿ ಪ್ರಾರ್ಥನೆ ಸಲ್ಲಿಸಿದಂತಾಯಿತು. ಅಲ್ಲದೇ ದ್ರೌಪದಿ ಮುರ್ಮು ಅವರು ಶಬರಿಮಲೆಗೆ ಭೇಟಿ ನೀಡಿದ ದೇಶದ ಎರಡನೇ ರಾಷ್ಟ್ರಪತಿ. ಈ ಹಿಂದೆ 1970ರಲ್ಲಿ ಅಂದಿನ ರಾಷ್ಟ್ರಪತಿ ವಿ.ವಿ.ಗಿರಿಯವರು ಶಬರಿಮಲೆಗೆ ಭೇಟಿ ನೀಡಿದ್ದರು. ಅವರು ಡೋಲಿ ಮೂಲಕ ಅಯ್ಯಪ್ಪ ಸನ್ನಿಧಿಗೆ ತೆರಳಿದ್ದರು.

ಬುಧವಾರ ಬೆಳಿಗ್ಗೆ 11 ಗಂಟೆಗೆ ಪಂಪಾ ತಲುಪಿದ ಅವರು, ಪಂಪಾ ನದಿಯಲ್ಲಿ ಕಾಲು ತೊಳೆದು, ಅಲ್ಲಿಯೇ ಸಮೀಪ ಇರುವ ಗಣಪತಿ ದೇಗುಲ ಸಹಿತ ಹಲವು ದೇವಸ್ಥಾನಗಳಿಗೆ ಭೇಟಿ ನೀಡಿದರು. ಗಣಪತಿ ದೇಗುಲದ ಮೇಲ್ ಶಾಂತಿ ವಿಷ್ಣು ನಂಬೂದರಿಯವರು ಮುರ್ಮು ಅವರ 'ಇರುಮುಡಿ' ಕಟ್ಟಿದರು. ಮುರ್ಮು ಕಪ್ಪು ಸೀರೆ ಧರಿಸಿದ್ದರು.

ರಾಷ್ಟ್ರಪತಿ ಜೊತೆಗೆ ಎಡಿಸಿ ಸೌರಭ್ ಎಸ್. ನಾಯರ್, ಪಿಎಸ್‌ಒ ವಿನಯ್ ಮಥೂರ್, ಅಳಿಯ ಗಣೇಶ್ ಚಂದ್ರ ಹೊಂಬ್ರಮ್ ಕೂಡ ಇರುಮಡಿ ಹೊತ್ತು ದರ್ಶನ ಪಡೆದರು ಎಂದು ಜಿಲ್ಲೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶಬರಿಮಲೆಯಲ್ಲಿ ಸ್ವಾಮಿ ಅಯ್ಯಪ್ಪನ ದರ್ಶನ ಪಡೆದರು

ರಾಷ್ಟ್ರಪತಿಗಳು ಇರುಮುಡಿ ಹೊತ್ತು ದೇಗುಲದ ಸಮೀಪ ಈಡುಗಾಯಿ ಒಡೆದರು. ನಾಲ್ಕು ಚಕ್ರದ ವಿಶೇಷ ವಾಹನದ ಮೂಲಕ ಸನ್ನಿಧಾನಕ್ಕೆ ತೆರಳಿದರು. ಸನ್ನಿಧಾನದ 18 ಮೆಟ್ಟಿಲುಗಳನ್ನು ಏರಿದರು. ಅಲ್ಲಿ ಅವರನ್ನು ದೇವಸ್ವಂ ಸಚಿವ ವಿ.ಎನ್ ವಾಸವನ್ ಹಾಗೂ ಟ್ರಾವಂಕೂರ್ ದೇವಸ್ವಂ ಬೋರ್ಡ್ ನ (ಟಿಡಿಬಿ) ಅಧ್ಯಕ್ಷ ಪಿ.ಎಸ್ ಪ್ರಶಾಂತ್ ಸ್ವಾಗತಿಸಿದರು. ದೇವಸ್ಥಾನದ ತಂತ್ರಿ ಕಂದರಾರು ಮಹೇಶ್ ಮೊಹನಾರು ಅವರು ರಾಷ್ಟ್ರಪತಿಗೆ ಪೂರ್ಣಕುಂಭ ಸ್ವಾಗತ ನೀಡಿದರು.

ದರ್ಶನ ಪಡೆದ ಬಳಿಕ ದೇಗುಲದ ಮೆಟ್ಟಿಲಿನಲ್ಲಿ ಇರುಮುಡಿ ಇರಿಸಿದರು. ಅದನ್ನು ಮೇಲ್ ಶಾಂತಿ ಪೂಜೆಗಾಗಿ ತೆಗೆದುಕೊಂಡು ಹೋದರು. ದರ್ಶನದ ಬಳಿಕ ಸಮೀಪ ಇರುವ ಮಲಿಕಪ್ಪುರಂ ಸಹಿತ ಹಲವು ದೇಗುಲಗಳಿಗೆ ಭೇಟಿ ನೀಡಿದರು.

ಅ.28ರಂದು ರಾಜ್ಯ ಪೊಲೀಸ್ ಸಿಬ್ಬಂದಿಗೆ ಪಿ–ಕ್ಯಾಪ್ ವಿತರಣೆ



ಪಿ–ಕ್ಯಾಪ್ ಪ್ರದರ್ಶಿಸುತ್ತಿರುವ ಸಿಎಂ ಸಿದ್ದರಾಮಯ್ಯ, ಗೃಹ ಸಚಿವ ಡಾ.ಜಿ.ಪರಮೇಶ್ವರ್ (ಸಂಗ್ರಹ ಚಿತ್ರ)

ಬೆಂಗಳೂರು, ಅ.23– ರಾಜ್ಯದ ಪೊಲೀಸ್ ಸಿಬ್ಬಂದಿಗೆ ಅಕ್ಟೋಬರ್ 28 ರಂದು ಪಿ–ಕ್ಯಾಪ್ (P-cap) ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗೆ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸಿಎಂ ಸಿದ್ದರಾಮಯ್ಯ ಮತ್ತು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಪಿ–ಕ್ಯಾಪ್ ಘೋಷಣೆ ಹಾಗೂ ವಿತರಣಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮದ ಹಿನ್ನೆಲೆಯಲ್ಲಿ ಎಲ್ಲಾ ಕಮೀಷನರೇಟ್ ಹಾಗೂ ಜಿಲ್ಲೆಗಳಿಂದ ತಲಾ ಒಬ್ಬರು ಪಿಸಿ ಅಥವಾ ಹೆಚ್‌ಸಿಗಳನ್ನು ಸದರಿ ಕಾರ್ಯಕ್ರಮಕ್ಕೆ ನಿಯೋಜಿಸಿ ಅ.27 ಬೆಳಗ್ಗೆ 9ಗಂಟೆಗೆ ವಿಧಾನ ಸೌಧ ಭದ್ರತೆ ಡಿಸಿಪಿ ಅವರ ಮುಂದೆ ವರದಿ ಮಾಡಿಕೊಳ್ಳಲು ನಿರ್ದೇಶನ ನೀಡಲಾಗಿದೆ.

ಕರ್ನಾಟಕ ಪೊಲೀಸರ ತಲೆ ಮೇಲೆ ಕಾಣುವ ಬ್ರಿಟಿಷರ ಕಾಲದ ಟೋಪಿ ಮಾಯವಾಗಿ ಸ್ಮಾರ್ಟ್ ಪೀಕ್ ಹ್ಯಾಟ್ ಅಲಂಕರಿಸುವ ಕಾಲ ಸನ್ನಿಹಿತವಾಗಿದೆ. ಈಗಿರುವ ಸ್ಲೋಚ್ ಹ್ಯಾಟ್ ಬದಲಿಸುವ ಕೂಗು ಮೊದಲಿನಿಂದಲೂ ಕೇಳಿಬರುತ್ತಿತ್ತು. ಇದೀಗ ಪೊಲೀಸರ ಬಹುವರ್ಷಗಳ ಬೇಡಿಕೆ ಈಡೇರುವ ಸಮಯ ಸಮೀಪಿಸಿದೆ.

ಪ್ರಸ್ತುತ ಬಳಸುತ್ತಿರುವ ಸ್ಲೋಚ್ ಕ್ಯಾಪ್‌ನಿಂದ ಪೊಲೀಸ್ ಸಿಬ್ಬಂದಿಗೆ ಉಪಯೋಗಕ್ಕಿಂತ ಸಮಸ್ಯೆ ಜಾಸ್ತಿ ಆಗಿದೆ. ಪ್ರತಿಭಟನೆ ಅಥವಾ ಲಾಠಿ ಚಾರ್ಜ್ ಸಂದರ್ಭಗಳಲ್ಲಿ ಸ್ವಲ್ಪ ಜೋರಾಗಿ ಓಡಿದರೂ ಈ ಟೋಪಿಗಳು ತಲೆಯ ಮೇಲೆ ನಿಲ್ಲಲ್ಲ. ಇನ್ನು ಅಪರಾಧಿಗಳನ್ನು ಬೆನ್ನಟ್ಟುವ ಸಮಯದಲ್ಲಿ ಈ ಟೋಪಿಗಳನ್ನು ಹಾಕಿಕೊಂಡು ಸಾಗುವುದು ಕಷ್ಟ. ಹೀಗಾಗಿ ಸ್ಲೋಚ್ ಕ್ಯಾಪ್‌ಗಳನ್ನು ಬದಲಿಸಬೇಕೆಂಬ ಬೇಡಿಕೆ ಹಲವು ವರ್ಷಗಳ ಹಿಂದೆಯೇ ಕೇಳಿಬಂದಿತ್ತು.

ಅಲ್ಲದೆ, ಪ್ರಸ್ತುತ ಪೊಲೀಸ್ ಕಾನ್‌ಸ್ಟೇಬಲ್‌ಗಳು ಧರಿಸುತ್ತಿರುವ ಸ್ಲೋಚ್ ಟೋಪಿಯಿಂದಾಗಿ ಅವರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವ ಸಾಧ್ಯತೆಗಳ ಬಗ್ಗೆ ಇತ್ತೀಚೆಗೆ ಕೇಂದ್ರ ಆರೋಗ್ಯ ಇಲಾಖೆ ಎಚ್ಚರಿಕೆ ನೀಡಿತ್ತು. ಕೇರಳ, ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಅಲ್ಲಿನ ಪೊಲೀಸ್ ಹೆಡ್ ಕಾನ್‌ಸ್ಟೇಬಲ್ ಹಾಗೂ ಕಾನ್‌ಸ್ಟೇಬಲ್‌ಗಳಿಗೆ ಸ್ಮಾರ್ಟ್ ಪೀಕ್ ಕ್ಯಾಪ್‌ಗಳನ್ನು ನೀಡಲಾಗಿದೆ. ಹೀಗಾಗಿ ರಾಜ್ಯದಲ್ಲೂ ಪೊಲೀಸ್ ಸಿಬ್ಬಂದಿಗೆ ಪಿ–ಕ್ಯಾಪ್ ನೀಡಲು ಕರ್ನಾಟಕ ಸರ್ಕಾರ ಮುಂದಾಗಿದೆ.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲ್ಲೂಕು, ಶೀಳನೆರೆ ಹೋಬಳಿ, ನಾಡುಭೋಗನಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಜಯಲಿಂಗಪ್ಪ ರವರ ಧರ್ಮಪತ್ನಿ ಶ್ರೀಮತಿ ಯಶೋಧಮ್ಮ. ಎನ್.ಎಂ ರವರ ಇರಾದೆಯ ಮೇರೆಗೆ ಈ ಮೂಲಕ ಸಾರ್ವಜನಿಕವಾಗಿ ತಿಳಿಯಪಡಿಸುವುದೇನೆಂದರೆ. ನಮ್ಮ ಕಕ್ಷಿದಾರರು ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ದಿನಾಂಕ : 27–04–1983ರಂದು ನೋಂದಣಿ ಸಂಖ್ಯೆ 203/1983–84ರ ರೀತ್ಯಾ ನೋಂದಣಿಯಾಗಿದ್ದು, ಮತ್ತು ದಿನಾಂಕ 02–05–2005 ರಂದು ನೋಂದಣಿ ಸಂಖ್ಯೆ ಕೆಜಿಪಿ–1–00404/2005–06ರ ರೀತ್ಯಾ ನೋಂದಣಿಯಾಗಿದ್ದು, ಈ ಬಾಬ್ತು ಸದರಿ ಎರಡೂ ಕ್ರಯಪತ್ರಗಳು ಕೆ.ಆರ್.ಪೇಟೆಯ ಬಸ್ ನಿಲ್ದಾಣದಲ್ಲಿ ದಿನಾಂಕ : 01–10–2025ರಂದು ಕಳೆದು ಹೋಗಿರುತ್ತದೆ. ಹುಡುಕಲಾಗಿ ಸಿಕ್ಕಿರುವುದಿಲ್ಲ. ಆದ್ದರಿಂದ ಈ ನೋಂದಾಯಿತ ಎರಡೂ ಕ್ರಯಪತ್ರಗಳು ಯಾರಿಗಾದರೂ ಸಿಕ್ಕಿದ್ದಲ್ಲಿ ನಮಗಾಗಲೀ ಅಥವಾ ನಮ್ಮ ಕಕ್ಷಿದಾರರಿಗಾಗಲೀ ಅಥವಾ ನಮ್ಮ ವಕೀಲರಿಗಾಗಲೀ ತಲುಪಿಸತಕ್ಕದ್ದು, ಈ ವಿಚಾರಕ್ಕೆ ಸಂಬಂಧಪಟ್ಟಂತೆ ದೂರು ದಾಖಲಾಗಿರುವ ಮಂಡ್ಯ ಜಿಲ್ಲೆ ಆರಕ್ಷಕ ಠಾಣೆ ರಿಪೋರ್ಟ್ ನಂ. 1848630/ 2025 ದಿನಾಂಕ : 13–10–2025.

ಷೆಡ್ಯೂಲ್ ಸ್ವತ್ತು

ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲ್ಲೂಕು, ಕೆ.ಆರ್.ಪೇಟೆ ಪಟ್ಟಣ ಪಂಚಾಯಿತಿಯ, ಜಯನಗರ ಬಡಾವಣೆಯ ಅಸೆಸ್‌ಮೆಂಟ್ ನಂ. 952:ಬಿ ರಲ್ಲಿ ವಿಸ್ತೀರ್ಣ 80x33 ಅಡಿಗಳ ಅಳತೆಯ ಸ್ವತ್ತಿಗೆ ಚೆಕ್ಕುಬಂದಿ, ಪೂರ್ವಕ್ಕೆ : ಶಾಲಾ ಮೈದಾನ, ಪಶ್ಚಿಮಕ್ಕೆ : ಹೊಸಹೊಳಲು ರಸ್ತೆ, ಉತ್ತರಕ್ಕೆ: ದೊರೇಶ್ ರವರ ನಿವೇಶನ, ದಕ್ಷಿಣಕ್ಕೆ : ರಾಜೇನ ಹಳ್ಳಿ ರಾಜೇಗೌಡರ ಅಂಗಡಿ ಇರುತ್ತದೆ.

Sd/- S.B.Deepa, B.A. LL.B,
Advocate, KAR Roll No.2293/06
13th Cross, APMC Road, V.V.Nagar,
Kallahally Extension, Mandya-571401
Mob : 79750 41145 / 91412 64684
Date : 13.10.2025

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು